ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 24 ಸಂಚಿಕೆ 1

ಜನವರಿ-ಮಾರ್ಚ್ 1995

ಸಾಧನೆ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE : Kannada Quarterly of the Bangalore University, Bangalore. Vol. 24 No. I January—March 1995

ವಾರ್ಷಿಕ ಚಂದಾ :	ರೂ. 15-00	
ವಿದ್ಯಾರ್ಥಿಗಳಿಗೆ	ರೂ. 10-00	(ದೃಢೀಕರಣ ಪತ್ರವನ್ನು ಕಳುಹಿಸಬೇಕು)
ಆಜೀವ ಸದಸ್ಯತ್ವ	ರೂ. 150-00	

ಪ್ರಕಾಶಕರು :
ಎಸ್. ಕೆಂಡಗಣ್ಣಸ್ವಾಮಿ
ನಿರ್ದೇಶಕ
ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ, ಬೆಂಗಳೂರು

ಮುದ್ರಣ :
ಎಸ್. ಎಂ. ಹೊನ್ನಪ್ಪ
ಕಾರ್ಯನಿರ್ವಾಹಕ ನಿರ್ದೇಶಕ
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ

ಪರಿವಿಡಿ

ಪುಟ

ಶ್ರೀಮತಿಯ ಸ್ವಗತ (ಕವನ) 1
ಟಿ. ಯಲ್ಲಪ್ಪ

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಭಾಷಾವಿಜ್ಞಾನ ನಡೆದುಬಂದ ದಾರಿ ; ಸಿಂಹಾವಲೋಕನ 3
ವಿಲ್ಯಂ ಮಾಡ್ತ

ಮಹಾನಾಡು ಪ್ರಭುಗಳ ಸಾಮಾಜಿಕ ಆರ್ಥಿಕ ಕೊಡುಗೆಗಳು 16
ಪಿ. ವಿ. ಕೃಷ್ಣಮೂರ್ತಿ

ಒಂದು ಹೊಸ ಶಾಸನ, ಹೊಸ ವಿಗ್ರಹ 33
ಡಾ॥ ಹಂಪ. ನಾಗರಾಜಯ್ಯ

ಗಾಳಿಗೋಪುರ (ಕವನ) 38
ಹೊ. ನ. ನೀಲಕಂಠೇಗೌಡ

ಉಮ್ಮತ್ತೂರಿನ ಒಂದು ಹೊಸ ಶಾಸನ 40
ಎಂ. ಜಿ. ಮಂಜುನಾಥ

ಪ್ಲೇಟೋವಿನ ತಾತ್ತ್ವಿಕ ನಿಲುವು–ಒಂದು ಸ್ಥೂಲರೂಪ 44
ಡಾ॥ ಟಿ. ಬಿ. ಬಸವರಾಜು

ಕಾಳಿದಾಸನ 'ಮೇಘದೂತ'–ಒಂದು ಸಹೃದಯ ಚಿಂತನೆ 54
ರಾ. ಲಕ್ಷ್ಮೀನಾರಾಯಣ

ಶುಭೋದಯ (ಕವನ) 68
ಡಾ॥ ವಿಜಯ ಕುಮಾರ ಮಹಾನುಭಾವಿಗಳು

ಮೂರುಜಾವುದ ದೇವರು ಒಬ್ಬರೇ ಅಥವಾ ಹಲವರೇ ? ಒಂದು ಚಿಂತನೆ 69
ಡಾ॥ ಸಿ. ನಾಗಭೂಷಣ

ಇನ್‌ಫ್ಲಿಬ್‌ನೆಟ್ (INFLIBNET) ಗ್ರಂಥಾಲಯ ಮತ್ತು
ಮಾಹಿತಿ ಜಾಲ 80
ಉಮಾ ಜಗನ್ನಾಥ್

ಮಂಥನಗಳು

ಚಾಳುಕ್ಯ ಕುಲ ಮತ್ತು ಪುಲಕೇಸಿ 88
ಡಾ॥ ಹಂಪ. ನಾಗರಾಜಯ್ಯ

ಬೋಳಹ ಬೋಳಹ ಭಟಾರಾ-ಒಂದು ಅಭಿಪ್ರಾಯ 92
ಎಂ. ಮಾಧವ ಪೈ

ಶ್ರೀಮತಿಯ ಸ್ವಗತ

ಟಿ. ಯಲ್ಲಪ್ಪ

ಸ್ವಯಂ ಪ್ರಭೆಯಂತ ಹುಟ್ಟಲ್ಲಿ
ಮರುಹುಟ್ಟು ಪಡೆದು ಶ್ರೀಮತಿಯಾಗಿ
ವಜ್ರಜಂಘನಂಥ ಜಂಗಮನಲ್ಲಿ
ಸಂಗಮಕ್ಕೆಳಸಿ

ಬಂಧನವಿಲ್ಲದ ಬಂಧನದಲ್ಲಿ
ಸುಮಧುರ ಸುಂದರ ಕನಸು
ಕಣ್ಣಿವೆ ಸೀದು ಒಳಗೆಲ್ಲ
ಪ್ರೇಮಜ್ವರ ಹರಡಿ
ವಂಕಿನಡುವಲ್ಲಿ ಅವನ ಮಿದುಬೆರಳ
ಉಗುರು ತಗುಲಿ; ನವೆಹುಟ್ಟಿ
ಎದೆವೊಳಗಾಸಿ ಕಣ್ಣಿಗೆ ಬಂತೋ
ಕನಸರಾಸಿ

ಕೆನ್ನೆತಾವೆಲ್ಲ ಅವನ ಅಧರ
ಪಲ್ಲವಿ ಗುನುಗಿ
ಮಿದುವೆದೆಯ ತುಂಬಾ
ಮನ್ಮಥನ ಅಂಬುರಾಸಿ
ಅವನದೇ ಕನಸು ಜಂಬುಸವಾರಿ
ಬೊಂಬಾಟ ದೊಂಬರಾಟ
ನಾನು ಸಖಿತ್ತು, ಖುಷಿಪಟ್ಟೆ

ಕೃಷ್ಣಾಗರು ದೂಫ ಧೂಮ ನಿವಹ
ಕೃಷ್ಣೋರಗವ ಕೊಂದಂತೆ ಕೊಂದ
ಪರಿಯೆನಗೆ ಮಿಗಿಲದು
ಪ್ರಾಣವಲ್ಲಭನಿಗಿತ್ತ ಪ್ರಾಣ

ಪದ್ಮದ ರಾಗ ಪರಾಗ, ಅನುರಾಗ
ಗುನುಗಿ, ಒಡಲೊಳಗೆ
ವಜ್ರಜಂಘನದೊಂದು ಕುಡಿ ದಾಂಗುಡಿಸಿ
ಕಮರಿ ; ಕರ್ಮಪಾತಕಿ ನಾನು
ಭೋಗ ವೈಭವ ಕಿರಿದೆ ?
ಸಾವಿನಬ್ಬರ ಹಿರಿದು
ಮೂರು ಜೀವದ ಜೀವ
ಇನ್ನಿಲ್ಲ ರಾಮ ರಾಮ !

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಭಾಷಾವಿಜ್ಞಾನ ನಡೆದುಬಂದ ದಾರಿ : ಸಿಂಹಾವಲೋಕನ

ವಿಲ್ಯಂ ಮಾಡ್ತ

0. ಪ್ರವೇಶ

ಭಾಷಾವಿಜ್ಞಾನ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಹುಟ್ಟಿ, ಬಾಲ್ಯಾವಸ್ಥೆಯನ್ನು ಕಳೆದು, ಪ್ರೌಢಾವಸ್ಥೆಯನ್ನು ತಳೆದು, ಸ್ವತಂತ್ರ ಭಾಷಾ ವಿಜ್ಞಾನ ಶಾಖೆಯಾಗಿ ರೂಪುಗೊಂಡ ಚರಿತ್ರೆಯ ಸಿಂಹಾವಲೋಕನ ಈ ಲೇಖನದಲ್ಲಿ ಮಾಡಲಾಗಿದೆ. ಕರ್ನಾಟಕ ವಿಶ್ವವಿದ್ಯಾಲಯ 1949ರಲ್ಲಿಯೇ ಸ್ಥಾಪನೆ ಗೊಂಡಿದ್ದರೂ ಅದು ಧಾರವಾಡದಲ್ಲಿ ಕಾರ್ಯಗತಗೊಂಡಿದ್ದು ಮಾರ್ಚ್ 1, 1950 ರಂದು. ಕನ್ನಡ ವಿಭಾಗ ಈ ವಿಶ್ವವಿದ್ಯಾಲಯದ ಪ್ರಪ್ರಥಮ ವಿಭಾಗ. ಇಲ್ಲಿ ಆರ್. ಸಿ. ಹಿರೇಮಠರು (1920–) ಪ್ರವಾಚಕ ಹುದ್ದೆಗೆ 21-5-1951 ರಂದು ಸೇರಿಕೊಂಡರು.

ತೀ.ನಂ. ಶ್ರೀಕಂಠಯ್ಯನವರು (1906-1966) ಕನ್ನಡ ವಿಭಾಗದ ಆದ್ಯ ಪ್ರಾಧ್ಯಾಪಕರಾಗಿ 1952ರಲ್ಲಿ ನೇಮಕಗೊಂಡರು. ತಮ್ಮ ಅಮೂಲ್ಯ ಸೇವೆಯನ್ನು 1957ರ ತನಕ ಈ ವಿಭಾಗದ ಪ್ರಾರಂಭಿಕ ಅವಸ್ಥೆಯ ಕಾಲದಲ್ಲಿ ಸಲ್ಲಿಸಿದ್ದಾರೆ.

1.0 ಭಾಷಾವಿಜ್ಞಾನದ ಹುಟ್ಟು

ಕರ್ನಾಟಕದ ಭಾಷಾವಿಜ್ಞಾನಿಗಳಲ್ಲಿ ತೀ.ನಂ.ಶ್ರೀ.ಯವರೇ ಪ್ರಪ್ರಥಮರು ಹಾಗೂ ಸುಪ್ರಸಿದ್ಧರು.[1] ಇವರು ನಮ್ಮ ಕನ್ನಡ ವಿಭಾಗದ ಪ್ರಾಧ್ಯಾಪಕರಾಗಿದ್ದುಕೊಂಡೇ

1. ಮೈಸೂರಿನಲ್ಲಿಯ ಭಾರತೀಯ ಭಾಷೆಗಳ ಸಂಸ್ಥಾನ ತೀ.ನಂ.ಶ್ರೀ.ಯವರ ಎಂಟು ಭಾಷಾ ವೈಜ್ಞಾನಿಕ ಲೇಖನಗಳನ್ನು ತನ್ನ ಬೆಳ್ಳಿಹಬ್ಬ (1969–1974)ದ ಆಚರಣೆಯ ಅಂಗವಾಗಿ 1994ರಲ್ಲಿ ಪ್ರಕಟಿಸಿದೆ. ಇವುಗಳಲ್ಲಿ—(1) "The Mutation of i, u, e and o in Kannada" (1935), (2) "Affricates in Kannada Speech (1954) ಹಾಗೂ (3) Notes on Loans and Native Replacements in Kannada" (1956) ದ್ರಾವಿಡ ಭಾಷಾ ವಿಜ್ಞಾನ ಲೋಕದಲ್ಲಿ ಸುಪ್ರಸಿದ್ಧವಾಗಿವೆ.

ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ನಡೆಯುತ್ತಿದ್ದ ಗ್ರೀಷ್ಮ ಮತ್ತು ಬೇಸಿಗೆಯ ಭಾಷಾ ವಿಜ್ಞಾನ ಶಾಲೆಗಳಲ್ಲಿ ಆಹ್ವಾನಿತ ಪ್ರಾಧ್ಯಾಪಕರಾಗಿ ಕೆಲಸ ನಿರ್ವಹಿಸಿದ್ದಾರಲ್ಲದೆ ಭಾಷಾ ವಿಜ್ಞಾನಕ್ಕೆ ಸಂಬಂಧಿಸಿದ ಟರ್ನರ್ (Turner) ಸಮಿತಿಯ ಸದಸ್ಯರೂ ಆಗಿದ್ದರು. ಎಂ. ಬಿ. ಎಮಿನೊ, ಎಸ್. ಕೆ. ಚಟರ್ಜಿ, ಎಂ. ಎಸ್. ಕಾತ್ರೆ ಮೊದಲಾದ ಸುಪ್ರಸಿದ್ಧ ಪ್ರಥಮ ಶ್ರೇಣಿಯ ಭಾಷಾವಿಜ್ಞಾನಿಗಳ ಸಂಪರ್ಕ ಅವರಿಗೆ ಭಾಷಾವಿಜ್ಞಾನ ಶಾಲೆ ಗಳಿಂದಾಗಿ ದೊರಕಿತು. ತತ್ಪರಿಣಾಮವಾಗಿ 1955-56ರಲ್ಲಿ ರಾಕ್‌ಫೆಲರ್ ಪ್ರತಿಷ್ಠಾನದ ಗೌರವ ವೇತನದ ಮೇಲೆ ಅಮೇರಿಕೆಯ ಮಿಚಿಗನ್ ಮತ್ತು ಪೆನ್ಸಿಲ್ವೇನಿಯ ವಿಶ್ವವಿದ್ಯಾಲಯಗಳಲ್ಲಿ ಅವರು ಭಾಷಾವಿಜ್ಞಾನದ ಉನ್ನತ ವ್ಯಾಸಂಗ ಮಾಡಿ ಇಂಗ್ಲೆಂಡ್, ಫ್ರಾನ್ಸ್, ಸ್ವಿಸರ್ಲೆಂಡ್, ಹಾಲೆಂಡ್, ಇಟಲಿ–ದೇಶಗಳ ಪ್ರವಾಸ ಮುಗಿಸಿ ಮರಳಿ ಧಾರವಾಡಕ್ಕೆ ಬಂದರು. ತೀ.ನಂ.ಶ್ರೀಯವರು, ಕನ್ನಡ ವಿಭಾಗ ಬಿಟ್ಟು 1957 ಜನವರಿಯಲ್ಲಿ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ನೌಕರಿಗೆ ಸೇರಿದರು. ಈ ಖಾಲಿ ಹುದ್ದೆಯಲ್ಲಿ ಆರ್. ಸಿ. ಹಿರೇಮಠರು ಕನ್ನಡ ಪ್ರಾಧ್ಯಾಪಕರಾಗಿ 1957ರಲ್ಲಿ ನೇಮಕಗೊಂಡರಲ್ಲದೆ ಅವರು ರಾಕ್‌ಫೆಲರ್ ಪ್ರತಿಷ್ಠಾನದ ಗೌರವ ವೇತನದ ಮೇಲೆ 1958ರಲ್ಲಿ ಭಾಷಾವಿಜ್ಞಾನದ ಅಭ್ಯಾಸಕ್ಕಾಗಿ ಅಮೇರಿಕಾಕ್ಕೆ ಹೋಗಿ 1960ರಲ್ಲಿ ತಿರುಗಿ ಬಂದರು.

1965ರಲ್ಲಿ ಯಾವುದೇ ಕಲಾ ಸ್ನಾತಕೋತ್ತರ ವಿದ್ಯಾರ್ಥಿ ಐಚ್ಛಿಕವಾಗಿ ಎರಡು ಭಾಷಾವಿಜ್ಞಾನ ಪತ್ರಿಕೆಗಳನ್ನು ಓದುವ ಸೌಲಭ್ಯ ಕನ್ನಡ ವಿಭಾಗದ ಅಭ್ಯಾಸ ಕ್ರಮದಲ್ಲಿ ಸೇರಿಕೊಂಡಿತು. ಅಷ್ಟೇ ಅಲ್ಲದೆ ಭಾಷಾವಿಜ್ಞಾನದಲ್ಲಿ ಪಿಎಚ್.ಡಿ. ಪದವಿಗಾಗಿ ನೋಂದಣಿಯೂ ಮಾಡಲಾಯಿತು. ಆರ್.ಸಿ.ಯವರ ಮಾರ್ಗದರ್ಶನ ದಲ್ಲಿ ಎಂ. ಆರ್. ರಂಗನಾಥ ಹಾಗೂ ಬಿ. ಬಿ. ರಾಜಪುರೋಹಿತ ಭಾಷಾವೈಜ್ಞಾನಿಕ ಸಂಶೋಧನೆಯಲ್ಲಿ ತೊಡಗಿದರು. ಈಗಾಗಲೇ ತೀನಂಶ್ರೀಯವರ ಮಾರ್ಗದರ್ಶನ ದಲ್ಲಿ ಭಾಷಾವಿಜ್ಞಾನ ಸಂಶೋಧನೆ ಪ್ರಾರಂಭಿಸಿದ ಕೆ. ಜಿ. ಶಾಸ್ತ್ರಿಯವರು ಈಗ ಆರ್.ಸಿ.ಯವರ ಮಾರ್ಗದರ್ಶನದಲ್ಲಿ ತಮ್ಮ ಸಂಶೋಧನೆಯನ್ನು ಮುಂದುವರೆಯಿ ಸಿದರು. ಈ ಮೂವರು ಕ್ರಮವಾಗಿ 1964, 1965 ಮತ್ತು 1966ರಲ್ಲಿ ಪಿಎಚ್.ಡಿ. ಪದವಿಯನ್ನು ಪಡೆದರು.

2.0 ಭಾಷಾವಿಜ್ಞಾನದ ಬಾಲ್ಯಾವಸ್ಥೆ

ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ, ಇಪ್ಪತ್ತನೆಯ ಶತಮಾನ ದಲ್ಲಿ, ಕನ್ನಡ ಅಧ್ಯಯನ, ಅಧ್ಯಾಪನ ಹಾಗೂ ಸಂಶೋಧನಗಳು ಅರ್ಥವತ್ತಾಗಿ ನಡೆಯಬೇಕಾದರೆ ಅದಕ್ಕೆ ಸಂಸ್ಕೃತದ ತಳಹದಿ ಹಾಗೂ ಭಾಷಾವಿಜ್ಞಾನದ ಪದ್ಧತಿ (Methodology) ಅತ್ಯಗತ್ಯ. ಸಂಸ್ಕೃತವನ್ನು ಅರಿತ ಹಾಗೂ ಭಾಷಾವಿಜ್ಞಾನದಲ್ಲಿ

ನುರಿತ ಅಂದಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಆರ್.ಸಿಯವರು ಆ ಎರಡು ವಿಷಯಗಳಲ್ಲೂ ಸ್ನಾತಕೋತ್ತರ ಪದವಿ ಪಡೆದ ಜೆ. ಎಸ್. ಕುಳ್ಳಿಯವರನ್ನು ತಮ್ಮ ವಿಭಾಗದಲ್ಲಿ ಭಾಷಾವಿಜ್ಞಾನ ಅಧ್ಯಾಪಕರನ್ನಾಗಿ 1967ರಲ್ಲಿ ಪಡೆದುಕೊಂಡರು. ತತ್ಪರಿಣಾಮವಾಗಿ 1969-70ರಲ್ಲಿ ಸ್ನಾತಕೋತ್ತರ ಭಾಷಾವಿಜ್ಞಾನ ಡಿಪ್ಲೋಮಾ ಆರಂಭವಾಯಿತು.

ಕನ್ನಡ ಸಾಹಿತ್ಯದ ವಿಶ್ಲೇಷಣೆ, ವಿಮರ್ಶೆ, ಹಾಗೂ ಸಾಹಿತ್ಯ ರಚನಾಶಕ್ತಿ ಬೆಳೆಯಬೇಕಾದರೆ ಕನ್ನಡ ಭಾಷೆಯ ರಚನೆ, ಅದರ ಘಟಕಗಳ ಸಂಯೋಜನೆ ಹಾಗೂ, ರೂಪ ಅರ್ಥಗಳ ವಿನ್ಯಾಸದ ಸಾಧ್ಯತೆ ಇತ್ಯಾದಿ ಕನ್ನಡ ವಿದ್ಯಾರ್ಥಿಗೆ ಹಾಗೂ ಸಾಹಿತಿಗೆ ಅವಶ್ಯ ಎಂದು ತಿಳಿದ ಹಿರೇಮಠರು 1969–1970ರಲ್ಲಿ ಎಂ.ಎ. ಕನ್ನಡ ಅಭ್ಯಾಸ ಕ್ರಮದಲ್ಲಿ ನಾಲ್ಕು ಭಾಷಾ-ವಿಜ್ಞಾನ ವಿಷಯಗಳನ್ನು ಐಚ್ಛಿಕ ಪತ್ರಿಕೆಗಳನ್ನಾಗಿ ಅಭ್ಯಸಿಸುವ ಸವಲತ್ತನ್ನೂ ಒದಗಿಸಿದರು. ಈ ಅಭ್ಯಾಸಕ್ರಮ 1974ರ ತನಕ ಚಾಲ್ತಿಯಲ್ಲಿತ್ತು. ಈ ಸವಲತ್ತನ್ನು ಬಳಸಿದ ಅಂದಿನ ಕೆಲವು ವಿದ್ಯಾರ್ಥಿಗಳು ಸಮರ್ಥವಾಗಿ ಕನ್ನಡ ಭಾಷಾವಿಜ್ಞಾನ ಹಾಗೂ ಸಾಹಿತ್ಯಕ್ಕೆ ಕೊಟ್ಟ ಕೃತಿಗಳೇ ಹಿರೇ ಮಠರ ಶೈಕ್ಷಣಿಕ ವಿಚಾರದ ಸಾರ್ಥಕತೆಗೆ ಸಾಕ್ಷಿ. ಪಕ್ಕದ ರಾಜ್ಯಗಳಲ್ಲಿ ಭಾಷಾ ವಿಜ್ಞಾನದ ಅಧ್ಯಯನ, ಅಧ್ಯಾಪನ ಹಾಗೂ ಸಂಶೋಧನಗಳು ವಿಶ್ವವಿದ್ಯಾಲಯದ ಮಟ್ಟದಲ್ಲಿ ತ್ವರಿತಗತಿಯಲ್ಲಿ ನಡೆಯುವುದನ್ನು ಗಮನಿಸಿ ಅವರು ಕರ್ನಾಟಕ ವಿಶ್ವ ವಿದ್ಯಾಲಯದಲ್ಲೂ ಅದಕ್ಕೆ ಯೋಗ್ಯ ಸ್ಥಾನಮಾನ ದೊರಕಿಸಿ ಇಲ್ಲಿಯ ಸಾಹಿತ್ಯ ವಿದ್ಯಾರ್ಥಿಗಳಿಗೆ ಹಾಗೂ ಭಾಷಾಜಿಜ್ಞಾಸುಗಳಿಗೆ ಯೋಗ್ಯ ಅವಕಾಶ ಕಲ್ಪಿಸಿದರು.

3.0 ಭಾಷಾವಿಜ್ಞಾನದ ಪ್ರೌಢಾವಸ್ಥೆ

1971ರಲ್ಲಿ ಸ್ವತಂತ್ರವಾದ ಎಂ.ಎ. ಭಾಷಾವಿಜ್ಞಾನ ಅಭ್ಯಾಸ ಮಂಡಳಿ ಕನ್ನಡ ವಿಭಾಗದಲ್ಲಿ ರಚಿತಗೊಂಡು, ಐಚ್ಛಿಕ ಭಾಷಾವಿಜ್ಞಾನ, ಭಾಷಾವಿಜ್ಞಾನ ಡಿಪ್ಲೋಮಾ ಗಳೊಂದಿಗೆ ಎಂ.ಎ. ಭಾಷಾವಿಜ್ಞಾನ ಅಭ್ಯಾಸ ಕ್ರಮವನ್ನು ಕನ್ನಡ ವಿಭಾಗದಲ್ಲಿ ನಾಂದಿಗೊಳಿಸಿದರು. ಕನ್ನಡದ ಅಧ್ಯಯನ ಹಾಗೂ ಸಂಶೋಧನೆಯ ಕ್ಷಿತಿಜ ವಿಸ್ತರಿಸಲು ಕನ್ನಡ ಸಾಹಿತ್ಯ ವಿಭಾಗ ಹಾಗೂ ಭಾಷಾವಿಜ್ಞಾನ ವಿಭಾಗ ಅಲ್ಲದೆ ಉಳಿದ ಶಿಸ್ತುಗಳೆಲ್ಲವನ್ನೂ ಒಂದೇ ಛತ್ರದಡಿಯಲ್ಲಿ ತಂದು, ಒಂದೇ ದೇಶದಲ್ಲಿ ಅನೇಕ ಗಣರಾಜ್ಯಗಳು ಕೂಡಿಕೊಂಡಿರುವಂತೆ, ಕನ್ನಡ ವಿಭಾಗವನ್ನು ಬೆಳೆಯಿಸಿದರು.

ಏಪ್ರಿಲ್ 1991ರಿಂದ ಭಾಷಾವಿಜ್ಞಾಕ್ಕೆ ಸ್ನಾತಕಪೂರ್ವ ಹಾಗೂ ಸ್ನಾತ ಕೋತ್ತರ ಸಂಯುಕ್ತ ಅಭ್ಯಾಸ ಮಂಡಳಿ ರಚನೆಯಾಗಿ ಭಾಷಾವಿಜ್ಞಾನ ಶಾಖೆಯ ಹಿರಿಯ ಪ್ರಾಧ್ಯಾಪಕರೇ ಅದರ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಹೀಗೆ


ಸೈದ್ಧಾಂತಿಕವಾಗಿ ಭಾಷಾವಿಜ್ಞಾನ ಕನ್ನಡದಂತೆ ಪೂರ್ಣಸ್ವರೂಪದ ಸ್ವತಂತ್ರ ಅಧ್ಯಯನ ವಿಭಾಗವಾಗಿದ್ದರೂ, ತಾಂತ್ರಿಕವಾಗಿ ಹಾಗೂ ವಾಸ್ತವವಾಗಿ ಅದು ವಿಶ್ವ ವಿದ್ಯಾಲಯದ ಅಧ್ಯಯನ ವಿಭಾಗಗಳ ಯಾದಿಯಲ್ಲಿ ಸೇರ್ಪಡೆಯಾಗಿಲ್ಲ.

4.0 ಭಾಷಾವಿಜ್ಞಾನ ಶಾಖೆ

ಭಾಷಾವಿಜ್ಞಾನ ಶಾಖೆಗೆ ಸ್ವತಂತ್ರವಾದ (1) ಅಭ್ಯಾಸ ಮಂಡಳಿ (2) ಪರೀಕ್ಷಾ ಮಂಡಳಿ (3) ಹಾಗೂ ನೇಮಕಾತಿ ಮಂಡಳಿಗಳಿದ್ದು ಭಾಷಾವಿಜ್ಞಾನ ಬೋಧನೆಗೆ ಪ್ರತ್ಯೇಕ ಶಿಕ್ಷಕವೃಂದವೂ ಇದೆ. ಈ ವಿಷಯದ ಅಧ್ಯಯನ ಮಾಡುವ ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ಪ್ರವೇಶ ಪರೀಕ್ಷೆಯನ್ನು ತೆಗೆದುಕೊಳ್ಳಲಾಗುತ್ತದೆ.

ಭಾಷಾವಿಜ್ಞಾನ ಶಾಖೆಯಲ್ಲಿ (1) ಐಚ್ಛಿಕ ಭಾಷಾವಿಜ್ಞಾನ, (2) ಸ್ನಾತಕೋತ್ತರ ಭಾಷಾವಿಜ್ಞಾನ ಡಿಪ್ಲೋಮಾ (3) ಎಂ.ಎ. ಭಾಷಾವಿಜ್ಞಾನ ಮತ್ತು (4) ಭಾಷಾವಿಜ್ಞಾನ ಪಿಎಚ್.ಡಿ. ಎಂಬ ನಾಲ್ಕು ರೀತಿಯ ಅಧ್ಯಯನಗಳಿವೆ.

4.1 ಐಚ್ಛಿಕ ಭಾಷಾವಿಜ್ಞಾನ : ಈ ಅಧ್ಯಯನ, ಸ್ನಾತಕೋತ್ತರ ಭಾಷಾವಿಜ್ಞಾನ ವಿದ್ಯಾರ್ಥಿಗಳನ್ನು ಬಿಟ್ಟು ಉಳಿದ ಎಲ್ಲ ಕಲಾ ವಿಭಾಗಗಳ ವಿದ್ಯಾರ್ಥಿಗಳಿಗೆ ಮೀಸಲು. ಆಧುನಿಕ ಭಾಷಾವಿಜ್ಞಾನ ಪರಿಚಯ ಮಾಡಿಕೊಡುವುದು ಮಾತ್ರ ಈ ಅಧ್ಯಯನದ ಗುರಿ. ಅಲ್ಲಿ ಬೋಧಿಸಲಾಗುವ ಪತ್ರಿಕೆಗಳ ವಿವರ ಹೀಗಿದೆ.



4.2 ಸ್ನಾತಕೋತ್ತರ ಭಾಷಾವಿಜ್ಞಾನ ಡಿಪ್ಲೋಮಾ (1969–70ರಿಂದ) : ಎಂ.ಎ. ಭಾಷಾವಿಜ್ಞಾನ ವಿದ್ಯಾರ್ಥಿಗಳನ್ನು ಹೊರತುಪಡಿಸಿ ಉಳಿದ ವಿದ್ಯಾರ್ಥಿಗಳು ಈ ಒಂದು ವರ್ಷದ ಅವಧಿಯ ಅಧ್ಯಯನವನ್ನು ಕೈಗೆತ್ತಿಕೊಳ್ಳಬಹುದು. ಪ್ರಸ್ತುತ ಅಧ್ಯಯನದಿಂದಾಗಿ ವಿದ್ಯಾರ್ಥಿಗಳಿಗೆ ಭಾಷಿಕ ಹಾಗೂ ಸಾಹಿತ್ಯಕ ಅಭ್ಯಾಸಗಳನ್ನು ಆಧುನಿಕ ವೈಜ್ಞಾನಿಕ ಪದ್ಧತಿಯ ಮೂಲಕ ಅವಲೋಕಿಸಲು ಹಾಗೂಕ್ರಮಗೊಳಿಸಲು ಸಾಧ್ಯವಾಗುತ್ತದೆ. ಅಭ್ಯಾಸಕ್ಕಾಗಿ ನಿಗದಿಪಡಿಸಲಾದ ಪತ್ರಿಕೆಗಳು ಇಂತಿವೆ :

ಸ್ನಾತಕೋತ್ತರ ಭಾಷಾವಿಜ್ಞಾನ ಡಿಪ್ಲೋಮಾ

1. ವಿವರಣಾತ್ಮಕ ಭಾಷಾವಿಜ್ಞಾನ
   (Descriptive Linguistics
2. ಐತಿಹಾಸಿಕ ಭಾಷಾವಿಜ್ಞಾನ
   (Historical Linguistics)
3. ಉಪಭಾಷಾವಿಜ್ಞಾನ
   (Dialectology)
4. ಭಾಷಾಬೋಧನಾ ಪದ್ಧತಿಗಳು
   (Language Teching Methods)

4.3 ಎಂ.ಎ. ಭಾಷಾವಿಜ್ಞಾನ (1971ರಿಂದ): ಸ್ನಾತಕಪೂರ್ವ ಕಲಾ, ವಿಜ್ಞಾನ, ವಾಣಿಜ್ಯ ಮೊದಲಾದ ಕಾಗ್ನೇಟ್ ವಿಷಯಗಳಲ್ಲಿ ಪ್ರತಿಶತ 50 ಗುಣಗಳನ್ನು ಪಡೆದು ಉತ್ತೀರ್ಣರಾಗಿ ಭಾಷಾವಿಜ್ಞಾನ ಪ್ರವೇಶ ಪರೀಕ್ಷೆಯಲ್ಲಿ ಪ್ರತಿಶತ 50 ಗುಣಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಕ್ರಮಾನುಸಾರವಾಗಿ ಕೇವಲ ಹತ್ತು ಸೀಟುಗಳಿವೆ. ಅವರ ಬೋಧನಾ ಪತ್ರಿಕೆಗಳ ವಿವರ ಈ ಕೆಳಗಿನಂತಿದೆ :

ಎಂ. ಎ. ಭಾಷಾವಿಜ್ಞಾನ

ಎಂ. ಎ. ಪ್ರಥಮ	ಎಂ. ಎ. ಅಂತಿಮ
1. ಧ್ವನಿವಿಜ್ಞಾನ ಮತ್ತು ಧ್ವನಿಮ ವಿಜ್ಞಾನ (Phonetics & Phonemics)	5. ಸಂಪ್ರಬಂಧ (Thesis)
2. ಆಕೃತಿಮ ವಿಜ್ಞಾನ ಮತ್ತು ವಾಕ್ಯ ವಿಜ್ಞಾನ (Morphology & Syntax)	6. ಮನೋಭಾಷಾ ವಿಜ್ಞಾನ (Psycho-linguistics) ಅಥವಾ ಕ್ಷೇತ್ರ ಭಾಷಾ ವಿಜ್ಞಾನ (Field Linguistics)
3. ಭಾಷಾಂತರ : ಭಾಷಾವೈಜ್ಞಾನಿಕ ಸಿದ್ಧಾಂತ (Linguistic Theory of Translation) ಅಥವಾ ಒಂದು ಭಾಷೆಯ ರಾಚನಿಕ ಅಧ್ಯಯನ Structural Study of A Language	7. ತೌಲನಿಕ ದ್ರಾವಿಡ ಭಾಷಾವಿಜ್ಞಾನ Comp. Dravidian Linguistics ಅಥವಾ Comp. Indo-Aryan Linguistics ಅಥವಾ Comp· Indo-European Linguistics
4. ಸಾಮಾಜಿಕ ಭಾಷಾವಿಜ್ಞಾನ (Socio-linguistics) ಅಥವಾ ನಿಘಂಟುರಚನಾ ವಿಜ್ಞಾನ (Lexicography) ಅಥವಾ ಭಾಷಾಯೋಜನೆ (Language Planning)	8. ತೌಲನಿಕ-ಐತಿಹಾಸಿಕ ಭಾಷಾವಿಜ್ಞಾನ Comp· Historical Linguistics

4.4 **ಸ್ನಾತಕಪೂರ್ವದ ಹಂತದಲ್ಲಿ ಭಾಷಾವಿಜ್ಞಾನ ಅಧ್ಯಯನ :** 1974-75ರಲ್ಲಿ ಭಾಷಾವಿಜ್ಞಾನ ಐಚ್ಛಿಕ ಪತ್ರಿಕೆಯಾಗಿ ಸ್ನಾತಕಪೂರ್ವದ ಹಂತದಲ್ಲಿ ಆರಂಭಗೊಂಡಿತು. ಆದರೆ, ಕರ್ನಾಟಕ ಕಲಾ ಮಹಾವಿದ್ಯಾಲಯ ಬಿಟ್ಟರೆ ಉಳಿದೆಡೆ ಅದು ಯಾವ ಮಹಾವಿದ್ಯಾಲಯದಲ್ಲಿಯೂ ಆರಂಭಗೊಂಡಿಲ್ಲ. ಇದು ವಿಷಾದನೀಯ

ಮಾತ್ರವಲ್ಲದೆ ಹೊಸ ಅಧ್ಯಯನ ಶಿಸ್ತುಗಳತ್ತ ನಮ್ಮ ಸಮಾಜದ ಗಮನ ಹರಿಯು ಲಾರದುದಕ್ಕೆ ಒಂದು ಉತ್ತಮ ನಿದರ್ಶನವೂ ಹೌದು.

4.5 ಭಾಷಾವಿಜ್ಞಾನ ಪಿಎಚ್.ಡಿ. ಅಧ್ಯಯನ : ಎಂ.ಎ. ಭಾಷಾವಿಜ್ಞಾನ ಅಭ್ಯಾಸ ಕ್ರಮದಲ್ಲಿಯೇ ಭಾಷಾವಿಜ್ಞಾನ ಸಂಶೋಧನಾ ಪದ್ಧತಿಯನ್ನು ಕ್ಷೇತ್ರ ಭಾಷಾವಿಜ್ಞಾನದಲ್ಲಿ (Field Linguistics) ಬೋಧಿಸಲಾಗುತ್ತಿದೆಯಲ್ಲದೆ ವಿದ್ಯಾರ್ಥಿ ಗಳು ಒಂದು ಸಂಪ್ರಬಂಧ (Thesis)ವನ್ನೂ ಬರೆದು ವಿಭಾಗಕ್ಕೆ ಸಲ್ಲಿಸಬೇಕಾಗಿರುವುದ ರಿಂದ ಪ್ರತ್ಯೇಕ ಎಂ.ಫಿಲ್. ಅಧ್ಯಯನದ ಅವಶ್ಯಕತೆ ಉಂಟಾಗುವುದಿಲ್ಲ. ಭಾಷಾ ವಿಜ್ಞಾನದಲ್ಲಿ ಪಿಎಚ್.ಡಿ. ಪದವಿಗಾಗಿ ಈಗಾಗಲೇ 1971 ರಿಂದ 1994ರ ಅವಧಿ ಯಲ್ಲಿ ಹತ್ತು ಮಹಾಪ್ರಬಂಧಗಳನ್ನು ಭಾಷಾವಿಜ್ಞಾನ ವಿಭಾಗಕ್ಕೆ ಸಲ್ಲಿಸಲಾಗಿ ಅವುಗಳಿಗೆ ಕರ್ನಾಟಕ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿಗಳನ್ನು ದಯಪಾಲಿಸಿದೆ.

1. ಆರ್. ಸಿ. ಹಿರೇಮಠ : Linguistics Investigation of Some Problems in the Relationship of Indo-Aryan and Dravidian Languages, (1975)

2. ಎಂ. ಆರ್. ರಂಗನಾಥ : Mysore and Dharwad Kannada : A Comparative Linguistic Study, (1964)

3. ಬಿ. ಬಿ. ರಾಜಪುರೋಹಿತ : A Grammar of Vacana Literature (1965)

4. ಕೆ. ಜಿ. ಶಾಸ್ತ್ರಿ : The Havyaka Dialect of North Kanara, (1966)

—ಈ ಅಧ್ಯಯನಗಳನ್ನು ಭಾಷಾವೈಜ್ಞಾನಿಕಗಳಾದರೂ ಅಂದು ಭಾಷಾವಿಜ್ಞಾನ ಅಭ್ಯಾಸ ಮಂಡಳಿ ಇಲ್ಲದೆ ಇದ್ದುದರಿಂದ ಅವರಿಗೆ ಕನ್ನಡದಲ್ಲಿ ಪಿ.ಎಚ್‌ಡಿ. ಡಿಗ್ರಿ ಕೊಡಲಾಯಿತು.

ಕನ್ನಡ ವಿಭಾಗದಲ್ಲಿ ಪ್ರತ್ಯೇಕ ಹಾಗೂ ಸ್ವತಂತ್ರ ಭಾಷಾವಿಜ್ಞಾನ ಅಭ್ಯಾಸ ಮಂಡಳಿಯಾದ ಬಳಿಕ ಈ ಕೆಳಗಿನಂತೆ ಭಾಷಾವಿಜ್ಞಾನದಲ್ಲಿ ಪಿಎಚ್.ಡಿ. ಡಿಗ್ರಿಗಳನ್ನು ಕೊಡಲಾಯಿತು.

ಮಾರ್ಗದರ್ಶಕ	ಅಭ್ಯರ್ಥಿ	ವಿಷಯ	ವರ್ಷ
1. ಡಾ. ಆರ್.ಸಿ. ಹಿರೇಮಠ	1. ಜೆ.ಎಸ್. ಕುಳ್ಳಿ	Kesiraja's Shabdamanidarpana : A Linguistic Analysis	1971
	2. ವಿಲ್ಯಂ ಮಾಡ್ತ	Christian Konkani of South Kanara : A Linguistic Analysis	1975
2. ಡಾ. ಜೆ. ಎಸ್. ಕುಳ್ಳಿ	1. ಎ. ಮುರಿಗಪ್ಪ	Linguistic Analysis of Colloquial Kannada in Bidar District	1978
	2. ಎಚ್. ಎಂ ಮಹೇಶ್ವರಯ್ಯ	Linguistic Analysis of Diwara Kannada	1979
	3. ಸಂಗಮೇಶ ಸವದತ್ತಿಮಠ	Harihara's Ragales: A Linguistic Analysis	1982
3. ಡಾ. ವಿಲ್ಯಂ ಮಾಡ್ತ	1. ಶಾಲಿನಿ ರಘುನಾಥ	A Socio-linguistic Analysis of the Havyaka Dialect of North Kanara 1985	
	2. ಕೆ. ಅನ್ಬನ್	The Veive : Dialect of Telugu (A Linguistic Analysis) 1990	
	3. ಆರ್.ಎಂ. ನಾಯಕ	Nador Kannada : A Taxonomic Anlaysis 1992	
4 ಡಾ. ಎ. ಮುರಿಗೆಪ್ಪ	4. ಎಂ.ಆರ್. ತಳವಾರ	The Harijan Dialect of Kannada in Belgaum District : A Linguistic Analysis, 1994	

ಭಾರತೀಯ ಭಾಷೆಗಳ ಸಂಸ್ಥಾನ, ಮೈಸೂರು-ಈ ಸಂಸ್ಥೆಯಿಂದ ನಮ್ಮ ವಿಭಾಗದ ವಿದ್ಯಾರ್ಥಿಯಾಗಿದ್ದ ಭ. ಮಲ್ಲಿಕಾರ್ಜನ ಇವರು–A Descriptive Analysis of Yerava ಎಂಬ ಮಹಾಪ್ರಬಂಧವನ್ನು ನಮ್ಮ ವಿಭಾಗಕ್ಕೆ ಸಲ್ಲಿಸಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಭಾಷಾವಿಜ್ಞಾನದಲ್ಲಿ ಪಿಎಚ್.ಡಿ. ಪದವಿಯನ್ನು 1982ರಲ್ಲಿ

ಪಡೆದರು. ಹೀಗೆ ಒಟ್ಟಿನಲ್ಲಿ ಇಲ್ಲಿಯತನಕ ಹತ್ತು ಭಾಷಾವಿಜ್ಞಾನ ಪಿಎಚ್.ಡಿ ಪದವಿಗಳು ವಿದ್ಯಾರ್ಥಿಗಳಿಗೆ ದೊರಕಿತೆ.

ಪ್ರಸ್ತುತದಲ್ಲಿ, ಭಾಷಾವಿಜ್ಞಾನ ಶಾಖೆಯಲ್ಲಿ ಏಳು ಜನ ಸಂಶೋಧನ ವಿದ್ಯಾರ್ಥಿಗಳು ಪಿಎಚ್.ಡಿ. ಪದವಿಗಾಗಿ ಸಂಶೋಧನೆ ನಡೆಯಿಸುತ್ತಿದ್ದಾರೆ. ಈ ಶಾಖೆ ಕೇವಲ ಕರ್ನಾಟಕ ರಾಜ್ಯದಿಂದ ಮಾತ್ರವಲ್ಲದೆ ಹೊರರಾಜ್ಯಗಳಿಂದಲೂ ವಿದೇಶಗಳಿಂದಲೂ ಸಂಶೋಧನ ವಿದ್ಯಾರ್ಥಿಗಳನ್ನು ಇತ್ತೀಚೆಗೆ ಆಕರ್ಷಿಸುತ್ತಿದೆ. ಇದು ಗಮನಿಸಬೇಕಾದ. ವಿಷಯ.

5.0. ಭಾಷಾವೈಜ್ಞಾನಿಕ ಸಂಶೋಧನಾ ಸಾಹಿತ್ಯ

ಪಿಎಚ್.ಡಿ. ಸಂಶೋಧನೆಯಲ್ಲದೆ ಭಾಷಾವಿಜ್ಞಾನಕ್ಕೆ ಸಂಬಂಧಿಸಿದಂತೆ ಹಲವಾರು ಸಂಶೋಧನಾತ್ಮಕ ಲೇಖನಗಳು, ಪುಸ್ತಕಗಳು, ಸಂಪಾದನೆಗಳು ಮತ್ತು ಯೋಜನೆಗಳು ಇಲ್ಲಿಂದ ಹೊರಬಂದಿವೆ. ಅವುಗಳ ವಿವರವನ್ನು ಮೊದಲ ಮೂವರನ್ನು ಬಿಟ್ಟು ಉಳಿದವರನ್ನು ಸ್ವತಃ ಕೇಳಿಕೊಂಡು, ಅವರು ಕೊಟ್ಟ ಮಾಹಿತಿಯನ್ನು ಕೆಳಗಿನ ಕೋಷ್ಟಕದಲ್ಲಿ ಕಾಣಿಸಲಾಗಿದೆ.

	ಶಿಕ್ಷಕ	ಲೇಖನಗಳ ಸಂಖ್ಯೆ	ಪುಸ್ತಕಗಳ ಸಂಖ್ಯೆ	ಸಂಪಾದನೆಗಳ ಸಂಖ್ಯೆ	ಭಾಗವಹಿಸಿದ ವಿಚಾರ ಸಂಕಿರಣಗಳ ಸಂಖ್ಯೆ	ಯೋಜನೆಗಳ ಸಂಖ್ಯೆ
1	ಶ್ರೀನಂಶ್ರೀ	11	1	—	2	1
2	ಆರ್.ಸಿ.	14	2	—	4	—
3	ಜೆ. ಎಸ್. ಕುಲ್ಲಿ	50	9	2	[illegible]	3
4	ವಿಲ್ಯಂ ಮಾಡ್ತ	50	6	—	20	—
5	ಎ. ಮುರಿಗೆಪ್ಪ	30	2	3	22	3
6	ಕೆ. ಅನ್ವರ್	10	—	—	15	—
7	ಆರ್.ಎಸ್. ಹಿರೇಮಠ	12	—	—	20	3
8	ಎಚ್.ಎಂ. ಮಹೇಶ್ವರಯ್ಯ[2]	32	5	3	23	7

2. ಕನ್ನಡ ಅಧ್ಯಯನ ಪೀಠದ ಡಾ. ಕೆ.ಜಿ. ಶಾಸ್ತ್ರಿ, ಡಾ. ಆರ್. ಪನ್ನೀರಸೆಲ್ವಂ ಹಾಗೂ ಡಾ. ಕಾಲಿನಿರ್ಘನಾಥ ಇವರೂ ತಾವು ಪಡೆದುಕೊಂಡ ಭಾಷಾವಿಜ್ಞಾನ ತರಬೇತಿಯನ್ನು ಬಳಸಿಕೊಂಡು ಅಧ್ಯಯನ, ಅಧ್ಯಾಪನ ಹಾಗೂ ಸಂಶೋಧನ ಕ್ಷೇತ್ರಗಳಲ್ಲಿ ಭಾಷಾವಿಜ್ಞಾನಕ್ಕೆ ಸೇವೆ ಸಲ್ಲಿಸಿದ್ದಾರೆ.

6.0. ತರಬೇತಿ ಶಿಬಿರಗಳು ಮತ್ತು ವಿಚಾರ ಸಂಕಿರಣಗಳು

ಭಾಷಾವಿಜ್ಞಾನದ ಪ್ರಸರಣಕ್ಕಾಗಿ ಈ ಕೆಳಗಿನಂತೆ ಭಾಷಾವಿಜ್ಞಾನ ಬೇಸಿಗೆ ಶಾಲೆ (Summer School Linguistics)ಗಳು, ವಿಚಾರ ಸಂಕಿರಣಗಳು, ತರಬೇತಿ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿತ್ತು :

6.1 Summer School of Linguistics, 1962

6.2 Third All India Seminar on Dravidian Linguistics, 1973

6.3 Seminar on Prakrit, Sanskrit and South Indian Languages, 1978

6.4 Summer Institute in Linguistics, 1978

6.5 ಹೈಸ್ಕೂಲು ಶಿಕ್ಷಕರಿಗೆ ಹತ್ತು ಭಾಷಾವೈಜ್ಞಾನಿಕ ಬೋಧನಾ ತರಬೇತಿ ಶಿಬಿರಗಳು (1983 ರಿಂದ 1993ರವರೆಗೆ)

6.6 ಕಾಲೇಜು ಪ್ರಾಧ್ಯಾಪಕರಿಗೆ ಭಾಷಾ ವಿಜ್ಞಾನ ತರಬೇತಿ ಶಿಬಿರ (ಜನವರಿ 18-27, 1995), ಭಾರತೀಯ ಭಾಷಾ ಸಂಸ್ಥಾನ (ಮೈಸೂರು) ಇವರ ಸಹಯೋಗದಿಂದ.

7.0. ಇತರ ಸಂಸ್ಥೆಗಳೊಡನೆ ಸಹಕಾರ

ಭಾಷಾವಿಜ್ಞಾನ ಶಾಖೆ ರಾಜ್ಯದೊಳಗಿನ ಹಾಗೂ ಹೊರಗಿನ ಸಂಸ್ಥೆಗಳಿಗೆ ತನ್ನ ಸಹಕಾರವನ್ನು ನೀಡುತ್ತಾ ಬಂದಿದೆ.

7.1. ಆರ್. ಸಿ. ಹಿರೇಮಠರು ಅಂತರ್ರಾಷ್ಟ್ರೀಯ ದ್ರಾವಿಡ ಭಾಷಾ ಸಂಸ್ಥೆ (ISDL) (ತಿರುವನಂತಪುರ, ಕೇರಳ) ಇದರ ನಿರ್ಮಾಣ ಕಾಲದಲ್ಲಿ ಸಕ್ರಿಯಾತ್ಮಕವಾಗಿ ಭಾಗವಹಿಸಿ, ನಿವೃತ್ತರಾದ ಮೇಲೆ ಅದರ ಆಂತರಿಕ ನಿರ್ದೇಶಕರೂ (Internal Director) ಆಗಿದ್ದರು.

7.2. ಜೆ. ಎಸ್. ಕುಳ್ಳಿಯವರು ಅಖಿಲ ಭಾರತ ದ್ರಾವಿಡ ಭಾಷಾವಿಜ್ಞಾನ ಸಂಘ (ತಿರುವನಂತಪುರಂ)—ಇದರ ಕಾರ್ಯದರ್ಶಿಯಾಗಿದ್ದರು (1977-80). ಅಲ್ಲದೆ ಅಂತರ್ರಾಷ್ಟ್ರೀಯ ದ್ರಾವಿಡ ಭಾಷಾ ಸಂಸ್ಥೆಯ ಸೀನಿಯರ್ ಫೆಲೊ (1980-81) ಆಗಿದ್ದು ಕನ್ನಡ ವ್ಯಾಕರಣಗಳ ಬಗೆಗೆ ಸಂಶೋಧನಾ ವ್ಯಾಸಂಗ ಮಾಡಿದ್ದಾರೆ.

7.3. ವಿಲ್ಯಂ ಮಾಡ್ತ ಅವರು ಈ ಕೆಳಗಿನಂತೆ ಭಿನ್ನ ಭಿನ್ನ ಹುದ್ದೆಗಳಲ್ಲಿ ತಮ್ಮ ಭಾಷಾವೈಜ್ಞಾನಿಕ ಸೇವೆಯನ್ನು ಸಲ್ಲಿಸಿದ್ದಾರೆ :

1. Honorary Consulting Linguist for Universal Digital Communication Research Institute, New Delhi, 1975-1985.
2. Executive Committee Member of Dravidian Linguistics Association, Trivandrum, Kerala, 1984-87.
3. Karnataka State Secretary, Dravidian Linguistics Association, Trivandrum, Kerala, 1988-1991.
4. Member, Tribal and Dialect Survey Committee, International School of Dravidian Linguistics, Trivandrum, Kerala, 1991–
5. Honorary Visiting Professor, Institute of Konkani, St. Aloysius College, Mangalore 1994–
6. Associate Editor (Hon.) Inter-Continental Dictionary Series, University of California, Irvine, U.S.A., 1994–

ವಿಲ್ಯಂ ಮಡಾತ್ತ ಅವರ ಭಾಷಾವೈಜ್ಞಾನಿಕ ಸಂಶೋಧನೆಗಳನ್ನು ಗಮನಿಸಿ ಇಂಡಿಯನ್ ಕೌನ್ಸಿಲ್ ಆಫ್ ಸೋಶಿಯಲ್ ಸಾಯನ್ಸಸ್ ಆ್ಯಂಡ್ ರೀಸರ್ಚ್ (ICSSR) ಸಂಸ್ಥೆಯವರು 1983ರಲ್ಲಿ ಅವರನ್ನು (1) ದ್ರಾವಿಡ ಭಾಷಾವಿಜ್ಞಾನಿ ಮತ್ತು (2) ಲಿಂಗ್ವಿಸ್ಟಿಕ್ ಥಿಯರೆಟೀಶಿಯನ್ ಎಂದು ಪರಿಗಣಿಸಿ ಗೌರವಿಸಿದ್ದಾರೆ.

7.4. ಎ. ಮುರಿಗೆಪ್ಪ ಅವರು ಅಖಿಲ ಭಾರತ ದ್ರಾವಿಡ ಭಾಷಾವಿಜ್ಞಾನ ಸಂಘ ಇದರ ಕಾರ್ಯದರ್ಶಿ (ಕರ್ನಾಟಕ)ಯಾಗಿ (1992-1995) ಕಾರ್ಯ ನಿರ್ವಹಿಸುತ್ತಾರೆ.

7.5. ಕರ್ನಾಟಕ ರಾಜ್ಯ ಸರ್ಕಾರದ ಶಾಲಾಮಟ್ಟದ ಪಠ್ಯಪುಸ್ತಕಗಳ ರಚನೆಯಲ್ಲಿ ಈ ವಿಭಾಗ ವಿಶೇಷ ಪಾತ್ರ ವಹಿಸಿದೆ. ಭಾರತೀಯ ಭಾಷೆಗಳ ಸಂಸ್ಥಾನ, ಮೈಸೂರು ಇವರು ಯೋಜಿಸಿದ ಹಲವಾರು ತರಬೇತಿ ಶಿಬಿರಗಳು ಹಾಗೂ ಯೋಜನೆಗಳಲ್ಲಿ ಭಾಷಾವಿಜ್ಞಾನ ಸಂಪನ್ಮೂಲ ವ್ಯಕ್ತಿಗಳ ವಿಶೇಷ ನೆರವನ್ನು ನೀಡಿದೆ.

8.0. ಅಡ್ಡಿ ಆತಂಕಗಳು

ಭಾಷಾವಿಜ್ಞಾನದ ಸ್ಥಳೀಯ ಬೆಳವಣಿಗೆಯಲ್ಲಿ ಕೆಲವೊಂದು ಅಡ್ಡಿ ಆತಂಕಗಳು ಕಂಡುಬಂದಿವೆ. ಉದಾಹರಣಾರ್ಥವಾಗಿ—

1. ಸ್ನಾತಕಪೂರ್ವ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಭಾಷಾವಿಜ್ಞಾನದ ವಿವಿಧ ಶಾಖೆಗಳಿಗೆ ಸಂಬಂಧಿಸಿ ಪಠ್ಯಪುಸ್ತಕಗಳು ರಚಿತಗೊಂಡಿಲ್ಲ.

2. ಸಾಹಿತ್ಯದ ಅಧ್ಯಯನ, ಅಧ್ಯಾಪನ ಹಾಗೂ ಸಂಶೋಧನ ಕ್ಷೇತ್ರಗಳಿಗೆ ಭಾಷಾವಿಜ್ಞಾನ ಒದಗಿಸಿದ ಮಾದರಿಗಳನ್ನು, ವಿವರಗಳನ್ನು ಹಾಗೂ ಪದ್ಧತಿಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಿ ತಮ್ಮನ್ನು ಆಧುನೀಕರಿಸುವ ಹಾಗೂ ಬೆಳೆಯಿಸುವ ಪ್ರವೃತ್ತಿ ಸಾಹಿತ್ಯ ವಿಭಾಗಗಳು ತೋರಿಸುತ್ತಿಲ್ಲ. ಹೀಗಾಗಿ ಸಾಹಿತ್ಯ ವಿಶ್ಲೇಷಣೆ, ಸಾಹಿತ್ಯ ವಿಮರ್ಶೆ, ಛಂದಸ್ಸು, ಕ್ಷೇತ್ರಕಾರ್ಯ, ಬೋಧನಾ ಪದ್ಧತಿ, ಸಂಶೋಧನಾ ಪದ್ಧತಿ ಮುಂತಾದ ವಿಷಯಗಳಲ್ಲಿ ಪ್ರಸ್ತುತತೆ ಹಾಗೂ ಪ್ರಗತಿ ನಿರೀಕ್ಷಿತ ಮಟ್ಟದಲ್ಲಿ ಕಂಡುಬರುವುದಿಲ್ಲ. ಈ ರೀತಿಯ ಪ್ರತ್ಯೇಕತಾ ಭಾವ ಹಾಗೂ ಅಂತರ್‌ಶಿಸ್ತೀಯ ಅನುಕ್ರಮಗಳ ಬಗೆಗಿನ ಉಪೇಕ್ಷೆಯಿಂದಾಗಿ ಅವುಗಳೊಡನೆ ಭಾಷಾವಿಜ್ಞಾನ ವಿಭಾಗದ ಬೆಳವಣಿಗೆಯೂ ಕುಂಠಿತಗೊಂಡಿದೆ.

3. ಭಾಷಾ ವಿಜ್ಞಾನದ ವಿವಿಧ ಅನ್ವಯಿಕ ಶಿಸ್ತುಗಳಲ್ಲಿ ಪ್ರಾಧ್ಯಾಪಕರಿಗೆ ತರಬೇತಿ (On-going formation) ಸೌಲಭ್ಯವಿಲ್ಲದಿರುವುದರಿಂದ ಅವರ ಜ್ಞಾನಾಭಿವೃದ್ಧಿಗೆ ತೊಡಕುಂಟಾಗುತ್ತದೆ.

4. ರಾಜ್ಯ ಸರಕಾರ, ತನ್ನ ಭಾಷಾಭಿವೃದ್ಧಿ ಯೋಜನೆ, ಆಡಳಿತ ಭಾಷಾ ಯೋಜನೆ, ನಿಘಂಟು ಯೋಜನೆ, ಪಠ್ಯಪುಸ್ತಕ ನಿರ್ಮಾಣ ಯೋಜನೆ, ಭಾಷಾಂತರ ಯೋಜನೆ, ತರಬೇತಿ ಸಂಸ್ಥೆಗಳು, ಕನ್ನಡ ವಿಶ್ವವಿದ್ಯಾಲಯ, ಕೆ.ಪಿ.ಎಸ್.ಸಿ. ಮತ್ತು ಎನ್.ಇ.ಟಿ. ಮೊದಲಾದ ಸ್ಪರ್ಧಾತ್ಮಕ ಪರೀಕ್ಷೆಗಳು ಮುಂತಾದೆಡೆಗಳಲ್ಲಿ ಭಾಷಾ ವಿಜ್ಞಾನಕ್ಕೆ ಸರಿಯಾದ ಅವಕಾಶಗಳನ್ನು ಕಲ್ಪಿಸದೆ ಇರುವುದರಿಂದ ಅಧ್ಯಯನ ಹಾಗೂ ಸಂಶೋಧನಾ ವಿಷಯವಾಗಿ ಭಾಷಾವಿಜ್ಞಾನಕ್ಕೆ ಬಹುಮಟ್ಟಿಗೆ ಪ್ರೋತ್ಸಾಹ ದೊರಕಿಲ್ಲ.

ಈ ಎಲ್ಲ ಆಡಳಿತಾತ್ಮಕ, ಯೋಜನಾತ್ಮಕ ಹಾಗೂ ಶೈಕ್ಷಣಿಕ ಕುಂದುಕೊರತೆಗಳಿದ್ದರೂ ಕನ್ನಡ ವಿಭಾಗದ ಇಲ್ಲಿಯ ಭಾಷಾವಿಜ್ಞಾನ ಶಾಖೆ, ಸಾಕಷ್ಟು ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಕೀರ್ತಿಯನ್ನು ತಂದಿದೆ ಮತ್ತು ಸಮಾಜದ ಋಣವನ್ನು ತೀರಿಸುವಲ್ಲಿ ಪ್ರಯತ್ನಿಸಿದೆಂಬುದಕ್ಕೆ ಮೇಲಿನ ವಿವರಗಳೇ ಸಾಕ್ಷಿ.

9.0 ಸಮಾರೋಪ

ಕನ್ನಡ ವಿಭಾಗದ ಹುಟ್ಟಿನಿಂದಲೂ ಭಾಷಾವಿಜ್ಞಾನ ಒಂದಲ್ಲ ಒಂದು ರೀತಿಯಿಂದ ತನ್ನ ಪ್ರಭಾವವನ್ನು ಇಲ್ಲಿ ಬೀರುತ್ತಾ ಬಂದಿದೆ. ಅದು, ತೀನಂಶ್ರೀಯವರಂಥ ಉದ್ದಾಮ ಭಾಷಾ ವಿಜ್ಞಾನಿಯಿಂದ ಕನ್ನಡ ವಿಭಾಗದಲ್ಲಿ ಜನ್ಮತಾಳಿ ಆರ್. ಸಿ. ಹಿರೇಮಠರ ಕಾಲದಲ್ಲಿ ಪ್ರೌಢಾವಸ್ಥೆಗೆ ಬಂದು ಈಗ ತನ್ನದೇ ಆದ ಅಭ್ಯಾಸಮಂಡಳಿ, ಪರೀಕ್ಷಾ ಮಂಡಳಿ ಹಾಗೂ ನೇಮಕ ಮಂಡಳಿಗಳನ್ನು ಪಡೆದು ಕನ್ನಡದಂತೆ ಪೂರ್ಣ ಪ್ರಮಾಣದ ಅಧ್ಯಯನ ಶಿಸ್ತುವಾಗಿ, ಅಧ್ಯಯನ, ಅಧ್ಯಾಪನ, ಸಂಶೋಧನೆಗಳ ಮೂಲಕ, ಸಮ್ಮೇಳನ, ವಿಚಾರ ಸಂಕಿರಣ, ತರಬೇತಿ ಶಿಬಿರಗಳ ಮೂಲಕ ಹಾಗೂ ಅನ್ವಯಿಕ ಸಾಹಿತ್ಯ ನಿರ್ಮಾಣದ ಮೂಲಕ ತನ್ನ ಸುತ್ತುಮುತ್ತಲಿನ ಸಮಾಜಕ್ಕೆ ಹಾಗೂ ಸಾಹಿತ್ಯದ ಅಧ್ಯಯನ ಅಧ್ಯಾಪನ ಸಂಶೋಧನೆಗಳಿಗೆ ಭಾಷಾವೈಜ್ಞಾನಿಕ ಪದ್ಧತಿಯ ತಳಹದಿಯನ್ನು ಒದಗಿಸಿ ಹೊಸ ದಿಗಂತದತ್ತ ಕೊಂಡೊಯ್ಯುವ ಪ್ರಯತ್ನದಲ್ಲಿ ಮುಂದುವರಿಯುತ್ತಿದೆ.

10.0 ಆಧಾರ ಸಾಹಿತ್ಯ

10.1 ಬಿರಾದಾರ, ಸಂಗಮೇಶ (ಸಂ.). ಜಯವಂತ: ಡಾ॥ ಜಯವಂತ ಕುಳ್ಳಿಯವರ ಸ್ಮಾರಕ ಗ್ರಂಥ, ತುಂಗಳ: ಗೆಳೆಯರ ಬಳಗ, 1987.

10.2 ಚಿದಾನಂದಮೂರ್ತಿ, ಎಂ. ಮತ್ತಿತರರು. ಶ್ರೀಕಂಠತೀರ್ಥ: ತೀನಂಶ್ರೀ ಸ್ಮಾರಕ ಗ್ರಂಥ. ಬೆಂಗಳೂರು: ತೀ.ನಂ.ಶ್ರೀ. ಸಂಸಾರವರ್ಗ 1976.

10.3 ಸುಂಕಾಪುರ, ಎಂ.ಎಸ್. ಮತ್ತು ಎಂ.ಎಂ. ಕಲಬುರ್ಗಿ. ಬೆಳ್ವೊಲ: ಆರ್. ಸಿ. ಹಿರೇಮಠ ಅವರ ಅಭಿನಂದನ ಗ್ರಂಥ, ಧಾರವಾಡ: ಡಾ॥ ಆರ್. ಸಿ. ಹಿರೇಮಠ ಸನ್ಮಾನ ಸಮಿತಿ, 1981.

10.4 MADTHA, WILLIAM. "Kannada Linguistics so-far: A Rapid Survey and Analysis", Karnatak University Journal of Humanities, 1987 & 1988.

10.5 MADTHA, WILLIAM. "Linguistics as an Academic Discipline: Role of the Institute of Kannada Studies (Karnatak University, Dharwad)" An unpublished paper presented at the UGC National Seminar on Linguistics in South India : Application, Research and Training, Department of Linguistics and Foreign Languages, S. V. University Tirupati, March 28–30, 1991.

ಮಹಾನಾಡು ಪ್ರಭುಗಳ ಸಾಮಾಜಿಕ ಆರ್ಥಿಕ ಕೊಡುಗೆಗಳು

ಪಿ. ಎ. ಕೃಷ್ಣಮೂರ್ತಿ

ಶಾಸನಗಳಲ್ಲಿ ಕ್ವಚಿತ್ತಾಗಿ ಉಲ್ಲೇಖಗೊಂಡಿರುವ, ಆದರೆ ಉಜ್ವಲವಾದ ಐತಿಹಾಸಿಕ ಪರಂಪರೆಯನ್ನು ಪಡೆದಿದ್ದ, ಬಿಜ್ಜಾವರದ ಮಹಾನಾಡ ಪ್ರಭುಗಳು, ಇಂದಿನ ತುಮಕೂರು ಜಿಲ್ಲೆಯ ಮಧುಗಿರಿ, ತುಮಕೂರು ಹಾಗೂ ಗುಬ್ಬಿ ತಾಲ್ಲೂಕುಗಳ ಪ್ರದೇಶದಲ್ಲಿ ಕ್ರಿ.ಶ. ಸುಮಾರು ಹದಿನೈದನೆಯ ಶತಮಾನದಿಂದಲೇ ಮತ್ತು ಆಳ್ವಿಕೆಯನ್ನು ಆರಂಭಿಸಿದ್ದಂತೆ ಕಂಡುಬರುತ್ತದೆ. ಇವರ ಆಳ್ವಿಕೆಯ ಕಾಲ ಮತ್ತು ಪ್ರದೇಶದಲ್ಲಿ ಪ್ರಚಲಿತವಿದ್ದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಅರಿಯಲು ಪೂರಕವಾಗಬಲ್ಲ ಶಾಸನಗಳು ಕಡಿಮೆಯಾದರೂ ಈ ವಂಶೀಯರ ಬಗ್ಗೆ ರಚನೆಗೊಂಡಿರುವ ಕೈಫಿಯತ್ತುಗಳು ಹಾಗೂ ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯವೆಂಬ ಕಾವ್ಯವು ಸ್ವಲ್ಪಮಟ್ಟಿಗೆ ನೆರವಾಗಬಲ್ಲವು. ಅಂತೆಯೇ ಈ ಆಕರಗಳ ಹಿನ್ನೆಲೆಯಲ್ಲಿ ಮಹಾನಾಡ ಪ್ರಭುಗಳ ಕಾಲದ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳ ಪರಿಚಯವನ್ನು ಇಲ್ಲಿ ನಿರೂಪಿಸಲು ಪ್ರಯತ್ನಿಸಲಾಗಿದೆ.

ಕೈಫಿಯತ್ತು ಹಾಗೂ ಕಾವ್ಯಗಳಂತಹ ಆಕರಗಳಲ್ಲಿ ಲಭ್ಯವಿರುವ ವಿವರಗಳು ಸಮಕಾಲೀನ ಸಾಮಾಜಿಕ ಹಾಗೂ ಆರ್ಥಿಕ ವಿವರಗಳನ್ನು ಯಥಾವತ್ತಾಗಿಯೇ ಬಿಂಬಿಸಿರುತ್ತವೆಯೆಂದು ಹೇಳಲಾಗದು. ಕಾವ್ಯದಲ್ಲಿ, ಪೂರ್ವಪರಂಪರೆಯಿಂದ ಪ್ರಚಲಿತವಿದ್ದ ವಿವರಗಳೇ ಚರ್ವಿತ ಚರ್ವಣವಾಗಿ ಸಾಗಿ ಬಂದಿರುವುದುಂಟು. ಕೈಫಿಯತ್ತುಗಳಾದರೆ; ಹದಿನೆಂಟನೆಯ ಶತಮಾನದ ಕೊನೆಯ ಭಾಗದಲ್ಲಿ ಟಿಪ್ಪೂ ಸುಲ್ತಾನನ ಪತನದ ನಂತರ ಬ್ರಿಟೀಷರ ವಶವಾದ ಮಹಾನಾಡಿನಂತಹ ಅನೇಕ ಸಣ್ಣಪುಟ್ಟ ರಾಜವಂಶೀಯರು, ತಮ್ಮ ತಮ್ಮ ಆಳಿಕೆಯ ಪ್ರದೇಶಗಳನ್ನು ಬ್ರಿಟೀಷರಿಂದ ಮರಳಿ ಪಡೆಯಲು ನಡೆಯಿಸಿದ ಪ್ರಯತ್ನದ ಅಂಗವಾಗಿ ರೂಪುಗೊಂಡವಾಗಿರುತ್ತವೆ. ಹೀಗಾಗಿ ಅವುಗಳಲ್ಲಿನ ಎಷ್ಟೋ ವಿವರಗಳು ಶಾಸನ ಕಾವ್ಯ ಇತ್ಯಾದಿ ಸಮಕಾಲೀನ ಕೃತಿಗಳಲ್ಲಿ ದಾಖಲಾಗಿರುವ ವಿವರಗಳಿಗಿಂತ ಭಿನ್ನವಾಗಿರುವುದುಂಟು; ಅಲ್ಲದೆ ಕಾವ್ಯ, ಶಾಸನಗಳಲ್ಲಿ ದಾಖಲಾಗಲು ಸಾಧ್ಯವಿಲ್ಲದಂತಹ ಎಷ್ಟೋ ಅಧಿಕ ಮಾಹಿತಿಗಳು ಕೈಫಿಯತ್ತುಗಳಲ್ಲಿ ದಾಖಲಾಗಿರುವುದುಂಟು. ಅಂತೆಯೇ ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಲಭ್ಯವಿರುವ ಆಕರ ಸಾಮಗ್ರಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಬಿಜ್ಜಾವರದ ಮಹಾನಾಡ ಪ್ರಭುಗಳ ಕಾಲದಲ್ಲಿನ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಒಂದು ಸ್ಥೂಲ ಚಿತ್ರವನ್ನು ರೇಖಿಸಬಹುದಾಗಿದೆ.

ಸಾಮಾಜಿಕ :

ಪರಸ್ಪರ ಸಂಬಂಧವುಳ್ಳ ಜನತೆಯ ವ್ಯವಸ್ಥಿತ ಸಮೂಹಕ್ಕೆ ಸಮಾಜವೆನ್ನಬಹುದು. ವೃತ್ತಿಗನುಗುಣವಾಗಿ ವರ್ಗೀಕೃತಗೊಂಡಿದ್ದ ಸಮಾಜವು ಪ್ರಾಚೀನ ಕಾಲದಲ್ಲಿಯೇ ಜಾತಿಗಳೆಂಬ ಅರ್ಥದಲ್ಲಿ ಪ್ರಯುಕ್ತವಾಗ ತೊಡಗಿ, ಕಾಲಾಂತರದಲ್ಲಿ ವಿವಿಧ ವೃತ್ತಿಗಳಲ್ಲಿನ ಭೇದವು ಸಾಮಾಜಿಕವಾಗಿ ಮೇಲು ಕೀಳು ಭಾವನೆಗೆ ಎಡೆಮಾಡಿ ಚಾತುರ್ವರ್ಣಗಳಿಗೆ ಹಾದಿ ಮಾಡಿಕೊಟ್ಟಿತು. ಸಮಾಜದಲ್ಲಿ ವರ್ಣ-ವರ್ಗ, ಕುಟುಂಬ, ಸಂಘ-ಸಂಸ್ಥೆ ಮತ್ತು ಅವುಗಳ ಆಲೋಚನಾಕ್ರಮ ಇತ್ಯಾದಿಗಳಿದ್ದು. ಅವು ಆಯಾ ಸಾಮಾಜಿಕರ ಒಪ್ಪಿತ ಮೌಲ್ಯಕ್ಕೆ ಬದ್ಧವಾಗಿರುತ್ತವೆ. ಅಂದರೆ ಅನುಕೂಲ ಮತ್ತು ಭದ್ರತೆಗೆ ಒಂದು ಬಗೆಯ ಒಪ್ಪಂದವೇರ್ಪಟ್ಟಿರುತ್ತದೆ.

ವರ್ಣ-ವರ್ಗ-ಜಾತಿಗಳು :

ರಾಜನೆನಿಸಿಕೊಂಡವನು ಸಪ್ತಸಂತಾನಗಳಲ್ಲಿ ಒಂದಾದ 'ವಿಪ್ರಸಂಸ್ಥಾಪನೆ' ಕಾರ್ಯವನ್ನು ಮಾಡುವುದು ರಾಜತ್ವದ ಕುರುಹಾಗಿದ್ದಿತು. ಅಂತೆಯೇ ಮಹಾನಾಡು ಪ್ರಭುಗಳ ಆಸ್ಥಾನವು 'ಮತಿವಂತರಪ್ಪ ಪುರೋಹಿತರಿಂದ ಶೋಭಿಸುತ್ತಿದ್ದು'ದಲ್ಲದೆ, ಇವರ ಆಳ್ವಿಕೆಯ ಮುಖ್ಯ ಸ್ಥಳಗಳಾಗಿದ್ದ ಮುಮ್ಮಡಿಪಟ್ಟಣ*, ಬಿಜ್ಜಾವರ, ಚನ್ನರಾಯದುರ್ಗ, ಮಿಡಿಗೇಶಿ, ಮಧುಗಿರಿ, ಸಿದ್ದಾಪುರ ಮೊದಲಾದ ಸ್ಥಳಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಬ್ರಾಹ್ಮಣರು ನೆಲೆಗೊಳ್ಳುವಂತೆ ಏರ್ಪಡಿಸಿ ಅವರು ಷಟ್ಕರ್ಮ ನಿರತರಾಗಿರುವಂತೆ ಸಾಕಷ್ಟು ದಾನದತ್ತಿಗಳನ್ನು ನೀಡಿ ಗೌರವಿಸಿದ್ದರು. ಮಲ್ಲನರಸಯ್ಯನೆಂಬ ಶ್ಯಾನುಭೋಗ, ನಂತರದಲ್ಲಿ ಅವನ ಸಂತತಿಯವರಾದ ಹರಿನರಸಯ್ಯ ಮೊದಲಾದ ವಿಪ್ರರ ಉಲ್ಲೇಖಗಳು ಈ ಅರಸರ ದಾಖಲೆಗಳಲ್ಲಿ ಕಂಡುಬಂದಿದೆ. ಒಟ್ಟಾರೆ ಮಹಾನಾಡ ಪ್ರಭುಗಳು ಸಮಕಾಲೀನ ಇತರ ಅರಸು ಮನೆತನದವರಂತೆ ಪೂರ್ವಮರ್ಯಾದೆಯನ್ನು ಕಾಪಾಡುತ್ತಾ ಬ್ರಾಹ್ಮಣರನ್ನು ಗೌರವ ಸ್ಥಾನದಲ್ಲಿಟ್ಟಿದ್ದರು.

ಮಹಾನಾಡ ಪ್ರಭುಗಳು ವೀರಶೈವ ಯತಿವರ್ಯರಲ್ಲಿ ವಿಶೇಷ ಭಕ್ತಿಯುಳ್ಳವರಾಗಿದ್ದರು. ಅಂತೆಯೇ ಅವರು ಅನೇಕ ಮಠಮಾನ್ಯಗಳನ್ನು ಅವರಿಗಾಗಿ ವ್ಯವಸ್ಥೆ ಮಾಡಿದ್ದರು. ವಿರಕ್ತರ ಸಪ್ಪೇದೇವರ ಮಠ, ಗೋಸಲ ಚನ್ನಬಸವನ ಮಠ, ಬಳ್ಳಾರಿ ವಡೇರ ಮಠಗಳೇ ಮೊದಲಾದವು ಇವರ ಆಳಿಕೆಯ ಪ್ರದೇಶದಲ್ಲಿ ತಲೆ

* ಕ್ರಿ. ಶ. 1399ರಲ್ಲಿ ಜಯಮಂಗಲಿ ನದಿಯ ದಡದಲ್ಲಿ ಈ ಅರಸರು ಕಟ್ಟಿದ್ದ ಈ ಪಟ್ಟಣವು ಬಹು ವಿಸ್ತಾರವಾಗಿದ್ದಿತೆಂದೂ, ಇಂದಿನ ಕೊಡಲಾಪುರ, ಪುರವರ, ಗೊಂದೀಹಳ್ಳಿ, ಕೊಡಗದಾಲ ಮತ್ತು ಇಮ್ಮಡಿನಹಳ್ಳಿಗಳನ್ನು ಒಳಗೊಂಡಿದ್ದಿತೆಂದು ತಿಳಿಯುಬರುತ್ತದೆ.

ಯೆತ್ತಿದ್ದವು. ಮುಖ್ಯವಾಗಿ ಈ ವಂಶೀಯರಿಗೆ ತೋಂಟದ ಸಿದ್ಧಲಿಂಗಯತಿಗಳು ರಾಜಗುರುಗಳಾಗಿ ಆಶೀರ್ವದಿಸಿದ್ದರು. ಶಾಸನವೊಂದರಲ್ಲಿ ಗೋಸಲ ತೋಂಟದ ಸಿದ್ಧಲಿಂಗೇಶ್ವರಸ್ವಾಮಿಯವರ ಪಾದಪದ್ಮಾರಾಧಕರಾಗಿ ದಿನಾರಾತ್ರಿಯಲ್ಲಿ ಭಜಿಸುತ್ತಿದ್ದ ವಿವರ ಬಂದಿದೆ. ಇವರು ಶಿವಾಚಾರ ಸಂಪನ್ನರಾದ ಒಡೆಯರಿಗೆ ಗ್ರಾಮಗಳನ್ನು ದತ್ತಿಕೊಟ್ಟು ಗೌರವಿಸುತ್ತಿದ್ದರೆಂಬುದಕ್ಕೆ ಆಧಾರವಾಗಿ ಕ್ರಿ.ಶ. 1574ರ ಚಿಲಗೊಂಡನಹಳ್ಳಿ ಶಾಸನವು (ಎ. ಕ. 12, ಮದ್ದಗಿರಿ-33) ಕುಣಗಲ ಮಠದ ಶ್ರೀ ಚೆನ್ನವೀರಯ್ಯ ಒಡೆಯರಿಗೆ ದತ್ತಿ ಬಿಟ್ಟ ವಿವರವನ್ನು ನೀಡುತ್ತದೆ.

ಬೇರೆ ಬೇರೆ ವೃತ್ತಿಗಳಲ್ಲಿ ನಿರತರಾಗಿದ್ದ ಅನೇಕಾನೇಕ ಸಾಮಾಜಿಕ ಶ್ರೇಣಿಯ ಗುಂಪುಗಳಿದ್ದು, ಅವು ಸಮಾಜದಲ್ಲಿ ಗಮನಾರ್ಹ ಪಾತ್ರವನ್ನು ವಹಿಸಿದ್ದವು. ಈ ಅರಸರ ಕೈವಾಡಗಾರರಲ್ಲಿ ಶ್ಯಾನುಭೋಗರಲ್ಲದೆ, ಕಮ್ಮಾರ. ಕುಂಬಾರ, ಕೆಲಸಿಗೆ, ಅಗಸ. ಉಪ್ಪಾರ, ಸುಣ್ಣಕಲ್ಲಿನವರು, ಮಾದಿಗ-ಮುಂತಾದ ಕುಶಲ ಹಾಗೂ ಶ್ರಮಿಕ ವರ್ಗದವರು ಇದ್ದರು. ಇವರಲ್ಲದೆ ಬಣಜಿಗ. ಕೋಮಟಿಗ. ಸಾದರ, ಅಕ್ಕಸಾಲಿ, ಕಂಚುಗಾರ, ಗಾಣಿಗ, ದರ್ಜಿ, ಕುರುಬ, ಹಂಡೇರಾಹುತ ಹಾಗೂ ಎಡಗೈ, ಬಲಗೈಯವರೂ, ಜೈನರು, ತೊಗಟರು, ಜಲಗಾರರು, ಬೋವಿ, ಗೊಲ್ಲ, ರಜಪೂತ, ಮರಾಠಿಗರು, ತುರುಕರೇ ಮುಂತಾದವರು ಇವರ ಆಳ್ವಿಕೆಯ ಪ್ರದೇಶದಲ್ಲಿ ನೆಲೆಸಿದ್ದರು. ಇವರೆಲ್ಲರೂ ಅವರವರ ಕುಲ ಕಸಬುಗಳಲ್ಲೇ ಪ್ರಮುಖವಾಗಿ ನಿರತರಾಗಿದ್ದರು. ಗೊಲ್ಲರ (ತುರುಕಾರರ) ಮತ್ತು ಬೇಡರ ಜೀವನ ಚಿತ್ರಣ ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ ಕೃತಿಯಲ್ಲಿ ವಿಸ್ತೃತವಾಗಿ ಬಂದಿದೆ. ಈ ಅರಸರು ಕೈಗೊಂಡ ಊರುಗಳ ರಚನೆ-ಅಭಿವೃದ್ಧಿ ಕಾರ್ಯ ಹಾಗೂ ಕೆರೆ-ಕಟ್ಟೆಗಳ ರಚನೆಯ ಸಂದರ್ಭದಲ್ಲಿ ಯಂಗಟನಬೋವಿ. ರಾಮನಬೋವಿ, ತಿಮ್ಮನಬೋವಿ, ತಿರುಜನ ಬೋವಿ ಎಂಬ ಕಾಮಗಾರಿ ಪರಿಶ್ರಮಿಗಳ (ವಡ್ಡರ) ಉಲ್ಲೇಖ ಶಾಸನ (ಎಂ.ಎ.ಆರ್ 1929, ಮದ್ದಗಿರಿ 97) ಮತ್ತು ಕೈಫಿಯತ್ತುಗಳಲ್ಲಿ ಉಕ್ತವಾಗಿದೆ. ಈ ವಿವಿಧ ವೃತ್ತಿ-ಕಸುಬುಗಾರರ ಜೀವನ ನಿರ್ವಹಣೆಗೆ ಸಂದರ್ಭೋಚಿತವಾಗಿ ವೃತ್ತಿ-ಮಾನ್ಯಗಳು ಸಲ್ಲುತ್ತಿದ್ದವಲ್ಲದೆ ಇವರ ಜೀವನ ನಿರ್ವಹಣೆಗಾಗಿ ನಿರ್ದಿಷ್ಟ ಪ್ರಮಾಣದ ದವಸಧಾನ್ಯ ರೂಪದ ಸಂಭಾವನೆಯನ್ನು ಈ ಎಲ್ಲ ವೃತ್ತಿ ಮತ್ತು ಕಸುಬುಗಳಿಗೂ ಜೀವಾಳವಾದ ಭೂಮಾಲೀಕ ಹಾಗೂ ಕೃಷಿಕನಾದ ಒಕ್ಕಲಿಗನಿಂದ ಪಡೆಯುತ್ತಿದ್ದರು. ಹೀಗೆ ಸಂಭಾವನೆಯನ್ನು ಪಡೆಯುವವರೇ ಆಯಗಾರರು. ಆಯಗಾರರಾದ ಹನ್ನೆರಡು ಕೈವಾಡ, ಬಾರಾಬಲೂತಿಗಳ ಉಲ್ಲೇಖ ತಾಮ್ರ ಶಾಸನವೊಂದರಲ್ಲಿ ಬಂದಿದೆ. ವ್ಯಕ್ತಿಯೊಬ್ಬನು ಧಾರ್ಮಿಕ ಅಥವಾ ಸಾಮಾಜಿಕ ಕಟ್ಟುಪಾಡುಗಳನ್ನು ಉಲ್ಲಂಘಿಸಿದಾಗ ಆ ವ್ಯಕ್ತಿಯು ಸ್ವಜಾತಿಯ ಜನರಿಂದ ಅಥವಾ ಸ್ವಗ್ರಾಮದವರಿಂದ ಬಹಿಷ್ಕಾರಕ್ಕೊಳಗಾಗುತ್ತಿದ್ದ.

ಶ್ಯಾನುಭೋಗ, ಗೌಡ, ಪಟ್ಟಣಶೆಟ್ಟರು ಸಾಮಾನ್ಯವಾಗಿ ಆಯಾ ಗ್ರಾಮಗಳ ಮುಖ್ಯಸ್ಥರಾಗಿರುತ್ತಿದ್ದರು. ಆ ಗ್ರಾಮದಲ್ಲಿ ನಡೆಯುತ್ತಿದ್ದ ದಾನ ಕ್ರಯಾದಿ ವ್ಯವಹಾರಗಳು ಅವರ ಸಮ್ಮುಖದಲ್ಲೇ ನಡೆಯುತ್ತಿದ್ದವು. ಕ್ರಿ. ಶ. 1574ರ ಶಾಸನವೊಂದರಲ್ಲಿ (ಎ. ಕ. 12 ಮಧುಗಿರಿ 37) ಸೇನಭೋನ ತಿಮ್ಮರಸಯ್ಯ. ಪಟ್ಟಣಸ್ವಾಮಿ, ತಳವಾರ, ಚಲವಾದಿಗಳ ಸಮ್ಮುಖದಲ್ಲಿ ದತ್ತಿ ಬಿಟ್ಟಿರುವ ವಿವರ ಬಂದಿದೆ.

ಕುಟುಂಬ ವ್ಯವಸ್ಥೆ

ಸಮಾಜದ ವಿವಿಧ ಅಂಗಗಳಲ್ಲಿ ಕುಟುಂಬ ಒಂದು ಮೂಲಭೂತವಾದ ಸಾಮಾಜಿಕ ಸಂಸ್ಥೆ. ಇದಕ್ಕೆ ಮೂಲ ಗಂಡು–ಹೆಣ್ಣುಗಳ ಸಂಬಂಧ. ಇದನ್ನೇ ಹಿಂದೂ ಸಂಸ್ಕಾರಗಳು ವಿವಾಹವೆಂದು ಕರೆದವು. ಮಹಾನಾಡ ಪ್ರಭುಗಳ ಶಾಸನ, ಸಾಹಿತ್ಯ ಕೃತಿಗಳಲ್ಲಿ ವಿವಾಹಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯೇನೂ ಲಭ್ಯವಿಲ್ಲ. ಆದರೂ ಸಮಕಾಲೀನ ವಿಜಯನಗರದ ಅರಸರ ಆಳಿಕೆಯ ಇತರ ಪ್ರದೇಶಗಳಲ್ಲಿ ಪ್ರಚಲಿತವಿದ್ದ ರೀತಿನೀತಿಗಳೇ ಇಲ್ಲಿಯೂ ಪ್ರಚಲಿತವಿದ್ದಿತೆಂದು ಹೇಳಬಹುದಾಗಿದೆ. ಮದುವೆಯ ಮೆರವಣಿಗೆ, ಮದುವೆಯ ಚಪ್ಪರ, ಪಲ್ಲಕ್ಕಿಯಲ್ಲಿ ಮೆರವಣಿಗೆ, ಮದುವೆಯ ಚಪ್ಪರವನ್ನು ಚಂದನದ ಹುಡಿಯಿಂದ ಸಿಂಪಡಿಸುವುದು–ಇವುಗಳ ಮೇಲೆ ತೆರಿಗೆಯನ್ನು ಹಾಕುತ್ತಿದ್ದ ವಿವರವನ್ನು ಡಾ ಟಿ. ವಿ. ಮಹಾಲಿಂಗಂ ರವರ ಶಾಸನಾಧಾರಗಳಿಂದ ತೋರಿಸಿದ್ದಾರೆ. ಇದರಿಂದ ಆಗಿನ ಕಾಲದಲ್ಲಿ ವಿವಾಹಗಳು ವೈಭವದ ಚಪ್ಪರಗಳಿಂದಲೂ ಅದ್ದೂರಿಯ ಮೆರವಣಿಗೆಗಳಿಂದಲೂ ಕೂಡಿರುತ್ತಿದ್ದವು ಎಂದು ಊಹಿಸಬಹುದಾಗಿದೆ.

ಮದುವೆಯಲ್ಲಿ ಕನ್ಯಾಶುಲ್ಕವಿರುವಂತೆ ಉಂಬಳಿ ಅಥವಾ ಬಳುವಳಿಯನ್ನು ಕೊಡುವ ಪದ್ಧತಿಯು ಪ್ರಚಲಿತವಿದ್ದಿತು. ಕ್ರಿ. ಶ. 1599ರ ಕರಿಕೆರೆ ಗ್ರಾಮದ ಶಾಸನವು (ಎ. ಕ. 12, ತುಮಕೂರು 66) ಮಹಾನಾಡ ಪ್ರಭು ಬಿಜ್ಜಾವರದ ಮುಮ್ಮಡಿ ಚಿಕ್ಕಪ್ಪಗೌಡರು ತಮ್ಮ ಅಳಿಯ...ಕೆರೆಯಪ್ಪಗೌಡ ಹಾಗೂ ಹೆಣ್ಣು ಮಗಳಾದ ಕ...ಮಗೆ ಕೋರಾ ಮಾಗಾಣಿಗೆ ಸಲುವ ಬ್ರಹ್ಮಸಮುದ್ರದ ಕಾಲುವಳಿಯ ಕರಿಕೆರೆ ಗ್ರಾಮವನ್ನು ಉಂಬಳಿಯಾಗಿ ನೀಡಿರುವ ವಿವರವನ್ನು ದಾಖಲಿಸಿದೆ.

ಬಹುಪತ್ನಿತ್ವವು ಪ್ರಭುವರ್ಗದಲ್ಲಿ ಪ್ರಚಲಿತವಿದ್ದಿತೆಂಬುದಕ್ಕೆ ಈ ವಂಶದ ಪ್ರಸಿದ್ಧ ದೊರೆಯಾದ ಇಮ್ಮಡಿ ಚಿಕ್ಕಭೂಪಾಲನಿಗೆ ಚೆನ್ನಾಜಮ್ಮ ಮತ್ತು ಲಿಂಗಮ್ಮ ಎಂಬ ಇಬ್ಬರು ಪತ್ನಿಯರಿದ್ದರೆಂದು ತಿಳಿಯುತ್ತದೆ, ಹಾಗೇ 'ಮಹಾನಾಡಪ್ರಭು ಚಿಕ್ಕ ಗೌಡರ ಹೆಂಡತಿ ಕಿರಿಯಮ್ಮ' ಎಂಬ ಉಲ್ಲೇಖ ಗುಂಡ್ಲಹಳ್ಳಿ ಶಾಸನದಲ್ಲಿ (ಎಂ. ಎ. ಆರ್. 1929, ಮಧುಗಿರಿ 96 ಪು. 255) ದಾಖಲಾಗಿದೆ.

ಗಂಡ–ಹೆಂಡಿರ ಮನೋಭಾವಗಳಲ್ಲಿ ಹೊಂದಾಣಿಕೆಯಿರಬೇಕೆಂಬುದನ್ನು 'ಸತಿಪತಿಗಳೊಂದಾಗಿ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎಂಬ ಮಾತು ಸೂಚಿಸುತ್ತದೆ. ಅಂತೆಯೇ ದಾನಧರ್ಮಗಳಲ್ಲಿಯೂ ಪರಸ್ಪರ ಒಮ್ಮತದಿಂದಲೇ ಭಾಗಿಗಳಾಗಬೇಕಾಗಿದ್ದಿತು. ಅಂದರೆ ದಾನದತ್ತಿಗಳನ್ನು ನೀಡುವಾಗ ಸತಿಯ ಸಮ್ಮತಿಯು ಅಗತ್ಯವಿದ್ದಿತು. ಕ್ರಿ. ಶ. 1761 ರ ಮಹಾನಾಡು ಪ್ರಭು ಗುಬ್ಬಿ ಮುಮ್ಮಡಿ ಹೊನ್ನಪ್ಪ ಗೌಡರು ನೀಡಿರುವ ದತ್ತಿಯೊಂದರಲ್ಲಿ (ಎ. ಕ. 12, ತುಮಕೂರು 7' ಸ್ತ್ರೀಪುತ್ರ ಗ್ನಾತಿದಾಯಾದಿ ಸಾವಂತಾದ್ಯನುಮತ ಪುರಸರವಾಗಿ ಸುರುಚ್ಯಾವಪ್ಪ ವಡಂಬಟ್ಟು... ಎಂಬ ವಿವರ ಬಂದಿದೆ.

ಮಕ್ಕಳನ್ನು ಪಡೆಯುವುದು ದಾಂಪತ್ಯ ಜೀವನದ ಸಾರ್ಥಕತೆ. ಗೃಹಣಿಗಂತು ಪುತ್ರವತಿ ಎನಿಸಿಕೊಳ್ಳುವುದರಲ್ಲಿ ವಿಶೇಷವಾದ ಹೆಮ್ಮೆ, ಅಂತೆಯೇ ಅದಕ್ಕಾಗಿ ಹರಕೆ ಹೊರುವುದು, ಸಾಧು–ಸಂತರ ಸೇವೆ ಮಾಡುವುದು, ಎಂದಿನಿಂದಲೂ ಪ್ರಚಲಿತವಿರುವ ಪದ್ಧತಿಯಾಗಿದೆ. ಮಹಾನಾಡ ಅರಸರು, ತೋಂಟದ ಸಿದ್ಧಲಿಂಗಯತಿಗಳು ಹಾಗೂ ಸಪ್ಪೇಶ್ವರರಲ್ಲಿ ಅಪಾರ ಭಕ್ತಿಯುಳ್ಳವರಾಗಿದ್ದುದರಿಂದ ಅವರು ತಮ್ಮ ಮಕ್ಕಳಿಗೆ ತೋಟೇಂದ್ರ. ಸಪ್ಪೇಂದ್ರ ಎಂದು ಹೆಸರನ್ನು ಇಡುವ ಮೂಲಕ ತಮ್ಮ ಗೌರವವನ್ನು ವ್ಯಕ್ತಪಡಿಸಿದ್ದರು.

ಸತಿ ಪದ್ಧತಿ

ವಿಜಯನಗರ ಅರಸರ ಕಾಲದಲ್ಲಿ ವಿಧವೆಯರು ಸತ್ತ ಗಂಡನೊಡನೆ ಸಹಗಮನ ಮಾಡಿಕೊಳ್ಳುವುದು ಪ್ರಭುವರ್ಗದಲ್ಲಿ ಕ್ವಚಿತ್ತಾಗಿ ಪ್ರಚಲಿತವಿದ್ದರೂ, ಇತರರಲ್ಲಿ ಅಷ್ಟಾಗಿ ಪ್ರಚಲಿತವಿದ್ದುದು ಕಾಣಬರುತ್ತಿಲ್ಲ. ಹರವೆಯ ಕಾಳಗದಲ್ಲಿ ಇಮ್ಮಡಿ ಚಿಕ್ಕ ಭೂಪಾಲನ ಕುಮಾರ ತೋಟೇಂದ್ರನು ಮಡಿದಾಗ ಆತನ ಹೆಂಡತಿ ಚೆನ್ನಬಸವಮ್ಮನು ತನ್ನ ಪತಿಯ ವೀರಮರಣದ ಸುದ್ದಿ ಕೇಳಿ 'ಎಡಗೈಯ ಮಣಿಗನ್ನಡಿ ಬಲಗೈಯೊಳು ಪಿಡಿದಲಗುವ ಜಮದಾಡೆ, ಮುಡಿದ ಗರಿಯ ಬಾಸಿಗವಮರಿದ ರನ್ನದೊಡನೆ' ಗಳಿಂದ ಶೋಭಿತಳಾಗಿ (ಇಂ.ಚಿ.ಭೂ.ಸಾಂ. 17-85) 'ನರ್ತಿಸಿದಳು ನಲಿದಳು ಮನದನ್ನನ ಮೂರ್ತಿಯ ವಿಮಲ ಸದ್ಗುಣವ ಕೀರ್ತಿಸುತಾ ಸತಿ ಮಾಸತಿಯಾಗಿ ಪ್ರವರ್ತಿಸಿದುದನೇನೆಂಬೇ' (16–75) ಎಂದು ಕವಿ ಉದ್ಗಾರ ತೆಗೆದಿದ್ದಾನೆ. ಆಕೆಯಾದರೂ ಮಡಿದ ಗಂಡನನ್ನು ಕುರಿತು 'ನೋಡಲೀವೆನೆ ನಿನ್ನ ಮೊಗದವರಿಗೆ ಒಮ್ಮೆ ನೋಡೆನ್ನ ಪಂಥವನಾಣ್ಮ ಅಡಿದೊಡೇನಹುದೀಗಳೇ ನಿನ್ನೊಡಗೂಡಿ ನಿನ್ನನ್ನೇ ಮೆಚ್ಚಿಸುವೆನು' (16–79) ಎಂದು ಗಂಡನನ್ನು ಹಿಂಬಾಗಿಸಲು ಆಕೆ ತೆಗೆದುಕೊಂಡಿದ್ದ ದೃಢನಿರ್ಧಾರವನ್ನು ಮೆರೆದಿದ್ದಾಳೆ. ಅತ್ತೆಮಾಂದಿರ ಪಾದಕೆರಗಿ ತನ್ನ ಚಿತ್ತವಲ್ಲಭನ ಮೂರ್ತಿಯನು ಚಿತ್ತದೊಳಿಟ್ಟು ಜಾನಿಸುತೆ ಶ್ರೀಗುರುರಾಯನಿತ್ತ ಲಿಂಗಕೆ ಪೊಡಮಡುತೆ ಮಹಾಸತಿಯಾದಳು.

ವೇಶ್ಯೆಯರು

ವೇಶ್ಯೆಯರನ್ನು ಹೊಂದಿರುವುದು ಮಧ್ಯಕಾಲೀನ ಕರ್ನಾಟಕದಲ್ಲಿ ವೈಭವದ ಪ್ರತೀಕವಾಗಿದ್ದಿತು. ರಾಜಸಭೆಗಳು ವೇಶ್ಯೆಯರಿಂದ ಶೋಭಿಸುತ್ತಿದ್ದವು. ಅರಮನೆಯಲ್ಲಿ ಕೆಲವು ಸಮಾರಂಭಗಳು ನಡೆಯುವಾಗ ಅವರು ಕೆಲವು ವಿಶೇಷ ಸೌಲಭ್ಯಗಳನ್ನು ಪಡೆದಿದ್ದರೆಂದು ಪ್ರವಾಸಿಗಳ ವಿವರಣೆಗಳಿಂದ ತಿಳಿದುಬರುತ್ತದೆ. ಇಂ. ಚಿ. ಭೂ. ಸಾಂಗತ್ಯದಲ್ಲಿ ವಯಸ್ಸಾದ ಹಿರಿಯ ಸೂಳೆಯೊಬ್ಬಳು ತನ್ನ ಮಗಳಿಗೆ ವೇಶ್ಯಾ ನೀತಿ ಸಂಹಿತೆಯನ್ನು ಬೋಧಿಸುವುದು ಹೃದ್ಯಂಗಮವಾಗಿ ಮೂಡಿದೆ. ಸಂಗೀತ ನೃತ್ಯ ಕಲೆಗಳಲ್ಲಿ ಪರಿಣಿತರಾಗಿರುತ್ತಿದ್ದ ವಾರಾಂಗನೆಯರು ದೊಡ್ಡ ನಗರಗಳ ಸಾಂಸ್ಕೃತಿಕ ಜೀವನಕ್ಕೆ ಚೇತನಕಾರಕರಾಗಿರುತ್ತಿದ್ದರು. ಅನೇಕ ವೇಶ್ಯೆಯರು ಸದರ್ಥೆಯರಾಗಿ ಸಾಮಾಜಿಕ ಧಾರ್ಮಿಕ ಕಾರ್ಯಗಳಲ್ಲಿ ಭಾಗಿಗಳಾಗುತ್ತಿದ್ದರು. ಇಮ್ಮಡಿ ಚಿಕ್ಕ ಭೂಪಾಲನಿಗೆ 'ವಂಕಿಣನಾರಾಯಣ, ಸಮರನಿಶ್ಶಂಕ, ನೂತನ ಭೋಜರಾಜ ತಲಾಘರಾಯರಾವುತ' ಎಂಬ ಬಿರುದುಗಳೊಂದಿಗೆ 'ವೇಶ್ಯಾಭುಜಂಗ' ಎಂಬ ಬಿರುದೂ ಇದ್ದಿತ್ತು.

ಸಂಪ್ರದಾಯಗಳು, ನಂಬಿಕೆಗಳು, ಆಸೆ ಆಕಾಂಕ್ಷೆಗಳು

ನಿತ್ಯವ್ಯವಹಾರದ ಪದ್ಧತಿಗಳೂ ಅವುಗಳ ಹಿನ್ನೆಲೆಯಲ್ಲಿರುವ ಕಲ್ಪನೆಗಳೂ, ಉದ್ದೇಶಗಳೂ ಕಲೆತು ಸಂಪ್ರದಾಯವಾಗಿ ರೂಪತಳೆಯುತ್ತದೆ. ನಂಬಿಕೆಗಳು ಮಾನವನ ಮನಸ್ಸಿನ ಪ್ರಕ್ರಿಯೆಗಳಾಗಿವೆ. ಹೀಗಾಗಿ ಮನುಷ್ಯ ಜೀವನ ಹೆಚ್ಚಾಗಿ ಸಂಪ್ರದಾಯ ನಂಬಿಗೆಗಳ ಮೇಲೆ ನಿಂತಿದೆ. ಈ ಹಿನ್ನೆಲೆಯಲ್ಲಿ ದಾನ — ವ್ರತ, ನದೀಸ್ನಾನ, ಶುಭಾಶುಭ, ಪುಣ್ಯಪಾಪಗಳ ಕಲ್ಪನೆ ಬೆಳೆದುಬಂದಿದೆ. ಮಹಾನಾಡ ಪ್ರಭುಗಳು ಮಾಡಿದರೆನ್ನಲಾಗುವ ದ್ರವ್ಯ ಭೂಸ್ಥಾಪನೆ ಮತ್ತು ಬಲಿಗಳಿಗೆ ಸಂಬಂಧಿಸಿದ ವಿವರಗಳಲ್ಲಿನ ಗರ್ಭಿಣಿ ಹೆಂಗಸರ, ನರ, ಕುರಿ, ಮೇಕೆ, ಮಹಿಷ ಮುಂತಾದವುಗಳನ್ನು ಬಲಿಕೊಡುವ, ದ್ರವ್ಯಭೂಸ್ಥಾಪನೆ ಮಾಡುತ್ತಿದ್ದ ಮೂಢ ನಂಬಿಕೆಗಳು ಪ್ರಚಲಿತವಿದ್ದುದನ್ನು ಬಿಂಬಿಸುತ್ತದೆ.

ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವ ಮೂಲೋದ್ದೇಶದಿಂದ ಪುಣ್ಯ-ಪಾಪ, ಸ್ವರ್ಗ — ನರಕಗಳ ಕಲ್ಪನೆ ಮೊದ ಮೊದಲು ಜನ್ಮ ತಾಳಿತಾದರೂ ಒಂದು ನಂಬುಗೆಯಾಗಿ ಬಹುಪ್ರಾಚೀನ ಕಾಲದಿಂದಲೂ ಬೆಳೆದುಬಂದಿದೆ. 'ಕ್ರೂರ ಕರ್ಮಿಗೆ ಕಾಮುಕಗೆ ಮದಾಂಧ — ಗಾಚಾರರಹಿತಗೆ ನಿಂದಕಕೆ ಚೋರಗೆ ತನ್ನ ತಾಸರಿಯದ ದುರಂಹಕಾರಿಗೆ ಪರಲೋಕವಿಲ್ಲ' (7—59) ಎಂಬ ಮಾತಿನಿಂದ ಎಂತಹ ಕೃತ್ಯಗಳು ಪಾಪಕರವೆಂಬುದು ತಿಳಿಯುತ್ತದೆ, ಶಾಸನಗಳ ಕೊನೆಯಲ್ಲಿ ಬರುವ

ಮಾತುಗಳಾದ ; 'ಕಾಶಿಯಲ್ಲಿ ಗೋಹತ್ಯ ಮಾಡಿದ ಪಾಪ' 'ತಮ್ಮ ತಂದೆ ತಾಯಿಗಳನ್ನು ವಾರಣಾಸಿಯಲ್ಲಿ ಕೊಂದ ಪಾಪ' ಎಂಬುವು ಸಮಕಾಲೀನ ಸಮಾಜದಲ್ಲಿದ್ದ ಪಾಪ ಪುಣ್ಯಗಳ ಕಲ್ಪನೆಯನ್ನು ನೀಡುತ್ತವೆ.

ಸಿದ್ಧಾಪುರ — ಕಡೂತಿ ಕೋಟೆ ಕಟ್ಟುದಕ್ಕೆ ಆಗಿದ್ದ ಸಾಲ 1892 ವರಹಗಳನ್ನು ಜಿರ್ಲೆಮಲ್ಲಮ್ಮನೆಂಬುವವಳು ತೀರಿಸಿ ಹಾಗೇ ಕೇಲವು ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿಸಿ ಬಾವಿಗಳನ್ನು ತೆಗೆಸುತ್ತಾಳೆ. ತಾನು ನಿರ್ಮಿಸಿದ ಬಾವಿಯ ಸೋಪಾನದ ಮೇಲೆ ತನ್ನ ವಿಗ್ರಹವನ್ನು ಕಡೆಯಿಸಬೇಕು. ದಾರಿಯಲ್ಲಿ ಬರುವ ಪುಣ್ಯಾತ್ಮರು, ಈ ಬಾವಿಯಲ್ಲಿ ನೀರು ಕುಡಿದು ತಮ್ಮ ದಣಿವನ್ನು ಆರಿಸಿಕೊಳ್ಳಲಿ. ಅನಂತರ ತನ್ನ ತಲೆ ಮೇಲೆ ಒಂದು ಬೊಗಸೆ ನೀರು ಹಾಕಬೇಕೆಂದೂ, ತನ್ನ ವಂಶಸ್ಥರ ಮನೆಗಳಲ್ಲಿ ಹಸು ಎಮ್ಮೆಯಿದ್ದರೆ ತನ್ನ ತಲೆಗೂ ಬಾಯಿ ಬೆಣ್ಣೆ ಇಡಬೇಕೆಂದು ಬೇಡಿಕೊಳ್ಳುವುದಾಗಿ ತಿಳಿಸುವ ತಾಮ್ರ ಶಾಸನ (ಎಂ.ಎ.ಆರ್. 1929, ಮಧುಗಿರಿ 97, ಪು. 256) ದ ವಿವರವು ಅಂದಿನ ಸಾಮಾನ್ಯ ಮಹಿಳೆಯ ಆಕಾಂಕ್ಷೆ ಎಂಥದಿತ್ತು ಎಂಬುದನ್ನು ಬಿಂಬಿಸುತ್ತದೆ.

ಹಬ್ಬಗಳು

ಮಹಾನಾಡು ಪ್ರದೇಶದಲ್ಲಿ ಇಂದು ಪ್ರಚಲಿತವಿರುವ ಯುಗಾದಿ, ಗೌರಿ-ಗಣೇಶ. ದೀಪಾವಳಿ, ಸಂಕ್ರಾಂತಿ ಹಾಗೂ ಶಿವರಾತ್ರಿ ಹಬ್ಬಗಳನ್ನೆ ಅಂದೂ ಆಚರಿಸುತ್ತಿದ್ದರು. ಇವರ ಶಾಸನಗಳಲ್ಲಿ ಶಿವರಾತ್ರಿಯ ಪ್ರಸ್ತಾಪ ಮಾತ್ರ ಬಂದಿದ್ದು ಶಕ 1340 ನೆಯ ವಿಳಂಬಿ ಸಂವತ್ಸರದ ಮಾಘ ಬ 14 ಯ ಶಿವರಾತ್ರಿಯ ಪುಣ್ಯಕಾಲದಲ್ಲು 'ದೇವರ ಅಂಗರಂಗವೈಭವಕ್ಕೆ ದತ್ತಿ ಬಿಡಲಾಗಿದೆ (ಎಕ 12, ಮದ್ದಗಿರಿ 20). 'ಶಕ 1417 ರ ಸಂ. ಮಾಘ ಬ 14 ದ ಶಿವರಾತ್ರಿ' ಪ್ರಸ್ತಾಪ ಇನ್ನೊಂದು ಶಾಸನದಲ್ಲಿ ಬಂದಿದೆ. (ಎಕ 12, ಮದ್ದಗಿರಿ 33), ದಾನ ದತ್ತಿಗಳನ್ನು ನೀಡಲು ಶಿವರಾತ್ರಿಯನ್ನು ಒಂದು ಪುಣ್ಯದಿನವೆಂದು ಪರಿಗಣಿತವಾಗಿರುವುದು ಇತರ ವೀರಶೈವ ಅರಸುಮನೆತನಗಳ ಶಾಸನಗಳಲ್ಲು ಕಂಡು ಬಂದಿದೆ.

ಆಹಾರ-ತಿಂಡಿ ತಿನಿಸುಗಳು

ನಮ್ಮ ನಾಡಿಗರ ರಸಿಕತೆ ಅವರ ಆಹಾರದಿಂದಲೂ ಮನಗಾಣಬಹುದಾಗಿದೆ. ಓಗರ, ತೊಗೆ, ಮೇಲೋಗರ, ತುಪ್ಪ ಪಳಿದ್ಯ, ಕಲಸುವೋಗರ, ಇಡ್ಡಲಿಗೆ, ದೋಸೆ, ಸಕ್ಕರೆ, ಬಟ್ಟವಾಲು, ಪಾಯಸ, ಕರಜಿಕಾಯಿ. ಎಣ್ಣೆಯೂರಿಗೆ, ಸಕ್ಕರೆ ಬುರುಡೆ, ಮರಿವಿಳುಗಾಯಿ, ಹಾಲುಗಾರಿಗೆ, ಸವಡುರೊಟ್ಟಿ ಮುಂತಾದವು ಇಂ. ಚಿ, ಭೂ. ಸಾಂಗತ್ಯದಲ್ಲಿ ಉಕ್ತವಾಗಿವೆ,

ಹಾಗಲ, ಪಡಲ, ಬದನೆ, ತೊಗರಿ, ಜಿಂಜಿಯವರೆ, ಹೀರೇ ಮುಂತಾದ ಕಾಯಿಪಲ್ಲೆಗಳಿಂದ ಮೇಲೋಗರಗಳೂ (11–73), ಹಲವು ರೀತಿಯ ಕಲಪ್ರಗಳು, ಕಚ್ಚರಿಗಳು ಪಚ್ಚರಿಗಳು. ಸಿಹಿಕರಣಿ ರಸಾಯನಗಳು (11-74), ಶಾಲ್ಯನ್ನಕ್ಕೆ ಒಪ್ಪುವ ತೊವ್ವೆ. ತುಪ್ಪ, ಪಳಿದ್ಯಗಳೂ, ಹಪ್ಪಳ, ಸಂಡಿಗೆಗಳಷ್ಟೇ ಅಲ್ಲದೆ ಉಪ್ಪಗಾಯಿಗಳು (11-75), ಹೂರಿಗೆಗಡಬು, ಬಿಚ್ಚೊರಿಗೆ, ಬಿಸೂರಿಗೆ, ಗಾರಿಗೆ, ಎಳ್ಳಗಾರಿಗೆ, ಎಣ್ಣೆಬೆಣ್ಣೆಗಾರಿಗೆಗಳು (11-77) ಅಂಗರವಳಿಗೆ, ಬಿಚ್ಚಂಗರವಳಿಗೆ, ಹೋಲಂಗರವಳಿಗೆ, ಸಜ್ಜಿಗೆಯ ಅಂಗರವಳಿಗೆ, ಸುಖಿಯುನುಂಡೆ, ಫೇಣಿ, ತಾರಂಗಫೇಣಿ (11-78), ಲಡ್ಡಿಗೆ, ಜಲಿಪಾಲು ಲಡ್ಡುಗೆ, ತೆಂಗಾಯಿಲಡ್ಡುಗೆ, ಎಳ್ಳುಲಡ್ಡುಗೆ, ಎಡ್ಡಮಾದೆಣ್ಣೆ ಲಡ್ಡುಗೆ, ಮಣಿ ಲಡ್ಡುಗೆ, ಇಡ್ಡಲಿಗೆ (11-79), ಸಾರವತ್ತಾದ ಖರ್ಜೂರ. ಚಕ್ಕುಲಿ, ಸಂಬಾರ ಚಕ್ಕುಲಿ, ನೆಯ್ಯಪಗಳು, ನಾರಿಕೇಳಾಮೃತ ಘೃತಪೂರಸಾರ, ಕರ್ಪೂರಾಮೃತ (11–80) ಎಳ್ಳುಮಂಡಿಗೆ, ಸಕ್ಕರೆ ಮಂಡಿಗೆ, ಬೆಲ್ಲಮಂಡಿಗೆ, ಹಾಲಮಂಡಿಗೆ, ಹಾಲೌಗು ಹೋಳಿಗೆ (11-81), ಕರಜಿಯಕಾಯಿ, ಸುಧಾಮಂಜರಿ, ಎರಿಯಪ್ಪ, ಜೋಗೊಡುಗಳು, ಅತಿರಸ (11-82), ಪನಸಫಲಾಮೃತ, ಚೂತಫಲಾಮೃತ, ರಂಭಾಮೃತ, ದ್ರಾಕ್ಷಾಮೃತ, ರೊಟ್ಟಿಗಳು (11-83), ಕಿಂಡದರೊಟ್ಟಿ - ಸಕ್ಕರೆ - ತಿಳಿದುಪ್ಪ, ಹಾಲಂಡೆ, ಮಂಡಿಗೆ (11-89), ಕಜ್ಜಾಯ - ತುಪ್ಪ (11-90) ಇಮ್ಮಾವಿನ ತನಿವಣ್ಣರಸಾಯನ (11-91) - ಇವು ೧೦. ಜಿ, ಭೂ. ಸಾಂಗತ್ಯದಲ್ಲಿ ಉಕ್ತವಾಗಿರುವ ತಿಂಡಿ ತಿನಿಸುಗಳಾಗಿದ್ದು, ವಿಜಯನಗರ ಕಾಲದಲ್ಲಿ ಪ್ರಚಲಿತವಿದ್ದ ಈ ವೈವಿಧ್ಯಮಯವಾದ ಆಹಾರ - ತಿಂಡಿ ತಿನಿಸುಗಳ ಬಗ್ಗೆಯೇ ವಿಸ್ತೃತ ಅಧ್ಯಯನ ನಡೆಯಬೇಕಾದ ಅಗತ್ಯವಿದೆ.

ಸಾರ್ವಜನಿಕ ಚಟುವಟಿಕೆಗಳು :

ಕನ್ನಡಿಗರ ಔದಾರ್ಯ ಮುಖ್ಯವಾಗಿ ಪ್ರಕಟವಾಗಿರುವುದು-ಒಂದು ತಟಾಕ ನಿರ್ಮಾಣದಲ್ಲಿ ಮತ್ತೊಂದು ದೇವಸ್ಥಾನಗಳ ನಿರ್ಮಾಣದಲ್ಲಿ ಎಂಬ ಮಾತು ಸುಳ್ಳಲ್ಲ. ನಮ್ಮ ಪ್ರಾಚೀನರು ನೀರಿನ ಪೂರೈಕೆಗಾಗಿ ಹೆಚ್ಚಿನ ಆದ್ಯತೆ ನೀಡಿದ್ದಾರೆ. ಯಾವ ವ್ಯಕ್ತಿ ಕಟ್ಟಿಸಿದ ಕೆರೆಯಲ್ಲಿ ಪಶು-ಪ್ರಾಣಿ ಪಕ್ಷಿಗಳು ಹಾಗೂ ಮನುಷ್ಯರು ನೀರನ್ನು ಕುಡಿದು ತೃಪ್ತರಾಗುತ್ತಾರೋ ಅವನು ಅಶ್ವಮೇಧ ಯಾಗದ ಫಲವನ್ನು ಪಡೆಯುತ್ತಾನೆ ಎಂಬುದು ಮಹಾಭಾರತದ ವಾಣಿ. ಅಂತೆಯೇ ಮಹಾನಾಡಿನ ಪ್ರಭುಗಳು ಕೂಡ ತಮ್ಮ ಆಡಳಿತ ಅವಧಿ ಮತ್ತು ಪ್ರದೇಶದಲ್ಲಿ ಕೆರೆಕಟ್ಟೆಗಳನ್ನು ನಿರ್ಮಿಸಿ ಕೃಷಿ ಅಭಿವೃದ್ಧಿಗೆ ಕಾರಣರಾಗಿರುತ್ತಾರೆ. ಹಿರೇಚಿಕ್ಕಪ್ಪಗೌಡರು ಸಿದ್ದಾಪುರದಲ್ಲಿ ಕೆರೆ ಕಟ್ಟಿಸಿದರು. ಹಾಗೇ ಅದರ ನಿರ್ವಹಣೆಯ ವ್ಯವಸ್ಥೆಯನ್ನೂ ಮಾಡಿದ್ದರು.

ಎಂದಿನಿಂದಲೂ ದೇವಾಲಯಗಳ ನಿರ್ಮಾಣ ನಮ್ಮ ಅರಸರಿಗೆ ಪ್ರಿಯವಾದ ಕೆಲಸವಾಗಿತ್ತು. ಇದು ಜನರಲ್ಲಿದ್ದ ಧಾರ್ಮಿಕ ಪ್ರವೃತ್ತಿಯನ್ನು ಜೀವಂತವಾಗಿರಿಸುವ ಹಾಗೂ ದುಷ್ಟ ಶಕ್ತಿಗಳು ರಾಜಸತ್ತೆಯ ವಿರುದ್ಧ ನಡೆಸಬಹುದಾದ ಪಿತೂರಿ-ದಂಗೆ

ಇತ್ಯಾದಿಗಳನ್ನು ತಡೆಗಟ್ಟುವ ಪರೋಕ್ಷ ಉಪಾಯವಾಗಿದ್ದಿತೇನೋ ಎಂದೆನಿಸುತ್ತದೆ. ಮಹಾನಾಡ ಅರಸರಾದರೂ ಮುಮ್ಮಡಿಪಟ್ಟಣ, ಬಿಜ್ಜಾವರ, ಸಿದ್ಧಾಪುರ, ಚೆನ್ನರಾಯದುರ್ಗ ಮುಂತಾದ ಸ್ಥಳಗಳಲ್ಲಿ ಅನೇಕ ದೇವಾಲಯಗಳನ್ನು ಕಟ್ಟಿಸಿ, ನಿಯತವಾಗಿ ಪೂಜಾ ಕೈಂಕರ್ಯಗಳನ್ನು ನಡೆಯಿಸಲು ಪೂಜಾರಿಗಳನ್ನು ನೇಮಕ ಮಾಡಿದ್ದರು. ಕ್ರಿ.ಶ; 1594ರ ಸಿದ್ಧಾಪುರದ ಶಾಸನವು ಆ ಸ್ಥಳದಲ್ಲಿ ಆಂಜನೇಯ, ಭೈರವ, ವೃಷಭೇಶ್ವರ, ವೀರಭದ್ರ ಮತ್ತು ವಿಘ್ನೇಶ್ವರ ದೇವಾಲಯಗಳನ್ನು ಕಟ್ಟಿಸಿ ಪ್ರತಿಷ್ಠಾಪಿಸಿದ ವಿವರವನ್ನು ನೀಡುತ್ತದೆ. ಹಾಗೇ ಮಧುಗಿರಿಯಲ್ಲಿ ಮಲ್ಲೇಶ್ವರ ದೇವಸ್ಥಾನ, ಬೆಟ್ಟದಮೇಲೆ ಗೋಪಾಲಕೃಷ್ಣಸ್ವಾಮಿ ದೇವಸ್ಥಾನ, ಚನ್ನರಾಯದುರ್ಗ ದಲ್ಲಿ ಚೆನ್ನರಾಯಸ್ವಾಮಿ ದೇವಸ್ಥಾನವನ್ನು ಕಟ್ಟಿಸಿ ದೇವರನ್ನು ಪ್ರತಿಷ್ಠೆ ಮಾಡಿ ಸಿದ್ದರು. ಮುಮ್ಮಡಿ ಪಟ್ಟಣದಲ್ಲಿ ಈಶ್ವರ, ಬಸವನಕಟ್ಟೆ, ಆಂಜನೇಯ. ಬಸದಿ, ನೊಣಭೇಶ್ವರ, ಉಡಿಶಿಲದೇವರು, ರಾಮದೇವರ ದೇವಸ್ಥಾನಗಳನ್ನು ಕಟ್ಟಿಸಿದ್ದರಂತೆ. ಚಿವುಳುರಿನಲ್ಲಿ ನೊಣಭೋಶ್ವರ ದೇವಸ್ಥಾನವನ್ನು ಬಿಜ್ಜಾವರದಲ್ಲಿ ಕ್ರಿ.ಶ. 1524 ರಲ್ಲಿ ಮುಮ್ಮಡಿ ಚಿಕ್ಕಪ್ಪಗೌಡರಿಂದ ವೀರಭದ್ರ, ಬಸವನಕಟ್ಟೆ, ಆಂಜನೇಯ ದೇವಸ್ಥಾನಗಳು ನಿರ್ಮಾಣಗೊಂಡವೆಂದು ತಿಳಿದುಬರುತ್ತದೆ. ಇಮ್ಮಡಿ ಚಿಕ್ಕ ಭೂಪಾಲನು ಗತಿಸಿಹೋದ ತನ್ನ ಎರಡನೆಯ ಮಗ ಚೆನ್ನೇಂದ್ರದ ಹೆಸರಿನಲ್ಲಿ ಚೆನ್ನಕೇಶವಸ್ವಾಮಿ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಅವನ ಹೆಸರಿನಲ್ಲಿ ಆ ಸ್ಥಳವನ್ನು ಚೆನ್ನರಾಯದುರ್ಗವೆಂದು ಹೆಸರಿಸಿದನು. ಈತನು ಬ್ರಹ್ಮರಥವೊಂದನ್ನು ಮಾಡಿಸಿದ ವಿವರ ಇಂ.ಚಿ.ಭೂ. ಸಾಂಗತ್ಯದಲ್ಲಿ ಬಂದಿದೆ.

ಪ್ರಯಾಣಿಕರ ಬಾಯಾರಿಕೆಯನ್ನು ತಣಿಸಲು ಮಾರ್ಗಮಧ್ಯದಲ್ಲಿ ಅರವಟ್ಟಿಗೆಗಳು ಇರುತ್ತಿದ್ದವು. ಇವು ಸತ್ರ (ಛತ್ರ), ದೇವಸ್ಥಾನಕ್ಕೆ ಹೊಂದಿಕೊಂಡಿರುತ್ತಿದ್ದವು. ಅರವಟ್ಟಿಗೆ, ಸತ್ರ, ದೇವಾಲಯವಷ್ಟೇ ಆಗಿರದೆ ವಿದ್ಯಾಕೇಂದ್ರಗಳಾಗಿಯೂ ಸಮಾಜದ ನೈತಿಕ ಮಟ್ಟವನ್ನು ಮೇಲೆತ್ತುವುದಕ್ಕಾಗಿಯೇ ರೂಪತಾಳಿದಂತಹವು ಗಳಾದ ಮಠಗಳು ಈ ಅರಸರ ಕಾಲದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ತಲೆಯೆತ್ತಿದವೆನ್ನ ಬಹುದು. ಮುಮ್ಮಡಿಪಟ್ಟಣದಲ್ಲಿದ್ದ ವಿರಕ್ತರ ಸಪ್ಪೇದೇವರ ಮಠ, ಬಿಜ್ಜಾವರದಲ್ಲಿ ಗೋಸಲ ಚನ್ನಬಸಪ್ಪನವರ ಮಠ, ಬಳ್ಳಾರಿ ವಡೇರ ಮಠ, ಸಿದ್ಧಾಪುರಲ್ಲಿ ಒಂದು– ಹೀಗೆ ಇದ್ದವು. ಮಧುಗಿರಿಯಲ್ಲಿ ಒಂದು ಗೋಸಲ ಚನ್ನಬಸಪ್ಪನವರ ಮಠ, ಮೂರು ಜಂಗಮರ ಮಠಗಳು ಹುಟ್ಟಿಕೊಂಡಿದ್ದವು. ಈ ಮಠಗಳಲ್ಲಿ ಸಮಕಾಲೀನ ಪ್ರಚಲಿತವಿದ್ದ ಸಾಂಪ್ರದಾಯಿಕ ರೀತಿಯ ವಿದ್ಯಾದಾನದ ಜೊತೆಗೆ ದಾಸೋಹದ ಅಂಗವಾಗಿ ಅನ್ನದಾನವನ್ನು ಅವಿರತವಾಗಿ ನಡೆಯಿಸಿಕೊಂಡು ಬರುತ್ತಿದ್ದರೆನ್ನ ಬಹುದು. ಪ್ರಾಚೀನ ಕರ್ನಾಟಕದಲ್ಲಿ ಜನ ಭೂದಾನ ವಿದ್ಯಾದಾನಗಳಿಗಿಂತ ಅನ್ನ

ದಾನವೇ ಶ್ರೇಷ್ಠವೆಂದು ನಂಬಿದ್ದರಿಂದ ವಿದ್ಯಾದಾನದ ಜೊತೆ ಜೊತೆಯಲ್ಲೇ ಅನ್ನ ದಾನವನ್ನು ಮಾಡುತ್ತಿದ್ದ ಮಠಮಾನ್ಯಗಳಿಗೆ ಅರಸರಿಂದ, ಪ್ರಭುಗಳಿಂದ, ಜನರಿಂದ ಅನೇಕ ದಾನದತ್ತಿಗಳು ನೀಡಲ್ಪಡುತ್ತಿತ್ತು.

ಸಂತೆ ಮತ್ತು ಪೇಟೆಗಳನ್ನು ವ್ಯವಸ್ಥೆಗೊಳಿಸುವುದು ಒಂದು ಪುಣ್ಯಕಾರ್ಯವೆಂದು ಅಂದಿನ ಸಮಾಜವು ನಂಬಿದ್ದಿತು ; ಅಲ್ಲದೆ ಸಾರ್ವಜನಿಕರ ವ್ಯವಹಾರ ವಹಿವಾಟು ಗಳಿಗಾಗಿ ಸಂತೆ ಹಾಗೂ ಪೇಟೆಗಳ ಅಗತ್ಯ ಅನಿವಾರ್ಯವೂ ಆಗಿದ್ದಿತು. ಅಂತೆಯೇ ಬಿಜ್ಜಾವರದ ಅರಸರು ತಮ್ಮ ಆಳಿಕೆಯ ಪ್ರದೇಶದಲ್ಲಿ ಅನೇಕ ಸಂತೆಗಳನ್ನು, ವಿಶೇಷತಃ ಪೇಟೆಗಳನ್ನು ವ್ಯವಸ್ಥೆಗೊಳಿಸಿದ್ದುದು ಕಂಡುಬರುತ್ತದೆ. ವರ್ತಕ ವರ್ಗಕ್ಕೆ ಸೇರಿದ ಬಣಜಿಗ, ಕೋಮಟಿಗ, ಜಿರಿಕೋಮಟಿಗ, ಗಾಣಿಗ, ಕುಂಬಾರ ಮುಂತಾದವರು ಸಾಕಷ್ಟು ಸಂಖ್ಯೆಯಲ್ಲಿ ಇವರ ರಾಜ್ಯದಲ್ಲಿ ನೆಲೆಸಿದ್ದು, ವ್ಯಾಪಾರ ವ್ಯವಹಾರಗಳಲ್ಲಿ ನಿರತರಾಗಿದ್ದರು.

ವಿದ್ಯಾಭ್ಯಾಸ :

ಎಲ್ಲ ಕಾಲ ಎಲ್ಲ ದೇಶಗಳಲ್ಲಿ ವಿದ್ಯಾಭ್ಯಾಸದ ಬಗ್ಗೆ ಗೌರವವಿದ್ದಿತು. ಜ್ಞಾನಾರ್ಜನೆ ಒಂದು ನಾಡಿನ ಸಂಸ್ಕೃತಿಯ ಕುರುಹು. ನಮ್ಮ ನಾಡಿನ ಜನರ ಬದುಕನ್ನು ಧರ್ಮ ನಿಯಂತ್ರಿಸಿದ್ದಿತು. ಅಂತೆಯೇ ವಿದ್ಯಾಭ್ಯಾಸವೂ ಅದರಿಂದ ಹೊರತಾಗಿರಲಿಲ್ಲ. ಇಮ್ಮಡಿ ಚಿಕ್ಕಭೂಪಾಲನ ಆಸ್ಥಾನದಲ್ಲಿ ಕವಿಗಳು, ಗಮಕಿಗಳು, ವಾದಿಗಳು, ವಾಗ್ಮಿಗಳು, ವೇದಾಗಮವಿದರು, ವಿವಿಧ ವಿದ್ಯಾಕೋವಿದರು ಸೇರಿದಂತೆ ಸಕಲ ಪುರಾಣ ನಿಪುಣರಾದಿಯಾಗಿ ಶೋಭಿಸುತ್ತಿದ್ದರು. ಬಿಜ್ಜಾವರದ ಅನುಭವ ಮಂಟಪದಲ್ಲಿ ಜಂಗಮರು ಪಂಚಸ್ತವನ, ವೇದಪಾದಸ್ತವನ, ಶಿವಾಗಮಗಳು, ಅನ್ಯವಾದ ಕೋಳಾಹಲ, ಗಣಭಾಷ್ಯ, ಪುರಾತನರ ಸೂಕ್ತಿ ಸನ್ಮಾರ್ಗ, ಸುಸ್ಥಲಭೇದ, ಪುರಾತನ ಶಿವಶರಣರ ಹರಲೀಲಾ ಕಥನಗಳನ್ನೂ, ಜಾಬಾಲಾದಿ ಬೃಹದಾರಣ್ಯ, ನಾರಾಯಣ ಕಾಲಗ್ನಿರುದ್ರ, ಶ್ರೀರುದ್ರ, ಶಿವಸಂಕಲ್ಪ, ಪುರುಷಸೂಕ್ತ, ಪರಮ ಪಿಂಡಾದಿ ಶೂನ್ಯಾಂತವಾದೇಕೋತ್ತರ ಶತ ಸ್ಥಲಗಳು, ಬ್ರಹ್ಮಾದ್ವೈತಾರ್ಥ, ಮಂತ್ರಗೋಪ್ಯವೃತ್ತಿಗಳು, ಅವಧೂತ ಗೀತೆ, ವಿವೇಕ ಚಿಂತಾಮಣಿ, ಶಿವತತ್ವ ಚಿಂತಾಮಣಿ, ಸಾನಂದ ಚರಿತ, ಸಾರತ್ರಯ, ಶತಕತ್ರಯ, ಶತರತ್ನ, ವೀರ ಮಾಹೇಶ್ವರಾಚಾರ ಸಾರಸಂಗ್ರಹ, ಶೈವರತ್ನಾಕರ, ವೀರಶೈವಾಮೃತ, ಲಿಂಗಲೀಲಾ ವಿಲಾಸ, ಪ್ರಭುಲಿಂಗಲೀಲಾ, ಸಿಂಗಿರಾಜಾಹ್ವಯ, ಸಿದ್ಧಾಂತ ಶಿಖಾಮಣಿ, ದೀಕ್ಷಾ ಬೋಧೆ, ಸೋಮನಾಥಾಹ್ವಯ ಭಾಷ್ಯ, ತಾತ್ಪರ್ಯ ಸಂಗ್ರಹ ಇತ್ಯಾದಿ ಕೃತಿಗಳನ್ನು ಪಠನ, ಅಧ್ಯಯನ ಮಾಡುತ್ತಿದ್ದ ವಿವರ ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯದಲ್ಲಿ

ಬಂದಿದೆ. ಈ ವಿವರಗಳಿಂದ ಸಮಕಾಲೀನ ಮಠಮಾನ್ಯಗಳಲ್ಲಿ ಪ್ರಚಲಿತವಿದ್ದ ಪರಂಪರಾನುಗತ ಓದು, ಬರಹ, ಅಧ್ಯಯನ ವ್ಯಾಸಂಗಗಳು ಅವಿರತವಾಗಿ ನಡೆಯುತ್ತಿದ್ದುವೆಂದು ಗ್ರಹಿಸಬಹುದಾಗಿದೆ.

ಕ್ರೀಡೆಗಳು—ಮೃಗಯಾವಿಹಾರಾದಿ ಮನೋರಂಜನೆಗಳು :

ತಮ್ಮ ಬಾಳಿನ ಬೇಸರಿಕೆಯನ್ನು ಕಳೆದುಕೊಂಡು ಜೀವನವನ್ನು ಹಗುರಾಗಿಸಲು ಜನರು ಕಂಡುಕೊಂಡ ಮನೋರಂಜಕ ಸಾಧನೆಗಳಲ್ಲಿ ಕ್ರೀಡೆಯೂ ಒಂದು. ಇಮ್ಮಡಿ ಚಿಕ್ಕ ಭೂಪಾಲನ ಸಾಂಗತ್ಯದಲ್ಲಿ ಟಗರು, ಮಲ್ಲಯುದ್ಧ ಕೋಳಿ, ಪಿಕಗಳ ಕಾಳಗ, ಚದುರಂಗ, ನೆತ್ತವನಾಡುವುದೇ ಮುಂತಾದ ಕ್ರೀಡೆ-ಮನೋರಂಜನೆಗಳು ಉಕ್ತವಾಗಿದೆ (6-3), ಸಂಗೀತ, ನರ್ತನ, ಕೋಲಾಟಗಳು ಪ್ರಚಲಿತವಿದ್ದವು. ಆದಿಮಾನವನ ಕಾಲದಲ್ಲಿ ಆಹಾರಕ್ಕಾಗಿ ಮೃಗಗಳನ್ನು ಕೊಲ್ಲುವುದು, ತನ್ನ ಉಳಿವಿಗಾಗಿ ಮೃಗಗಳೊಂದಿಗೆ ಹೋರಾಡುವುದು ಅನಿವಾರ್ಯವೂ ಆಗಿತ್ತು, ಆದರೆ ಕಾಲಾಂತರದಲ್ಲಿ ಬೇಟೆ ಒಂದು ಮನೋರಂಜನೆಯ ಸಾಧನವಾಗಿಯೂ, ಹವ್ಯಾಸವಾಗಿಯೂ ಮುಂದುವರೆಯಿತು. ರಾಜರಿಗೆ ಬೇಟೆಯಾಡುವುದು ಒಂದು ವಿನೋದ. ಇದಕ್ಕೆ ಮೃಗಯಾವಿನೋದವೆಂದು ಹೆಸರು. ಮೊಲದ ಬೇಟೆಯು ಬಲೆಗಳ ನೆರವಿನಿಂದ ನಡೆಯುತ್ತಿತ್ತು. ಬಳ್ಳಾರ, ದೀಹದ ಮುಂತಾದ ಹಕ್ಕಿಗಳನ್ನು ಹಿಡಿದು ಕಾವಡಿಗಳಲ್ಲಿ ಇಡಿಕಿರಿದು ತುರುಕಿಕೊಂಡಿದ್ದ ; ವಿವಿಧ ಬಗೆಯ ಬಲೆಗಳನ್ನು ಬೇಟೆಯಾಡಿದ್ದ ಹುಲ್ಲೆ, ಎಕ್ಕಲ, ಹುಲಿ, ಹೆಬ್ಬುಲಿಗಳನ್ನು ಹೊತ್ತು ಸಾಗಿಸುತ್ತಿದ್ದ ಬೇಡರ ಚಿತ್ರ ಇಂ. ಚಿ. ಭೂ. ಸಾಂಗತ್ಯದಲ್ಲಿ ಪಡಿಮೂಡಿದೆ. ಬೇಟೆ ಕೇವಲ ವಿನೋದಕ್ಕೆ ಮಾತ್ರವೇ ಆಗಿರಲಿಲ್ಲ. ಅದು ಒಂದು ಲಾಭದಾಯಕ ಉದ್ಯಮವೂ ಆಗಿದ್ದಿತು. ಕೆಲವು ಪ್ರಾಣಿಗಳ ಚರ್ಮ, ಹಲ್ಲು, ಕೊಂಬು, ಉಗುರು ಮುಂತಾದವುಗಳಿಗೆ ಅಪಾರ ಬೆಲೆ ಇದ್ದಿತು. ಹೀಗಾಗಿ ವ್ಯಾಪಾರೀ ದೃಷ್ಟಿಯಿಂದಲೂ ಮೃಗಗಳ ಬೇಟೆ ನಡೆಯುತ್ತಿದ್ದಿತೆಂದು ಕೂಡ ಹೇಳಬಹುದಾಗಿದೆ.

ಕೋಟೆ ಕೊತ್ತಲಗಳು, ಭವನಗಳು :

ಒಂದು ನಾಡಿನ ಸುರಕ್ಷತೆಗೆ ಅಭೇದ್ಯವಾದ ಕೋಟೆ ಕೊತ್ತಲಗಳು ಅನಿವಾರ್ಯವಾಗಿದ್ದಿತು. ಹೋರಾಟ ಮತ್ತು ಯುದ್ಧಗಳಲ್ಲಿ 'ಕೋಟೆ' ಗಮನಾರ್ಹ ಪಾತ್ರವನ್ನು ವಹಿಸುತ್ತಿತ್ತು. ಹೀಗಾಗಿ ನಮ್ಮ ಆಳರಸರು ಕೋಟೆ ಕೊತ್ತಲಗಳ ರಚನೆಗೆ ಎಂದಿನಿಂದಲೂ ಅಧಿಕ ಗಮನವನ್ನು ನೀಡಿದ್ದರು. ಈ ಅರಸರು ಹಾವಳಿ ಭೈರೇಗೌಡನ ವಿರುದ್ಧ ಕೈಗೊಂಡ ಹರುವೆ ಕಾಳಗದಲ್ಲಿ ; 'ಕೋಟೆ'ಯು ಯುದ್ಧಗಳಲ್ಲಿ ಎಂತಹ ಪಾತ್ರವಹಿಸುತ್ತಿದ್ದಿತು ಎಂಬುದನ್ನು ಸೂಚಿಸುತ್ತದೆ. ಮಹಾನಾಡಿನ

ಅರಸರು ತಾವು ಸ್ಥಾಪಿಸಿದ ಊರುಗಳಲ್ಲಷ್ಟೇ ಅಲ್ಲದೆ ಇತರ ಸ್ಥಳಗಳಲ್ಲೂ ಕೋಟೆ ಕೊತ್ತಲಗಳನ್ನು ಕಟ್ಟಿಸಿದ್ದರೆಂಬ ವಿವರ ಸಮಕಾಲೀನ ಶಾಸನ ಮತ್ತು ನಂತರದ ದಾಖಲೆಗಳಲ್ಲಿ ಲಭ್ಯವಿದೆ.

ರಾಜ್ಯದ ಅಥವಾ ಒಂದು ಸ್ಥಳದ ರಕ್ಷಣೆಗೆ ಕೋಟೆ ಕೊತ್ತಲಗಳು ಹೇಗೆ ಮುಖ್ಯವೋ ಹಾಗೆ ವಾಸಿಸಲು ಮನೆಗಳು ಭವನಗಳು ಮುಖ್ಯ. ಪ್ರಭು ವರ್ಗದ ಜನರಂತೂ ಸುಂದರವಾದ ಸುಸಜ್ಜಿತವಾದ ಭವನಗಳಲ್ಲಿ ವಾಸಿಸುತ್ತಿದ್ದರು. ಹಾಗೆಯೇ ಅವರು ತಮ್ಮ ಗುರುಗಳಿಗೆ ಕಟ್ಟಿಸಿಕೊಟ್ಟಿದ್ದ ಮಠದ ಭವನಗಳಾದರೂ ಭವ್ಯವಾಗಿಯೇ ಇರುತ್ತಿದ್ದರು. ಅಂತೆಯೇ ಈ ಅರಸರ ಕಾಲದ ಒಂದು ಮಠದ ಭಿತ್ತಿಯು 'ಬಸವಾದಿ ಸಕಲ ಪುರಾತನರ ಕಥಾನಕಗಳಿಂದ ಚಿತ್ರಿತಗೊಂಡು ಶೋಭಿಸುತ್ತಿದ್ದಿತು. (10-52). ಆ ಮಠದ ಮೇಲ್ಕಟ್ಟಾದರೂ' ಬಟ್ಟೆಯ ಮುತ್ತಿನ ಜೂಳಿಯ ವಿಳಿವಿಟ್ಟ ಮುತ್ತಿನ ಕುಚ್ಚುಗಳು ಕಟ್ಟಿ ನೇಲುವ ಪೂಮಾಲೆಗಳಿಂದ ಶೋಭಿಸುತ್ತಿದ್ದಿತು. (10-53). ಅಲ್ಲಿನ ವೇದಿಕೆಯು 'ಕಂಗೊಳಿಸುವ ಮೃದು ಗದ್ದುಗೆಯಿಂ ಲೈಪನಂಗೈದು ವಿರಚಿತಲೆಸೆವ ರಂಗವಲ್ಲಿಯ ರಚನೆಯೊಳಲ್ಲಿ ವೇದಿಕೆ ತಾಂಗಾಡಿವಡೆದು ರಂಜಿಪ್ಪುದು (10-54) ಆಗಿದ್ದಿತು. ಅಷ್ಟೇ ಅಲ್ಲದೆ ಆ ಭವನದ ಬಾಗಿಲವಾಡವು' ಎಸಕವಡೆದ ರನ್ನಗಳ ಬಿನ್ನಣದೆ ಕೇಲಿಸಿ ಸೊಂಪದೋರಿ ಚಿತ್ರಿಸಿದ ಕುಸುರಿ ಗೆಲಸದಿಂದ ಕೂಡಿದ್ದಿತು. (10-49). 'ಪವಳದ ಕಂಬ ಪಚ್ಚೆಯ ತೊಲೆ ನೀಲದ ಜವಳಿ ಬೋದಿಗೆ ಮರಕತದೆ ಸವೆದ ಮೇಲ್ಕಲಗೆಯಿಂ ಜಗಜಗಿಸುತೆಮಣಿ ಮಣಿಭವನವೊಪ್ಪುವುದೇನನೆಂಬೆ' (10-50)-ಎಂದು ಅಲ್ಲಿನ ಕಂಬ, ತೊಲೆ, ಬೋದಿಗೆಗಳ ವಿಶಿಷ್ಟತೆಯನ್ನು ಕವಿ ಕಣ್ಣಿಗೆ ಕಟ್ಟುವಂತೆ ಮೂಡಿಸಿದ್ದಾನೆ.

ಆರ್ಥಿಕ :

ಪ್ರಕೃತಿದತ್ತವಾದ ಎಲ್ಲ ಕೊಡುಗೆಗಳು, ಅಂದರೆ ಮಣ್ಣು, ನೀರು, ಖನಿಜ, ಅರಣ್ಯ ಇತ್ಯಾದಿಗಳು—'ನೈಸರ್ಗಿಕ ಸಂಪನ್ಮೂಲಗಳು' ಎಂದೆನಿಸಿಕೊಳ್ಳುತ್ತವೆ. ಇವನ್ನು ಸದುಪಯೋಗಪಡಿಸಿಕೊಳ್ಳುವ ನಾಡಿನ ಜನರ ಪರಿಶ್ರಮವು ಆ ನಾಡಿನ ಪರಿಶ್ರಮವು ಆ ನಾಡಿನ ಆರ್ಥಿಕ ವ್ಯವಸ್ಥೆಯಲ್ಲಿ ಗಣನೀಯ ಪಾತ್ರ ವಹಿಸಿರುತ್ತದೆ.

ಭೂಮಿಯನ್ನು ಸ್ಥೂಲವಾಗಿ ಕೃಷಿಗೆ ಯೋಗ್ಯವಾದ ಹಾಗೂ ಯೋಗ್ಯವಲ್ಲದ ಭೂಮಿಯೆಂದು ವಿಭಾಗಿಸಬಹುದು. ಹೊಸ ಊರುಗಳ ಸೃಷ್ಟಿಯೊಂದಿಗೆ ಅದರ ಸುತ್ತಮುತ್ತಲು ಕೃಷಿಗೆ ಯೋಗ್ಯವಾಗುವಂತೆ ಭೂಮಿ ಮಾರ್ಪಡುತ್ತಿತ್ತು. ಅದರಲ್ಲಿ ಸ್ವಲ್ಪ ಭಾಗವನ್ನು ಪಶುಪಾಲನೆಗೆ ಅನುಕೂಲವಾಗುವಂತೆ, ಗೋಮಾಳಗಳಿಗಾಗಿ ಮೀಸಲಿಡಲಾಗುತ್ತಿತ್ತು. ಸಾಮಾನ್ಯವಾಗಿ ಊರಿಗೊಂದು ಗೋಮಾಳವಿರುತ್ತಿತ್ತು.

ಮಳೆಯು ಆಶ್ರಯದಲ್ಲಿ ಮಾತ್ರ ಬೆಳೆ ಬೆಳೆಯುವಂತಿದ್ದರೆ ಅದನ್ನು ದೇವಮಾತೃಕೆ ಎನ್ನುತ್ತಿದ್ದರು. ಇದನ್ನೇ ಶಾಸನಗಳಲ್ಲಿ ಕಾಡಾರಂಭ, ಹೊಲ ಅಥವಾ ಬೆದ್ದಲು ಎಂದು ಮುಂತಾಗಿ ಕರೆಯಲಾಗಿದೆ. ನದಿ, ಕೆರೆ, ಬಾವಿ ಮುಂತಾದವುಗಳ ಆಶ್ರಯವಿರುವವನ್ನು ನದಿಮಾತೃಕೆ ಎನ್ನುತ್ತಿದ್ದರು. ನೀರಾರಂಭ ಗದ್ದೆ, ತೋಟ ಎಂಬುವು ಇದಕ್ಕೆ ಪರ್ಯಾಯ ನಾಮಗಳಾಗಿವೆ.

ಜಯಮಂಗಲಿ ನದಿ ಮತ್ತು ಅದಕ್ಕೆ ನೀರುಣಿಸುವ ಹಳ್ಳಕೊಳ್ಳಗಳ ಜಾಲವುಳ್ಳ ಪ್ರದೇಶದಲ್ಲಿ, ಮೊದಲಿಗೆ ತಮ್ಮ ಆಳಿಕೆಯನ್ನು ಆರಂಭಿಸಿ, ಬಿಜ್ಜಾವರದ ಪ್ರಭುಗಳು, ಅಲ್ಲಿ ವ್ಯವಸಾಯ ಯೋಗ್ಯವಾದ ಭೂಮಿ ವಿಶೇಷವಾಗಿ ರೂಪುಗೊಳ್ಳಲು ಕಾರಣ ರಾದರು. ಪಾಳುಭೂಮಿಯನ್ನು ವ್ಯವಸಾಯ ಯೋಗ್ಯಭೂಮಿಯನ್ನಾಗಿ ಪರಿವರ್ತಿಸಲು ತೆರಿಗೆಗಳ ವಿನಾಯಿತಿ ನೀಡಿ ಪ್ರೋತ್ಸಾಹಿಸುತ್ತಿದ್ದುದು ಹಿಂದಿನಿಂದಲೂ ಪ್ರಚಲಿತವಿದ್ದ ಪದ್ಧತಿ. ಇವರ ಆಳಿಕೆಯ ಕಾಲದಲ್ಲಿ ಮುಮ್ಮಡಿಪಟ್ಟಣ, ಬಿಜ್ಜಾವರ, ಸಿದ್ದಾಪುರ, ಮಧುಗಿರಿ ಮುಂತಾದ ಊರುಗಳ ರಚನೆ ಇಲ್ಲವೆ ಅಭಿವೃದ್ಧಿಪಡಿಸುವ ಕಾರ್ಯಗಳು ವ್ಯಾಪಕವಾಗಿ ನಡೆದು ಸಾಕಷ್ಟು ಭೂಮಿ ವ್ಯವಸಾಯ ಯೋಗ್ಯವಾಗು ವಂತಾಯಿತು. ಸಿದ್ದಾಪುರ ಮುಂತಾದ ಕಡೆ ಕೆರೆ ಕಟ್ಟೆಗಳನ್ನು ಕಟ್ಟಿಸಿ ನೀರಾವರಿಗೂ ಅನುಕೂಲ ಮಾಡಿಕೊಟ್ಟಿದ್ದರು. ಭೂಮಿಯು ಸಂಪತ್ತಿನ ಮೂಲವಾದುದರಿಂದ ಮಾನವನ ಬಹುಪಾಲು ಆರ್ಥಿಕ ಜೀವನವು ಅದನ್ನು ಅವಲಂಬಿಸಿದ್ದಿತು. ಭೂಮಾಲಿಕತ್ವವು ಸಮಾಜದಲ್ಲಿ ಗೌರವಾರ್ಹವಾಗಿದ್ದಿತು.

ಒಕ್ಕಲುತನ :

ಕೈಗಾರಿಕೀಕರಣವಾಗುವುದಕ್ಕೆ ಪೂರ್ವದಲ್ಲಿ ನಮ್ಮ ನಾಡಿನ ಯಾವುದೇ ಭಾಗದ ಬಹುಜನರ ಜೀವನೋಪಾಯದ ಮುಖ್ಯ ಕಸುಬು ಕೃಷಿ ಅಥವಾ ಒಕ್ಕಲುತನ ವಾಗಿದ್ದಿತು. ಅದು ವ್ಯಾಪಾರ, ಉದ್ಯೋಗ, ಕೈಕಸುಬುಗಳನ್ನೊಳಗೊಂಡಂತಹು ದಾಗಿದ್ದು, ನಾಡಿನ ಸಮಸ್ತ ಆದಾಯಕ್ಕೆಲ್ಲ ಮೂಲ ಕೇಂದ್ರ ಬಿಂದುವಾಗಿದ್ದಿತು. ಆದ್ದರಿಂದಲೇ ನಮ್ಮ ಪೂರ್ವಿಕರು ಕೃಷಿಯ ಅಭಿವೃದ್ಧಿಯೆಂದರೆ ನಾಡಿನ ಅಭಿವೃದ್ಧಿ ಯೆಂದೇ ಭಾವಿಸಿದ್ದರು. ಹೊಲ ಗದ್ದೆ ತೋಟಗಳಲ್ಲಿ ಬೆಳೆಯುತ್ತಿದ್ದ ಬೆಳೆಗಳ ಪ್ರಸ್ತಾಪ ಪ್ರಾಸಂಗಿಕವಾಗಿ ಸಮಕಾಲೀನ ಶಾಸನ ಹಾಗೂ ಸಾಹಿತ್ಯ ಕೃತಿಗಳಲ್ಲಿ ದಾಖಲಾಗಿದೆ. ಮಹಾನಾಡು ಪ್ರಭುಗಳ ಆಳಿಕೆಯ ಪ್ರದೇಶದಲ್ಲಿ ಇಂದಿಗೂ ಪ್ರಧಾನವಾಗಿ ಬೆಳೆಯುತ್ತಿರುವ ರಾಗಿ, ಬತ್ತ ಹಾಗೂ ಕೆಲವು ದ್ವಿದಳ ಧಾನ್ಯಗಳೇ ಅಂದೂ ಬೆಳೆಯುತ್ತಿದ್ದರು. ಗದ್ದೆಗಳಲ್ಲಿ ಬತ್ತ, ಕಬ್ಬು, ತೋಟಗಳಲ್ಲಿ ತೆಂಗು, ವೀಳೆಯದೆಲೆ ಇತ್ಯಾದಿಗಳನ್ನು ಬೆಳೆಸುತ್ತಿದ್ದರು. ಅಲ್ಲದೆ ಹೂ, ಕಾಯಿಪಲ್ಲೆ ಹಣ್ಣುಗಳು ತೋಟದ ಬೆಳೆಗಳಾಗಿದ್ದವು. ಇಂ.ಚಿ.ಭೂ. ಸಾಂಗತ್ಯದಲ್ಲಿ ಹಾಗಲ,

ಪಡಲ, ಬದನೆ, ತೊಗರಿ, ಚಂಚಿಯುವರೆ, ಹೀರೇ ಮುಂತಾದ ಕಾಯಿಪಲ್ಲೆಗಳ ಪ್ರಸ್ತಾಪ ಬಂದಿದೆ. ಇವಮ್ಮಾವು, ನಿಂಬೆ, ಹೇರಿಳೆ, ಕಿತ್ತೀಳೆ, ಉತ್ತತ್ತಿ, ದಾಳಿಂಬ, ಪಲಸ, ಬಾಳೆ ಮುಂತಾದ ಹಣ್ಣಿನ ಮರಗಳ ಪ್ರಸ್ತಾಪವಿದೆ (8-43). ಕೆಂದಾವರೆ, ಗೋರಂಟಿ, ಬಕುಳ, ನಂದ್ಯಾವರ್ತ, ಮಲ್ಲಿಗೆ, ಜಾಜಿ, ಶಾವಂತಿಗೆ, ಸಂಪಿಗೆ, ಮೊಲ್ಲೆ, ಪಾದರಿ, ಪಚ್ಚೆದವನ, ಕೇತಕೀ, ಉಮ್ಮತ್ತ (10-89); ಸುರಗಿ, ಇರುವಂತಿಗೆ, ಅಸುಗೆ, ಪಡ್ಡಳಿ, ಮರುಗ (8-44); ಮುಂತಾದ ಪುಷ್ಪ—ಪತ್ರಗಳು ಕಾವ್ಯದಲ್ಲಿ ಉಕ್ತವಾಗಿವೆ. ಈ ಉಲ್ಲೇಖಗಳ ಹಿನ್ನೆಲೆಯಲ್ಲಿ ಮಹಾನಾಡಿನ ಭೂಮಿ ಫಲವತ್ತಾಗಿದ್ದಿತೆಂದೂ, ಕೃಷಿ ಇಲ್ಲವೆ ಕಾಡಿನ ಉತ್ಪನ್ನಗಳಿಂದ ರಾಜ್ಯದ ಬೊಕ್ಕಸಕ್ಕೆ ಸಾಕಷ್ಟು ಆದಾಯ ಬರುತ್ತಿದ್ದಿತೆಂದು ಭಾವಿಸಬಹುದಾಗಿದೆ.

ದನಕರುಗಳು : ಹೈನುಗಾರಿಕೆ

ಒಕ್ಕಲುತನಕ್ಕೆ ಎಂದಿನಿಂದಲೂ ದನಕರುಗಳ ಶ್ರಮವನ್ನು ಬಳಸಿಕೊಳ್ಳಲಾಗುತ್ತಿದೆ. ಹೀಗಾಗಿ ಕೃಷಿಯಲ್ಲಿ ಅವುಗಳ ಪಾತ್ರವೂ ಹಿರಿದಾದುದೇ. ಹೊಲಗದ್ದೆಗಳನ್ನು ಉತ್ತಿಬಿತ್ತುವುದಕ್ಕಷ್ಟೇ ಅಲ್ಲದೆ ರೈತರು ಬೆಳೆದ ಉತ್ಪನ್ನಗಳನ್ನು ಸಾಗಾಣಿಕೆ ಮಾಡಲು ಬಂಡಿಗಳನ್ನು ಎಳೆಯಲು ಅವು ನೆರವಾಗಿದ್ದವು. ಜೊತೆಗೆ ಅವು, ಒಂದು ಹಂತದಲ್ಲಿ ಮಾನವನ ಸಾರಿಗೆ ಸಂಪರ್ಕದ ಸಾಧನವಾಗಿಯೂ ನೆರವಾಗಿರುತ್ತವೆ.

ಇಂದೂ, ಕೃಷಿಕನ ಮುಖ್ಯ ಉಪಕಸುಬು ಹೈನುಗಾರಿಕೆ; ಅದು, ಅಂದೂ ಕೂಡ ಅವನ ಆರ್ಥಿಕ ಮೂಲವಾಗಿದ್ದಿತು. ಉತ್ತಮ ತಳಿಗಳನ್ನು ಪಡೆಯಲು ಓರಿಗಳನ್ನು ಊರೂರಿಗೂ ಬಿಟ್ಟಿರುತ್ತಿದ್ದರು. ಹಾಲು, ಮೊಸರು, ಬೆಣ್ಣೆ, ತುಪ್ಪಗಳನ್ನು ಉತ್ಪಾದಿಸಿ ಹತ್ತಿರದ ಪೇಟೆ ಸಂತೆಗಳಲ್ಲಿ ವಿಕ್ರಯಿಸಿ, ವಿನಿಮಯಿಸುತ್ತಿದ್ದರು.

ಉತ್ಪಾದನೆ-ಕೈಗಾರಿಕೆ

ಈ ಮೇಲೆಯೇ ಹೇಳಿರುವಂತೆ ಅರ್ಥ ವ್ಯವಸ್ಥೆಯಲ್ಲಿ ಕೈಗಾರಿಕೆಗಳ ಪಾತ್ರವೂ ಗಮನಾರ್ಹವಾದುದಾಗಿದೆ. ಕೃಷಿ ಹಾಗೂ ಭೂಮೂಲದ ಕಚ್ಚಾ ಪದಾರ್ಥಗಳೇ ಕೈಗಾರಿಕೆಗಳ ಮೂಲವಾದುದರಿಂದ ಅವು ಒಂದನ್ನುಳಿದು ಮತ್ತೊಂದಿಲ್ಲ.

ಎಣ್ಣೆ ತಯಾರಿಕೆ

ಮೊನ್ನೆ ಮೊನ್ನೆಯವರೆಗೂ ಬಹುತೇಕ ಗ್ರಾಮಗಳಲ್ಲಿ ಎಣ್ಣೆ ಗಾಣಗಳು ಹಾಗೂ ವೃತ್ತಿನಿರತರಾಗಿದ್ದ ಗಾಣಿಗರನ್ನು ಕಾಣಬಹುದಾಗಿತ್ತು. ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿದ್ದ, ನಿತ್ಯ ಬದುಕಿಗೆ ಅಗತ್ಯವಾಗಿದ್ದ ಗಾಣದೆಣ್ಣೆಯ ಉತ್ಪಾದನೆಯ ಕೈಗಾರಿಕೆಯು ಗಮನಾರ್ಹವಾದುದಾಗಿದ್ದಿತು. ಐಹುಪಾಲು ಎಣ್ಣೆಯನ್ನು ಆಹಾರ

ಪದಾರ್ಥಗಳ ತಯಾರಿಕೆಯಲ್ಲಿ ಹಾಗೂ ದೀಪಗಳಿಗೆ ಉಪಯೋಗಿಸಲಾಗುತ್ತಿತ್ತು. ಅಲ್ಲದೆ ದೇವಾಲಯಗಳ ನಂದಾ ದೀವಿಗೆಯ ನಿಮಿತ್ತವಾಗಿ ಗಾಣಗಳನ್ನು ದತ್ತಿಬಿಡಲಾಗುತ್ತಿತ್ತು. ಮಹಾನಾಡಿನ ಮುಖ್ಯ ಸ್ಥಳಗಳಾಗಿದ್ದ ಮುಮ್ಮಡಿಪಟ್ಟಣ, ಬಿಜ್ಜಾವರ, ಸಿದ್ಧಾಪುರ, ಮಧುಗಿರಿಗಳಲ್ಲಿ ಎಣ್ಣೆಯ ಉತ್ಪಾದನೆ ಮತ್ತು ಮಾರಾಟಗಾರರಾಗಿದ್ದ ಗಾಣಿಗರು ಸಾಕಷ್ಟು ಸಂಖ್ಯೆಯಲ್ಲಿ ನೆಲೆಗೊಂಡಿದ್ದ ಬಗ್ಗೆ ದಾಖಲೆಗಳಿಂದ ತಿಳಿದುಬರುತ್ತದೆ. ಎಣ್ಣೆಗಾಣದ ಕೈಗಾರಿಕೆಯಿಂದ ಸರಕಾರಕ್ಕೆ ತೆರಿಗೆ ಸಂದಾಯವಾಗುತ್ತಿತ್ತು. ಇದನ್ನು 'ಗಾಣಾಯ', 'ಗಾಣದೆರೆ' ಎಂದು ಕರೆಯಲಾಗುತ್ತಿತ್ತು.

ಬೆಲ್ಲ-ಸಕ್ಕರೆ

ಜಯಮಂಗಲಿ ನದಿಯ ಆಶ್ರಯ, ಅನೇಕ ಕೆರೆ ಕಟ್ಟೆಗಳ ಅಸ್ತಿತ್ವದಿಂದಾಗಿ ನೀರಾವರಿಯಲ್ಲಿ ಬತ್ತದ ಜೊತೆಗೆ ಕಬ್ಬನ್ನು ವಿಶೇಷವಾಗಿ ಬೆಳೆಯುತ್ತಿದ್ದರು. ಅಂತೆಯೇ ಬೆಲ್ಲ ಸಕ್ಕರೆಗಳ ತಯಾರಿಕೆಗೆ ಸಂಬಂಧಿಸಿದ ಕೈಗಾರಿಕೆ ಈ ನಾಡಿನಲ್ಲಿ ಅಸ್ತಿತ್ವದಲ್ಲಿದ್ದಿತು. ಪ್ರಾಚೀನ ಕಾಲದಿಂದಲೂ ದಿನನಿತ್ಯದ ಆಹಾರ ಪಾನೀಯಗಳಲ್ಲಿ ಬೆಲ್ಲ–ಸಕ್ಕರೆಗಳು ಬಳಕೆಯಾಗುತ್ತಿದ್ದುದು ಇವರ ಕಾಲದಲ್ಲಿ ಪ್ರಚಲಿತವಿದ್ದ ಸಿಹಿ ತಿನಿಸುಗಳಾದ ಸುಖಿಯ ನುಂಡೆ, ಫೇಣಿ, ತಾರಂಗಫೇಣಿ, ಲಡ್ಡಿಗೆ, ಬೆಲಪಾಲಲಡ್ಡುಗೆ, ತೆಂಗಾಯಿ ಲಡ್ಡುಗೆ ಮುಂತಾದವುಗಳ ಉಲ್ಲೇಖದಿಂದ ಮನಗಾಣಬಹುದಾಗಿದೆ.

ಉಪ್ಪು ತಯಾರಿಕೆ

ಮಹಾನಾಡಿನ ಅನೇಕ ಸ್ಥಳಗಳಲ್ಲಿ ಉಪ್ಪಿನ ತಯಾರಿಕೆಯಲ್ಲಿ ನಿರತರಾಗಿದ್ದ ಉಪ್ಪಾರರು ಇದ್ದರು. ಉಪ್ಪಾರರು ಉಪ್ಪಿನ ಮಳಗಳಿಂದ ಉಪ್ಪನ್ನು ತಯಾರಿಸುತ್ತಿದ್ದರು. ಇದು ದಿನನಿತ್ಯದ ಆಹಾರ ಪದಾರ್ಥಗಳಲ್ಲಿ ಬಳಕೆಗೊಳ್ಳುವ ಬಹು ಮುಖ್ಯವಾದ ಪದಾರ್ಥ. ಉಪ್ಪಾರರೇ ಉಪ್ಪಿನ ಮಾರಾಟದ ಕಾರ್ಯವನ್ನೂ ನಿರ್ವಹಿಸುತ್ತಿದ್ದರು: ಉಪ್ಪಿನ ಮೋಳೆಯ ಮೇಲೆ ತೆರಿಗೆ ಹಾಕಲಾಗುತ್ತಿತ್ತು.

ಬಟ್ಟೆ ತಯಾರಿಕೆ

ಮಹಾನಾಡಿನ ಗುಬ್ಬಿ ಸ್ಥಳವು ಪ್ರಾಚೀನ ಕಾಲದಿಂದಲೂ ಬಟ್ಟೆ ಕೈಗಾರಿಕೆಗೆ ಹೆಸರಾಗಿದ್ದಿತೆಂದು ತೋರುತ್ತದೆ. ಬಟ್ಟೆ ತಯಾರಿಕೆಯಲ್ಲಿ ನಿರತರಾಗಿದ್ದ ದೇವಾಂಗ ಜನ, ನೇಯ್ಗೆಯವರು ಉಡುಪುಗಳನ್ನು ಸಿದ್ಧಪಡಿಸುತ್ತಿದ್ದ ದರ್ಜಿಗಳೇ ಮುಂತಾದವರು ಸಾಕಷ್ಟು ಸಂಖ್ಯೆಯಲ್ಲಿಯೇ ಈ ನಾಡಿನಲ್ಲಿದ್ದರು. ಅಲ್ಲದೆ ಬಟ್ಟೆ ತಯಾರಿಸಲು ಬೇಕಾದ ಮಗ್ಗಗಳ ಮೇಲೆ ಮಗ್ಗದೆರೆ ಎಂಬ ತೆರಿಗೆಯನ್ನು ನೇಕಾರರು ನೀಡಬೇಕಾಗಿದ್ದಿತು.

ವಾಣಿಜ್ಯ ವ್ಯವಹಾರ

ಸಾಮಾನ್ಯವಾಗಿ ರಾಜಧಾನಿ ಹಾಗೂ ಕೆಲವು ಪ್ರಾದೇಶಿಕ ಮುಖ್ಯ ಸ್ಥಳಗಳು ವಾಣಿಜ್ಯ ಕೇಂದ್ರಗಳಾಗಿರುತ್ತಿದ್ದವು. ವಾಣಿಜ್ಯವು ವೃತ್ತಿ ಕೈಗಾರಿಕೆಗಳ ಉತ್ಪಾದನೆಯನ್ನು ವಿತರಿಸುವ ಪ್ರಮುಖ ಕೇಂದ್ರಗಳಾಗಿರುತ್ತಿದ್ದವು. ಈ ನಾಡಿನ ಗುಬ್ಬಿ, ತುಮಕೂರು, ಮಧುಗಿರಿ ಸ್ಥಳಗಳು ಇಂದಿಗೂ ಮುಖ್ಯ ವಾಣಿಜ್ಯ ಕೇಂದ್ರಗಳಾಗಿವೆ. ಮಹಾನಾಡು ಅರಸು ಮನೆತನದ ಗುಬ್ಬಿ ಶಾಖೆಯ ಅರಸರು ಗುಬ್ಬಿಯನ್ನು ಒಂದು ಪ್ರಮುಖ ವಾಣಿಜ್ಯ ಕೇಂದ್ರವನ್ನಾಗಿಸಲು ಶ್ರಮಿಸಿದ್ದರು ಎಂಬುದಕ್ಕೆ, ತಾಮ್ರ ಶಾಸನವೊಂದು ಆಧಾರ ನೀಡುತ್ತದೆ. ಶ್ರೀಮನ್ಮಹಾನಾಡ ಪ್ರಭು ಗುಬ್ಬಿ ಮುಮ್ಮಡಿ ಹೊನ್ನಪ್ಪಗೌಡರಯ್ಯನವರು ಗುಬ್ಬಿಪೇಟೆಯ ಚೆನ್ನಸೆಟ್ಟಿಯ ಮೊಮ್ಮಗನಾದ ನೆಲಮಂಗಲದ ಚೆನ್ನಸೆಟ್ಟಿಗೆ ಗುಬ್ಬಿಪೇಟೆಯ ಶೆಟ್ಟಿತನದ ಬಗ್ಗೆ ಕೊಡಗಿ ಹಾಕಿಕೊಟ್ಟು ಗುಬ್ಬಿ ಪ್ಯಾಟೆಗೆ ಸಲುವ ಆಯಸ್ವಾಮ್ಯವನು ಬಿಟ್ಟುಕೊಟ್ಟಿರುವ ವಿವರ ಬಂದಿದೆ. ಕ್ರಿ.ಶ. 1503 ರ ಮಧುಗಿರಿ ತಾಲ್ಲೂಕು ಹುಲಿಕುಂಟೆ ಗ್ರಾಮದ ಶಾಸನವು ಶ್ರೀಮತು ಅಯ್ಯಾವೊಳೆ ಮುಖ್ಯರಾದ (ಸ) ಜನ ಶುದ್ಧ ಶಿವಾಚಾರ ಸಂಪನ್ನರಾದ ದೇವರಾಯ ಪಟ್ಟಣದ ಉದ್ದಂಡಸೆಟ್ಟಿಯ ಮಕ್ಕಳು ವೀರಶೆಟ್ಟಿಯರ ಉಲ್ಲೇಖವಿದೆ. ಈ ವಿವರಗಳಿಂದ ಈ ನಾಡಿನಲ್ಲಿ ವಾಣಿಜ್ಯವು ಪ್ರಗತಿದಾಯಕವಾಗಿದ್ದಿತೆಂದು ಮನಗಾಣಬಹುದಾಗಿದೆ.

ವ್ಯಾಪಾರವನ್ನೇ ವೃತ್ತಿಯಾಗಿಸಿಕೊಂಡಿದ್ದ ವರ್ತಕರಲ್ಲಿ ಅನೇಕ ಪಂಗಡಗಳಿದ್ದವು. ಅವರಲ್ಲಿ ಬಣಜಿಗಸೆಟ್ಟಿ, ಕೋಮಟಿಸೆಟ್ಟಿ, ಜಿರಿಕೋಮಟಿಸೆಟ್ಟಿಯವರಲ್ಲದೆ ಉತ್ಪಾದನೆ ಮತ್ತು ಮಾರಾಟ ಎರಡನ್ನೂ ಮಾಡುತ್ತಿದ್ದ ಕುಂಬಾರ ಮತ್ತು ಗಾಣಿಗ ಮುಂತಾದವರು ಗಮನಾರ್ಹ ಸಂಖ್ಯೆಯಲ್ಲಿಯೇ ಇವರ ರಾಜ್ಯದಲ್ಲಿ ನೆಲೆಸಿದ್ದರು.

ಆರ್ಥಿಕ ಸೌಲಭ್ಯ

ಜೀವನಾವಶ್ಯಕ ಸೌಲಭ್ಯಗಳನ್ನು ಪಡೆಯಲು 'ಹಣ' ತೀರ ಅಗತ್ಯ. ಇದನ್ನು ಶ್ರಮದ ದುಡಿಮೆಯಿಂದ ಪಡೆಯಬೇಕಾಗುತ್ತದೆ. ದುಡಿಮೆಯನ್ನು ಮಾಡಿ ಅಧಿಕ ಉತ್ಪಾದನೆಯನ್ನು ಪಡೆಯಲು ಪ್ರಾರಂಭಿಕ ಬಂಡವಾಳವು ಅಗತ್ಯವಿರುತ್ತದೆ. ಅಂತಹ ಬಂಡವಾಳಕ್ಕಾಗಿ ಹಿಂದೆ ಸಿರಿವಂತರಿಂದ ಇಲ್ಲವೆ ಲೇವಾದೇವಿದಾರರಿಂದ ಸಾಲ ಪಡೆಯಬೇಕಾಗಿದ್ದಿತು. ಅದಕ್ಕಾಗಿ ತಮ್ಮಲ್ಲಿನ ವಸ್ತು ಭೂಮಿ ಇತ್ಯಾದಿಗಳನ್ನು ಒತ್ತೆ ಅಥವಾ ಅಡವು ಮಾಡಬೇಕಾಗಿದ್ದಿತು. (ಇಂದು ಈ ಕಾರ್ಯವನ್ನು ಬಹುತೇಕ ಸರ್ಕಾರಿ ಬ್ಯಾಂಕುಗಳು ಮಾಡುತ್ತಿವೆ). ಲೇವಾದೇವಿದಾರರು ಹಣವನ್ನು ಬಡ್ಡಿಗಾಗಿ ನೀಡುತ್ತಿದ್ದರು. ಅವರಲ್ಲಿ ಅನೇಕರು ಬಡ್ಡಿಯಿಂದ ಬಂದ ಹಣದಿಂದ ಅನೇಕ ಧರ್ಮ ಕಾರ್ಯಗಳನ್ನು ಅಂದರೆ ದೇವಾಲಯ ರಚನೆ, ಪೂಜಾ ಕೈಂಕರ್ಯಗಳ ವ್ಯವಸ್ಥೆ ಮುಂತಾದವುಗಳನ್ನು ಮಾಡುತ್ತಿದ್ದರು.

ನಾಣ್ಯ ಪದ್ಧತಿ

ಮಹಾನಾಡ ಪ್ರದೇಶದಲ್ಲಿ ಅಧಿರಾಜರಾದ ವಿಜಯನಗರ ಅರಸರ ನಾಣ್ಯಗಳೇ ಪ್ರಚಲಿತವಿದ್ದವು. ಗದ್ಯಾಣ, ವರಹ ಅಥವಾ ಹೊನ್ನು, ಪಣ ಮತ್ತು ಹಾಗ ಮುಂತಾದ ನಾಣ್ಯಗಳು ಚಲಾವಣೆಯಲ್ಲಿದ್ದವೆಂದು ಹೇಳಬಹುದಾಗಿದೆ.

ತೂಕ : ಅಳತೆಗಳು

ಸಾಮಾನ್ಯವಾಗಿ ಕಾಳು ಧಾನ್ಯಗಳನ್ನು ಅಳೆಯಲು ಖಂಡುಗ, ಕೊಳಗ, ಬಳ್ಳ, ಸೊಲಗೆ ಎಂಬ ಮಾನಗಳಿದ್ದವು. ಶುಂಠಿ, ಅರಿಷಿಣ, ಮೆಣಸು ಮುಂತಾದವನ್ನು ತೂಗುತ್ತಿದ್ದರು. ಕರ್ಶ, ಪಲ್ಯ, ತೊರೆ, ಭಾರ ಎಂಬುವು ತೂಕಕ್ಕೆ ಸಂಬಂಧಿಸಿದ ಮಾನಗಳಾಗಿದ್ದವೆಂದು ತೋರುತ್ತದೆ.

ಆಧಾರ ಗ್ರಂಥ : ಲೇಖನಗಳು :

Epigraphica Carnatica (ಎಕ) ಸಂ XII ಮತ್ತು XVI.

Mysore Archeological Reports (M.A.R.) 1929, 1934 & 1946.

ಇಮ್ಮಡಿ ಚಿಕ್ಕಭೂಪಾಲ ಸಾಂಗತ್ಯ, (ಸಂ) ಎಂ. ಎಂ. ಕಲಬುರ್ಗಿ, ಬಿ. ಆರ್. ಹಿರೇಮಠ, ಧಾರವಾಡ, 1977. ಶಂಭೋನಹಳ್ಳಿ ಕೈಫಿಯತ್ತು (ಹಸ್ತಪ್ರತಿ) ಕೋರಾ ಕೈಫಿಯತ್ತು (ಹಸ್ತಪ್ರತಿ)

ಆರ್. ನರಸಿಂಹಾಚಾರ್ಯ ; ಕರ್ನಾಟಕ ಕವಿ ಚರಿತೆ ಸಂ. 2, ಬೆಂಗಳೂರು, 1973

ಬಿ. ಆರ್. ಹಿರೇಮಠ ; ಮಹಾನಾಡ ಪ್ರಭುಗಳು ಮತ್ತು ಮಹಾನಾಡು ಸೀಮೆ, ಸಾಧನೆ ಸಂ 10-3 (1981)

ಮಹಾನಾಡ ಪ್ರಭುಗಳು : ದ್ರವ್ಯ ಭೂಸ್ಥಾಪನೆ ಮತ್ತು ಬಲಿ, ಹೇಮಕೂಟ.

ಚೆನ್ನಕ್ಕ ಪಾವಟೆ ; ಮಹಾನಾಡ ಪ್ರಭುಗಳು, ಸಾರಂಗಶ್ರೀ (ವೀ.ಶೈ. ಅರಸು ಮನೆತನಗಳ ಸಂಪುಟ, ಸಿಂದಗಿ, 1994.)

ಕೆ. ಬಿ. ಶಿವತಾರಕ್ ; ಬಿಜ್ಜಾವರದ ಅರಸು ಮನೆತನ, ಕಲ್ಪಶ್ರೀ—ತುಮಕೂರು ಜಿಲ್ಲಾ ಉತ್ಸವ 1994 ಸಂಚಿಕೆ, ತುಮಕೂರು, 1994.

ಒಂದು ಹೊಸ ಶಾಸನ, ಹೊಸ ವಿಗ್ರಹ


ಡಾ॥ ಹಂಪ ನಾಗರಾಜಯ್ಯ

ಕರ್ನಾಟಕದ ಬಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೂಕಿಗೆ ಸೇರಿದ ಇಲಕಲ್ ಸಮೀಪದ 'ಚಿನ್ನಾಪುರ ಎಸ್. ಟಿ.' ಎಂಬ ಹಳ್ಳಿಯಲ್ಲಿ ಕಟ್ಟಡಕ್ಕಾಗಿ ಪಾಯ ತೋಡುತ್ತಿರುವಾಗ ಪ್ರಾಚೀನ ಶಿಲಾ ಮೂರ್ತಿ ದೊರೆತಿದೆ. ಆಳೆತ್ತರದ ಸುಂದರ



ಸಹಸ್ರಫಣಿ ಪಾರ್ಶ್ವನಾಥ ಸ್ವಾಮಿ ವಿಗ್ರಹ, ಚಿನ್ನಾಪುರ

ಕಲಾಕೃತಿಯಾಗಿರುವ ಈ ಕಲ್ಲಿನ ವಿಗ್ರಹವು ಪಾರ್ಶ್ವನಾಥ ತೀರ್ಥಂಕರರ ಮೂರ್ತಿಯ ದಾಗಿದ್ದು ಇದು ಕಾಯೋತ್ಸರ್ಗ-ಖಡ್ಗಾಸನದಲ್ಲಿದೆ. ತಪಸ್ಸಿಗೆ ನಿಂತಿರುವ ಪಾರ್ಶ್ವ ನಾಥ ತೀರ್ಥಂಕರರ ಧ್ಯಾನ ಮುದ್ರೆಯನ್ನು ಶಿಲ್ಪಿ ಕುಶಲತೆಯಿಂದ ಕಲ್ಲಿನಲ್ಲಿ ಬಿಡಿಸಿದ್ದಾನೆ. ಪಾದ, ಕಾಲು, ಮಣಿಕಟ್ಟು, ತೊಡೆ, ಸೊಂಟ, ಎದೆ, ಭುಜ, ತೋಳುಗಳು, ಚಾಚಿದ ನೀಳ ಕೈಬೆರಳುಗಳು, ಕುತ್ತಿಗೆ, ನೀಳವಾದ ಕಿವಿ, ಕೆನ್ನೆ, ಕಪೋಲ, ಗಲ್ಲ, ತುಟಿ, ಮೂಗು, ಕಣ್ಣು, ಹುಬ್ಬು, ಹಣೆ, ಹಿಂದಕ್ಕೆ ಬಾಚಿದ ತಲೆಗೂದಲು ಇವು ಮನಸೆಳೆಯುವಂತೆ, ಮೋಹಕವಾಗಿವೆ. ತಲೆಯ ಹಿಂಬದಿಗೆ ಕಲ್ಲಿನಲ್ಲಿಯೇ ಬಿಡಿಸಿರುವ ಪ್ರಭಾವಳಿಯಿದೆ. ಅಡಿಯಿಂದ ಮುಡಿಯವರೆಗೆ ಅಂಕುಡೊಂಕಾಗಿ ಸುರಳಿಗೊಂಡಿರುವ ಸರ್ಪವು, ತೀರ್ಥಂಕರರ ತಲೆಯ ಮೇಲೆ ತನ್ನ ಏಳು ಹೆಡೆಗಳನ್ನು ಕೊಡೆಯಾಗಿ ಹಿಡಿದ ಹಾಗೆ, ಬಿಚ್ಚಿಕೊಂಡಿದೆ. ಅದರ ಮೇಲೆ ರತ್ನತ್ರಯ ಪ್ರತೀಕವಾದ ಮುಕ್ಕೊಡೆಯಿದೆ. ಹಾವಿನ ಹೆಡೆಯ ಎಡಬಲಕ್ಕೆ ಎರಡು ಚವರಿಗಳನ್ನು ಹಿಡಿಸಹಿತ ಕೆತ್ತಲಾಗಿದೆ. ಜಿನಬಿಂಬದ ಕಾಲುಗಳ ಹತ್ತಿರ ಎಡಗಡೆ ಪದ್ಮಾವತಿ ಯಕ್ಷಿಯ, ಬಲಗಡೆ ಧರಣೇಂದ್ರ ಯಕ್ಷನ ಮೂರ್ತಿಗಳನ್ನೂ ಪದ್ಮಾಸನದಲ್ಲಿ ತೋರಿಸಿದೆ. ಯಕ್ಷರ ಆಯುಧಗಳನ್ನೂ, ಆಭರಣ ಕಿರೀಟಗಳನ್ನು ಕಡೆದಿರುವ ನಿಪುಣತೆ ವಿಶೇಷ ಗಮನಿಕೆಗೆ ಅರ್ಹವಾಗಿದೆ. ಒಂದೇ ಶಿಲೆಯಲ್ಲಿ ನಗ್ನತೆಯ



ಸಪ್ತಫಣಿ ಪಾರ್ಶ್ವನಾಥ ಮೂರ್ತಿಯ ಪಾದಪೀಠದಲ್ಲಿರುವ ಶಿಲಾಲೇಖನ

ಸೌಂದರ್ಯವನ್ನೂ, ಸರ್ಪ ಮುಕ್ಕೊಡೆ ಚವರಿ ಮತ್ತು ಯಕ್ಷರನ್ನು ಸಾವಯುವತೆಯಿಂದ ಪ್ರಭಾವ ಶಾಲಿಯಗಾಗಿ ಮೂಡಿಸಲು ಸಾಧ್ಯವಾಗಿರುವುದು ಶಿಲ್ಪಿಯ ಕಲಾ ಚಾತುರ್ಯಕ್ಕೆ ಸಾಕ್ಷಿಯಾಗಿದೆ.

ಈ ಪಾರ್ಶ್ವನಾಥ ಜಿನಬಿಂಬದ ಪಾದಪೀಠದಲ್ಲಿ ಏಳು ಸಾಲುಗಳಲ್ಲಿ ಕೆತ್ತಿರುವ ಶಾಸನ ಪಾಠ ಹೀಗಿದೆ :

1. ಶ್ರೀ ಮೂಲಸಂಗಸೇನಗಣ ಕೊಪಣತೀರ್ತ್ಥದೇವರ ಸಂಮಂದ
2. ಆರ್ಯ್ಯಸೇನಭಟ್ಟಾರಕರ ಪ್ರಿಯಶಿಶ್ಯ ನಾಗಸೇನ ದೇವರಗುಡ್ಡು
3. ಗಳು [ಗಳು[1]]ಮೂಲಿಗ ಬೊಂಮಗೌಡ ಮಾಳಗೌಡ ಹೆಗ್ಗ
4. ಡೆ ವಿಠ್ಠಗೌಡ ಮುಖ್ಯವಾಗಿ ಮೂಲಿಗ ವಸದಿಯ ಮಾಡಿಸಿ
5. ಪಾರಿಸ ದೇವರ ಪ್ರತಿಷ್ಟೆಯಮಾಡಿಸಿಯಿಂಮತ್ತರು ಕೆಯ್ಯಸು
6. ಸವಣಗಲ್ಲ ತೆಂಕಸಿ ಬಳದಿವೆ ಕೆಯ್ಯ ಬಡಗಸೆಯಲ್ಲಿ ಕೊಟ್ಟುಹೊಂಗಪಾ
7. [ಪಾ][2]ಯ್ಯ ಬಿಟ್ಟು ಧರ್ಮವಸು [ನ][3]ಡಯಿಸಿದರು॥ ಮಿಡಿಗೋಳಗವ ಬಿಟ್ಟರು.

ಇದೊಂದು ಅಪ್ರಕಟಿತ ಶಾಸನ. ಇದರಿಂದ ತಿಳಿದುಬರುವ ಚಾರಿತ್ರಿಕ ಅಂಶಗಳು :

1. ದೊರೆತಿರುವ ಪಾರ್ಶ್ವನಾಥ ವಿಗ್ರಹವು 'ಮೂಲಿಗ ವಸದಿ' ಎಂಬ ಹೆಸರಿನ ಬಸದಿಯಲ್ಲಿ ಪ್ರತಿಷ್ಠಾಪನೆಯಾಗಿದ್ದು, ಆ ಬಸದಿಯ ಮೂಲ ನಾಯಕ ಪ್ರತಿಮೆಯಾಗಿದೆ.
2. ಈ ದೇವಸ್ಥಾನವನ್ನು (ಮೂಲಿಗ ವಸದಿ) ಕಟ್ಟಿಸಿದವರು ಮೂಲಿಗ ಮನೆತನಕ್ಕೆ ಸೇರಿದ ಬೊಮ್ಮಗೌಡ, ಮಾಳಗೌಡ ಮತ್ತು ಹೆಗ್ಗಡೆ ವಿಠ್ಠಗೌಡ.
3. ಈ ಮೂವರು ಮೂಲಿಗರು ನಾಗಸೇನದೇವ ಎಂಬ ಆಚಾರ್ಯರ ಶಿಷ್ಯರು.
4. ಈ ನಾಗಸೇನದೇವ ಮುನಿಯು ಮೂಲ ಸಂಗ ಸೇನಗಣದ ಆರ್ಯ್ಯ ಸೇನ ಭಟ್ಟಾರಕರ ಪ್ರಿಯ ಶಿಷ್ಯರು.

---

1. ಕಂಡಕರಣಿಕಾರನ ದೋಷದಿಂದ [ಗಳು] ಎಂಬುದು ಪುನರಾವರ್ತನೆಯಾಗಿದೆ.
2. ಅದೇರೀತಿ [ಪಾ] ಎಂಬುದು ಪುನರಾವರ್ತನೆಯಾಗಿದೆ.
3. [ನ] ಎಂಬ ಅಕ್ಷರ ಬಿಟ್ಟು ಹೋಗಿದೆ.

5. ಈ ಮೂಲಿಗವಸದಿಯು ಕೊಪಣತೀರ್ಥಕ್ಕೆ ಅಧೀನ (ಪ್ರತಿಬದ್ಧ) ವಾಗಿದ್ದಿತು. ಆರ್ಯಸೇನ ಭಟ್ಟಾರಕರು ಕೊಪಣ ತೀರ್ಥಕ್ಕೆ ಸಂಬಂಧಿಸಿದವರು. ಇಷ್ಟು ಸಂಗತಿಗಳು ಈ ಹೊಸ ಶಾಸನದಿಂದ ಸ್ಪಷ್ಟವಾಗಿವೆ. ಮೂಲಿಗ ವಸದಿಯು ಪ್ರಾಯಃ ಈಗ ಮೂರ್ತಿ ದೊರೆತಿರುವ ಸ್ಥಳದಲ್ಲಿಯೋ, ಚಿನ್ನಾಪುರದಲ್ಲಿಯೋ ಇದ್ದಿರಬೇಕು ; ಚಿನ್ನಾಪುರ ಎಂಬ ಹೆಸರು 'ಜಿನ್ನಾಪುರ' ಎಂಬುದರ ಬೆಳವಣಿಗೆಯಾಗಿರುವು ದುಸಾಧ್ಯ. ಶಾಸನದಲ್ಲಿ ಅದು ರಚಿತವಾದ ಕಾಲದ ನಿರ್ದೇಶನವಿಲ್ಲ.

ಅಂತರಬಾಹ್ಯ ಆಧಾರಗಳಿಂದ ಮತ್ತು ಶಾಸನದ ಲಿಪಿಯ ಲಕ್ಷಣದಿಂದ ಇದು ಹನ್ನೆರಡನೆಯ ಶತಮಾನದ ಆರಂಭದಲ್ಲಿ ರಚಿತವಾಗಿದೆಯೆಂದು ಹೇಳಬಹುದು. ವಿಗ್ರಹದ ಲಕ್ಷಣವು ಕೂಡ ಕಲ್ಯಾಣಿ ಚಾಳುಕ್ಯರ ಕಾಲದ ರಚನೆಗೆ ಹೋಲಿಕೆಯಾಗಿದೆ.

ಈ ಶಾಸನೋಕ್ತರಾದ ಮೂಲಸಂಗ ಸೇನಗಣದ ನಾಗಸೇನ ದೇವರೂ, ಇದೇ ಬಿಜಾಪುರ ಜಿಲ್ಲೆ ಹುನಗುಂದ ತಾಲೂಕು ಅರಸಿಬೀಡು ಶಾಸನದಲ್ಲಿ ಉಕ್ತರಾದ ಮೂಲಸಂಗ ಸೇನಗಣ ನಾಗಸೇನ ಪಂಡಿತರೂ ಪ್ರಾಯಃ ಒಬ್ಬರೇ ಆಗಿರುವ ಸಾಧ್ಯತೆಯಿದೆ. ಈ ಭಾವನೆಯನ್ನು ಬಲಪಡಿಸಲು ಇರುವ ಪೂರಕ ಆಧಾರಗಳು :

i. ಇಬ್ಬರೂ ಸಮೀಪ ಸ್ಥಳದವರು

ii. ಇಬ್ಬರೂ ಸಮಾನ ಕಾಲದವರು

iii. ಇಬ್ಬರೂ ಮೂಲಸಂಗ ಸೇನಗಣದವರು

iv. ಇಬ್ಬರೂ ಒಂದೇ ಹೆಸರಿನವರು.

ನಾಮಸಾದೃಶ್ಯವೊಂದೇ ಅಲ್ಲದೆ, ಇತರ ಮೂರು ಪೂರಕ ಆಧಾರಗಳು ಗಮನಾರ್ಹವಾಗಿವೆ. ಗೊಣದ ಬೆಡಂಗಿ ಎನಿಸಿದ ಅಕ್ಕಾದೇವಿಯು ಚಾಳುಕ್ಯರ ಜಗದೇಕಮಲ್ಲ ಜಯಸಿಂಹನ (1016–42) ಸಹೋದರಿ. ಹೊಟ್ಟೂರ ಶಾಸನದಿಂದ ತಿಳಿದುಬರುವಂತೆ ಅಕ್ಕಾದೇವಿಯು ಹಾನುಗಲ್ಲು ಕದಂಬರಾಜನಾದ ಮಯೂರ ವರ್ಮನ (1021/22–1050) ಮಡದಿಯಾಗಿದ್ದಳು. ಚಾಳುಕ್ಯರ ತ್ರೈಲೋಕ್ಯ ಮಲ್ಲ ಒಂದನೆಯ ಸೋಮೇಶ್ವರ ಚಕ್ರವರ್ತಿಯು (1042-68) ಈಕೆಯ ಸೋದರಳಿಯ. ತ್ರೈಲೋಕ್ಯಮಲ್ಲ ಸೋಮೇಶ್ವರನ ಆಳ್ವಿಕೆಯ ಅವಧಿಯಲ್ಲಿ ಗೊಣದ ಬೆಡಂಗಿ ಅಕ್ಕಾದೇವಿಯು ಒಮ್ಮೆ ಗೋಕಾಗೆಯ ಕೋಟೆಯಲ್ಲಿದ್ದಾಗ, ಮೂಲ ಸಂಘ ಸೇನಗಣ ಪೊಗರಿಗಚ್ಛದ ನಾಗಸೇನ ಪಂಡಿತನಿಗೆ, 'ಗೊಣದ ಬೆಡಂಗಿ ಜಿನಾಲಯದ ರಿಸಿಯರ್ಗಳ ಅಜ್ಜಿಕೆಯ ಆಹಾರದಾನಕ್ಕಾಗಿ' ದಾನ ನೀಡಿದಳು

[IA. XVIII. 270. 1022. ಬೇಲೂರು (ಬಿಜಾಪುರ ಜಿ/ಬದಾಮಿ ತಾ): EI. XV. A.D. 1050, P. 78: EI. XVII. 10. A.D. 1047, P. 122. ಅರಸಿಬೀಡು: SII.XI-i. 80. 1047, ಅರಸಿಬೀಡು]. ಈಗಿನ ಆಂಧ್ರ ಪ್ರಾಂತದ ಅನಂತಪುರ ಜಿಲ್ಲೆಯ ಗುತ್ತಿ ತಾಲೂಕಿಗೆ ಸೇರಿದ ಕೊನಕೊಂಡ್ಲದಲ್ಲಿನ ರಸಸಿದ್ಧಾಂತ ಗುಟ್ಟದ ಮೇಲೆ ಇರುವ ಬಂಡೆಯಮೇಲೆ 'ಶ್ರೀ ನಾಗಸೇನ ದೇವರ ನಿಸದಿ' ಎಂದು ಲಿಖಿತ ವಾಗಿದೆ. [ARSIE 1940-41, B-45. ಕೊನಕೊಂಡ್ಲ] ಈ ನಿಸದಿಯೂ ಸಹ ಮೇಲ್ಕಂಡ ಮೂಲಿಗ ವಸದಿಯ ಶಾಸನದಲ್ಲಿ ಉಕ್ತರಾಗಿರುವ ಆರ್ಯಸೇನ ಭಟ್ಟಾರ ಕರ ಶಿಷ್ಯನಾದ ನಾಗಸೇನ ದೇವರ ನಿಸದಿಯೇ ಆಗಿರುವುದು ಸಂಭಾವ್ಯ.

ತಜ್ಞರಾದ ಚರಿತ್ರಕಾರರು ಈ ವಿಚಾರದಲ್ಲಿ ಮತ್ತಷ್ಟು ಸಂವಾದಗಳಿಗೆ ತೊಡಗಿ ಹೆಚ್ಚಿನ ಬೆಳಕು ಚೆಲ್ಲಬಹುದಾಗಿದೆ. ಕರ್ನಾಟಕದ ಬಸದಿಗಳ ಚರಿತ್ರೆಯಲ್ಲಿ, ಕೊಪಣ ತೀರ್ಥದ ಸಂಬಂಧದಲ್ಲಿ, ಜೈನ ಆಚಾರ್ಯ ಪರಂಪರೆಯ ಇತಿಹಾಸದಲ್ಲಿ, ಚಾಳುಕ್ಯರ ಕಾಲದ ಚರಿತ್ರೆಯಲ್ಲಿ ಈ ಮೂಲಿಗಬಸದಿಯ ಪುಟ್ಟ ಶಾಸನಕ್ಕೆ ಸಾಕಷ್ಟು ಮಹತ್ವವಿದೆ.

ಗಾಳಿಗೋಪುರ

ಹೊ. ನ. ನೀಲಕಂಠೇಗೌಡ

ಹುಟ್ಟಬಾರದಿತ್ತು
ಯಾರದೋತಪ್ಪು, ತಿಳಿದೊ ತಿಳಿಯದೆಯೋ
ಬದುಕೆ,
ಕಣದೊಳಗೆ ಜೀವಜಲ
ಬಸಿರ ಬಯಲಲ್ಲಿ ಅಸ್ಪಷ್ಟರೂಪ,
ರೂಪ
ಬೆಳೆದಂತೆ ಬಯಲಕಂಡ
ವಿಕಾರ ವಿಚಿತ್ರ ಮುಗ್ಧ, ಆಕಾರವಿಲ್ಲದ
ತರತರದ ಚಿತ್ತವೃತ್ತ
ಆಕಾಶ ಮುಟ್ಟಲು ಮುಲುಕಾಡುವಾಗ
ಹಳ್ಳಿಯಿಂದ ರಾಜಧಾನಿಯತ್ತ.. ......
ಹೊಸ ಬದುಕು ಜನ ಮನ
ಏನೂ ಅರಿಯದವ ಏನೇನೊ
ಆಗಿ ಬಿಟ್ಟಾಗ, ಹಾರಿಬಿಟ್ಟ
ಸಾಹಿತ್ಯ ಸುರೆಯೊಳಗೆ
ಧುಮುಕಿ ಗುದ್ದಾಡಿ ಪಾಲು ಪಡೆದು
ಕೀರ್ತಿ, ಹೆಸರು.
ಮತ್ತಷ್ಟು ಬೆಳೆಯ ಬೇಕೆಂಬ ಬಸಿರು
ಗಗನ ತಬ್ಬಿದಾಗ
ಅವನತ್ತ ನೂರಾರುಕಣ್ಣು
ರೆಪ್ಪೆ ಬಿಚ್ಚಿ ಮುಚ್ಚಿಕೊಂಡ

ನೇಗಿಲಮುಗ ಮಣ್ಣವಾಸನೆ
ಎಡಿಯಲ್ಲಿ ರೂಪನೀಡುತ್ತಾ
ಏನೇನೋ ಗೀಚಿ ಪ್ರಕಟವಾದಾಗ
ಕಾಲಸಂಧಿಯಲ್ಲಿ ಚೇಳು

ಮಂಜುಗಡ್ಡೆಯ ಮೇಲೆ ನಡಿಗೆ
ಕೈಯಲ್ಲಿ ಗುಂಡು, ಸರಪಳಿ, ಸರ್ಪಗಳದಂಡು
ಪಾತಾಳ ಗರಡಿಯ ಹಿಡಿತಕ್ಕೆ ಸಿಕ್ಕ
ಪಕ್ಕೆಗಳ ಪಕ್ಕಂತ
ಸಡಿಲಿಸಿ
ಕಾಲ ಕೀಲುಗಳು ಮುರಿದು
ಕಣ್ಣು ಕಿತ್ತ ಹದ್ದಿನಕೊಕ್ಕು
ಕೈಗೆ ಪಾರ್ಶ್ವವಾಯು
ಹೊಟ್ಟೆಯೊಳಗೆ ಸಿಡಿಮದ್ದು
ಅಕ್ಕನ ಬಸಿರು ಗರ್ಭಪಾತವಾಗಿ
ತೂತು ಬಿದ್ದ ಅವ್ವನೆದೆ
ಸೋರುವ ಗುಡಿಸಲೊಡಲು, ನಗುತ್ತಾ
ಒಳಗೆ ಇಣುಕುವಾ ಹೊಂಗಿರಣ
ಬೆಳಕಕಂಡು ನಗುವ ತಂಗಿ ತಮ್ಮ
ದೂರದೂರಿನಲಿ ಕರೆವ ಅಪ್ಪನಹಾಡು
ಪ್ರತಿಭೆಯೊಡೆಯಲ್ಲಿ
ಪಾಪಸು ಕಳ್ಳಿ

ಹಳ್ಳಿ ಹೈದನ ಹಾಡು
ನೆನಪಷ್ಟೆ ಈಗ
ಕವಿಗೊಂದು ಕವನ
ಹುಟ್ಟಿತೇ ಬೇಗ ?

ಉಮ್ಮತ್ತೂರಿನ ಒಂದು ಹೊಸ ಶಾಸನ

ಎಂ. ಜಿ. ಮಂಜುನಾಥ

ಮೈಸೂರು ಜಿಲ್ಲೆಯ ಚಾಮರಾಜನಗರ ತಾಲ್ಲೂಕಿನ ಉಮ್ಮತ್ತೂರು ಯಳಂದೂರಿನಿಂದ ಹದಿನಾಲ್ಕು ಕಿ.ಮೀ. ದೂರದಲ್ಲಿದೆ. ಈಗ ಒಂದು ಸಣ್ಣ ಊರಾಗಿದ್ದರೂ ಸಹ ವಿಜಯನಗರದ ಅರಸರ ಕಾಲದಲ್ಲಿ ಒಂದು ದೊಡ್ಡ ಪಾಳೆಯಪಟ್ಟಿನ ಕೇಂದ್ರ ಸ್ಥಾನವಾಗಿ ಪ್ರಾಮುಖ್ಯತೆ ಪಡೆದುಕೊಂಡಿತ್ತು. ಅಂದಿನ ಕಾಲದಲ್ಲಿ ಉಮ್ಮತ್ತೂರಿನ ಪಾಳೆಯಗಾರರು ಆ ಭಾಗದ ಪ್ರಬಲ ಪಾಳೆಯಗಾರರಾಗಿದ್ದು ಉಮ್ಮತ್ತೂರನ್ನು ರಾಜಧಾನಿಯನ್ನಾಗಿಸಿಕೊಂಡು, ಮೈಸೂರು ಜಿಲ್ಲೆಯ ದಕ್ಷಿಣ ಭಾಗ ಮತ್ತು ಕೊಯಮತ್ತೂರು ಜಿಲ್ಲೆಯ ಕೆಲವು ಭಾಗಗಳನ್ನು ಆಳುತ್ತಿದ್ದರು. ಆ ವೇಳೆಗಾಗಲೇ ಉಮ್ಮತ್ತೂರು ಒಂದು ದೊಡ್ಡ ಪಟ್ಟಣವಾಗಿದ್ದು, ಜೈನ, ಶೈವ, ವೈಷ್ಣವ ಈ ಎಲ್ಲ ಧರ್ಮಗಳಿಗೆ ಸೇರಿದ ಜನರು ಅಲ್ಲಿ ನೆಲೆಸಿದ್ದರೆಂಬುದಕ್ಕೆ ಅಲ್ಲಿನ ಹಲವಾರು ದೇವಾಲಯಗಳು ಹಾಗೂ ಶಾಸನಗಳು ಸಾಕ್ಷಿಯಾಗಿವೆ.

ಇಲ್ಲಿನ ಉಪಲಬ್ಧ ಶಾಸನಗಳಲ್ಲಿ ಪ್ರಾಚೀನ ಶಾಸನಗಳು ಜೈನ ಶಾಸನಗಳೆಂಬುದು ಗಮನಾರ್ಹ ಅಂಶ. ಕ್ರಿ.ಶ. 11ನೆಯ ಶತಮಾನಕ್ಕೆ ಸೇರಿದ 3 ಜೈನ ಶಾಸನಗಳು ಇಲ್ಲಿ ದೊರೆತಿವೆ. ಇವುಗಳ ಆಧಾರದಿಂದ ಸುಮಾರು ಹನ್ನೊಂದನೆಯ ಶತಮಾನದ ಕಾಲದಲ್ಲಿ ಉಮ್ಮತ್ತೂರಿನಲ್ಲಿ ಜೈನರು ಹೆಚ್ಚಿನ ಸಂಖ್ಯೆಯಲ್ಲಿದ್ದರೆಂದು ಹೇಳಬಹುದು.

ಇತ್ತೀಚೆಗೆ ನಾನು ಉಮ್ಮತ್ತೂರಿಗೆ ಕ್ಷೇತ್ರಕಾರ್ಯಕ್ಕೆ ಹೋಗಿದ್ದಾಗ ಒಂದು ಶಾಸನ ದೊರೆಯಿತು. ಅಲ್ಲಿಯ ಹೊಲವೊಂದರಲ್ಲಿ ಭೂಗರ್ಭದಲ್ಲಿ ಹೂತು ಹೋಗಿದ್ದ ಆ ಶಾಸನವನ್ನು ಗ್ರಾಮಸ್ಥರು ತಂದು ಈಗ ವರ್ಧಮಾನ ಬಸದಿಯ ಆವರಣದಲ್ಲಿಟ್ಟಿದ್ದಾರೆ.

ಆ ಶಾಸನವನ್ನು ಮೂರು ಅಡಿ ಉದ್ದ, ಒಂದು ಅಡಿ ಅಗಲ, ಒಂದು ಅಡಿ ಮಂದದ ಗ್ರಾನೈಟ್ ಕಲ್ಲಿನ (ಕಣಶಿಲೆ) ಸ್ತಂಭದ ಮೇಲೆ ಕೊರೆಯಲಾಗಿದೆ. ಶಾಸನದಲ್ಲಿ ಒಟ್ಟು 7 ಸಾಲುಗಳ ಬರಹವಿದೆ.

ಶಾಸನದ ಶಿಲ್ಪ : ಶಾಸನ ಸ್ತಂಭದ ಮೇಲ್ಭಾಗದಲ್ಲಿ ಸಿಂಹ ಪೀಠದ ಮೇಲೆ ಪದ್ಮಾಸನದಲ್ಲಿ ಧ್ಯಾನಾಸಕ್ತನಾಗಿ ಕುಳಿತ ತೀರ್ಥಂಕರನ ಶಿಲ್ಪವಿದೆ. ಅದರ ಕೆಳಗೆ ಶಾಸನ ಪಾಠವಿದೆ.



ಉಮ್ಮತ್ತೂರಿನ ನಿಷಧಿ ಶಾಸನದ ಛಾಯಾ ಚಿತ್ರ

ಶಾಸನ ಪಾಠ

1 ಶ್ರೀ ಸಿ…ಪಾಳಾ
2 ಜಯುವಹಾರಮ್ಮ
3 ಯ್ಯಸ ಮಗಂ ಸಿನ್ದ

4 ಯ್ಯಂ ಮೂಱು [ದಿನ][1] ನೋಂತು
5 ಮುಡಿಪಿದಂ
6 ವಿಮಳಚನ್ದ್ರ
7 ದೇವರ ಗುಡ್ಡಂ

ಈ ಶಾಸನವು ಒಂದು ನಿಷಧಿ ಶಾಸನ. ಇದರಲ್ಲಿ ಕಾಲದ ಉಲ್ಲೇಖವಿಲ್ಲ. ಲಿಪಿಯ ದೃಷ್ಟಿಯಿಂದ 12ನೆಯ ಶತಮಾನದ ಕೊನೆ 13ನೆಯ ಶತಮಾನದ ಪ್ರಾರಂಭದ ಕಾಲದ್ದೆಂದು ನಿರ್ಣಯಿಸಬಹುದು. ಈ ಶಾಸನದ ಭಾಷೆ ಹಾಗೂ ಲಿಪಿಯು ಕನ್ನಡದಲ್ಲಿದೆ. ಶಾಸನದ ಮೊದಲ ಹಾಗೂ ನಾಲ್ಕನೆಯ ಸಾಲಿನಲ್ಲಿ ಶಕಟರೇಫದ ಬಳಕೆಯಾಗಿದೆ.

ಸಿಱಿಪಾಳ ಜಯಕುಮಾರಮ್ಮಯ್ಯ ಎಂಬುವರ ಮಗನಾದ ಸಿನ್ದಯ್ಯ ಎಂಬುವನು ಮೂರು (ದಿನ) ನೋಂತು ಮುಡಿಪಿದ ಎಂದು ಶಾಸನ ಉಲ್ಲೇಖಿಸುತ್ತದೆ. ಇಲ್ಲಿ 'ದಿನ' ಎಂಬ ಪದ ಬಹುಶಃ ಕಂಡರಣೆಕಾರನ ದೋಷದಿಂದ ಬಿಟ್ಟು ಹೋಗಿರ ಬಹುದೆಂದು ಕಾಣುತ್ತದೆ. ಸಿನ್ದಯ್ಯನು ಸಲ್ಲೇಖನ ವ್ರತವನ್ನು ಮೂರುದಿನ ನೋಂತು ಸಮಾಧಿ ಮರಣವನ್ನು ಹೊಂದಿದನೆಂದು ಶಾಸನ ತಿಳಿಸುತ್ತದೆ.[2]

ಸಲ್ಲೇಖನ ವ್ರತದ ಬಗೆಗೆ ಜೈನ ಧಾರ್ಮಿಕ ಗ್ರಂಥಗಳು ಈ ಮಾತನ್ನು ಉಲ್ಲೇಖಿಸುತ್ತವೆ.

"ಉಪಸರ್ಗ್ಗೇ ದುರ್ಭಿಕ್ಷೇ ಜರಸಿ ರುಜಾಯಾಂಚ ನಿಃ ಪ್ರತೀಕಾರೇ
ಧರ್ಮಾಯ ತನುವಿಮೋಚನಂ ಆಹುಃ ಸಲ್ಲೇಖನಾಮಾರ್ಯಾಃ ॥[3]

ಅಂದರೆ ಉಪಸರ್ಗ, ಕ್ಷಾಮ, ವೃದ್ಧಾಪ್ಯ ಮತ್ತು ವಾಸಿಮಾಡಲಾಗದಂತಹ ರೋಗಗಳು ಬಂದಾಗ, ಅವುಗಳಿಗೆ ಇನ್ನೂ ಪರಿಹಾರವಿಲ್ಲ ಎಂದು ಖಚಿತವಾದಾಗ ಧರ್ಮ ರಕ್ಷಣೆ ಗೋಸ್ಕರ ಧಾರ್ಮಿಕ ವಿಧಿಗಳಿಗನುಗುಣವಾಗಿ ನಿರ್ಜಲ ನಿರಾಹಾರದಿಂದ ಮರಣ ಪಡೆಯುವುದಕ್ಕೆ ಸಮಾಧಿ ಮರಣವೆಂದು ಹೆಸರು. ಈ ಸಮಾಧಿ ಮರಣವನ್ನು ಪಡೆಯಲು ಅನುಸರಿಸಬೇಕಾದ ವ್ರತಕ್ಕೆ ಸಲ್ಲೇಖನ ವ್ರತ ಎಂದು ಹೆಸರು.

ಪ್ರಸ್ತುತ ಶಾಸನದಲ್ಲಿ ಉಲ್ಲೇಖಿತನಾದ 'ಸಿನ್ದಯ್ಯ'ನು 'ವಿಮಳಚನ್ದ್ರ ದೇವರ ಗುಡ್ಡ' ಅಂದರೆ ಶ್ರಾವಕ ಶಿಷ್ಯ ಎಂದರ್ಥ. ಈ ಶಾಸನದಲ್ಲಿ ಉಲ್ಲೇಖಿತರಾದ ವಿಮಳ ಚಂದ್ರದೇವರ ಬಗ್ಗೆಯಾಗಲೀ, ಸಿರಿಪಾಳ ಜಯಕುಮಾರಮ್ಮಯ್ಯನ ಬಗ್ಗೆ

---

1 'ದಿನ' ಎಂಬುದು ಬಿಟ್ಟು ಹೋಗಿದೆ. ಅದನ್ನು ಸೇರಿಸಿ ಓದಿಕೊಳ್ಳಬೇಕು.

2 ನೋಂತು ಎಂದರೆ ಸಲ್ಲೇಖನ ವ್ರತವನ್ನು ನೋಂತು ಎಂದರ್ಥ. ಮುಡಿಪುವುದು ಎಂದರೆ ಸಮಾಧಿ ಮರಣವನ್ನು ಹೊಂದುವುದು ಎಂದರ್ಥ.

3 ಆಚಾರ್ಯ ಸಮಂತಭದ್ರ: ರತ್ನಕರಂಡಕ ಶ್ರಾವಕಾಚಾರ.

ಯಾಗಲೀ, ಆತನ ಮಗ ಸಿಂದಯ್ಯನ ಬಗ್ಗೆಯಾಗಲೀ ಮತ್ತಾವುದೇ ವಿವರಗಳು ನಮಗೆ ಉಪಲಬ್ಧವಿಲ್ಲ. ಇವರನ್ನು ಉಲ್ಲೇಖಿಸುವ ಯಾವುದೇ ಸಮಕಾಲೀನ ಶಾಸನಗಳೂ ಸಹ ಲಭ್ಯವಿಲ್ಲ.

ಈ ಮೇಲಿನ ಶಾಸನವಲ್ಲದೆ ಉಮ್ಮತ್ತೂರಿನಲ್ಲಿ ಇನ್ನೂ ಮೂರು ನಿಷಧಿ ಶಾಸನಗಳಿದ್ದು ಅವೆಲ್ಲವೂ ಪ್ರಕಟವಾಗಿವೆ.[1] ಇವುಗಳ ಆಧಾರದಿಂದ ಕ್ರಿ.ಶ. 11ನೆಯ ಶತಮಾನದ ವೇಳೆಗಾಗಲೇ ಅಲ್ಲಿ ಒಂದು ಜೈನ ಬಸದಿ ಇದ್ದಿರಲೇಬೇಕೆಂದು ತರ್ಕಿಸ ಬಹುದು. ಅಂದರೆ ಗಂಗರ ಕಾಲದ ಒಂದು ಬಸದಿ 10-11ನೆಯ ಶತಮಾನದ ಕಾಲದವರೆಗೂ ಇದ್ದು ಈಗ ಭೂಗತವಾಗಿರಬಹುದೆಂದು ಊಹಿಸಬಹುದು. ಪ್ರಸ್ತುತ ಉಮ್ಮತ್ತೂರಿನಲ್ಲಿರುವ 'ಮಹಾವೀರ ಸ್ವಾಮಿ ಬಸದಿ'ಯು ವಿಜಯನಗರ ಅರಸರ ಕಾಲದಲ್ಲಿ ನಿರ್ಮಿತವಾದುದೆಂದು ವಾಸ್ತುಶಿಲ್ಪದ ಆಧಾರದಿಂದ ನಿರ್ಧರಿಸ ಬಹುದು. ಹಿಂದೆ ಇದ್ದ ಪ್ರಾಚೀನ ಬಸದಿಯ ಯಾವುದೇ ಅವಶೇಷಗಳು ಈಗ ದೊರೆಯುವುದಿಲ್ಲವಾದರೂ, ಆ ಪ್ರದೇಶದಲ್ಲಿ ಸೂಕ್ಷ್ಮವಾಗಿ, ಜಾಗರೂಕತೆಯಿಂದ ಕ್ಷೇತ್ರಕಾರ್ಯ ನಡೆಸಿ, ಉತ್ಖನನ ನಡೆಸಿದರೆ ಆ ಬಸದಿಯ ಅವಶೇಷಗಳು ದೊರೆಯಬಹುದು.[2]

---

1 ಎಕ 4, ಚಾ.ನ. 98, 99, 101 ಪು. 56, (ಕ್ರಿ.ಶ. 11ನೆಯ ಶತಮಾನ)

2 ಉಮ್ಮತ್ತೂರಿನ ಕ್ಷೇತ್ರ ಕಾರ್ಯದ ವೇಳೆಯಲ್ಲಿ ನನ್ನೊಡನೆ ಬಂದಿದ್ದ ಆತ್ಮೀಯ ಗೆಳೆಯರಾದ ಸರ್ವಶ್ರೀ ಚಕ್ರಪಾಣಿ, ಭೀಮೇಶ್, ಜಗದೀಶ್, ಎಂ.ಎಸ್.ಕೆ. ವೆಂಕಟೇಶ್, ಅಜಿತ್‌ಕುಮಾರ್ ಇವರೆಲ್ಲರ ಸಹಾಯ ಸ್ಮರಣೀಯ

ಪ್ಲೇಟೋವಿನ ತಾತ್ತ್ವಿಕ ನಿಲುವು - ಒಂದು ಸ್ಥೂಲರೂಪ

ಡಾ॥ ಟಿ. ಬಿ. ಬಸವರಾಜು

I

ಪ್ಲೇಟೋ....ಗ್ರೀಕ್ ತಾತ್ತ್ವಿಕ ಪರಂಪರೆಯಲ್ಲಿ ಎದ್ದುಕಾಣುವ ಒಂದು ದೊಡ್ಡ ಹೆಸರು. ಈತನ ಕಾಲ ಸರಿ ಸುಮಾರು ಕ್ರಿ.ಪೂ. 427-ಕ್ರಿ.ಪೂ. 347 ಎಂದು ಹೇಳಲಡ್ಡಿಯಿಲ್ಲ! ಈತ ಅನೈತಿಕತೆಯನ್ನು ಸಮಾಜದಲ್ಲಿ ಪ್ರತಿಷ್ಠಾಪಿಸಲೆತ್ನಿಸುತ್ತಿದ್ದ ಮೂರ್ಖ 'ಸೋಫಿಸ್ಟರ'[1] ಅಜ್ಞಾನ ಜನ್ಯ ಮುಖವಾಡಗಳನ್ನು ಕಿತ್ತೆಸೆದು, ಅಪ್ರಮಾಣಿಕತೆಯಿಂದ ಕತ್ತಲು ತುಂಬಿದ್ದ ಸಮಾಜದಲ್ಲಿ ಸತ್ಯ, ಧರ್ಮ, ನ್ಯಾಯ, ಜ್ಞಾನ, ಶ್ರೇಯಗಳ ಪ್ರತಿಷ್ಠಾಪನೆಗೆ ತನ್ನನ್ನೇ ತೇದುಕೊಂಡು 'ಅಥೆನ್ಸಿನಲ್ಲಿ' ವೈಚಾರಿಕ ಕಿಡಿಯನ್ನೆಬ್ಬಿಸಿದ ಖ್ಯಾತ ಗ್ರೀಕ್ ತಾತ್ತ್ವಿಕ ಸಾಕ್ರಟೀಸ್‌ನ ಶಿಷ್ಯ ; ಈತ ಪ್ರಾರಂಭಿಸಿದ 'ದಿ ಅಕಾಡೆಮಿ' ಎಂಬ ವಿದ್ಯಾಲಯ ಆ ಕಾಲದಲ್ಲಿ ಸೂಜಿಗಲ್ಲಿನಂತೆ ವಿದ್ಯಾಕಾಂಕ್ಷಿಗಳನ್ನು ಸೆಳೆಯುತ್ತಿತ್ತು ! ಯೂರೋಪಿನ ಪ್ರಪ್ರಥಮ ವಿಶ್ವವಿದ್ಯಾಲಯವೆಂದೇ ನಂತರ ಪರಿಗಣಿಸಲ್ಪಟ್ಟ ಈ ಸಂಸ್ಥೆ, ವಿದ್ಯಾರ್ಥಿಗಳಿಗೆ ತತ್ತ್ವಶಾಸ್ತ್ರ, ಗಣಿತ, ಖಗೋಳ ಶಾಸ್ತ್ರಗಳನ್ನು ಬೋಧಿಸುವಲ್ಲಿ ಎತ್ತಿದ ಕೈಯಾಗಿತ್ತು.

ಪ್ಲೇಟೋ ತನ್ನ ತಾತ್ತ್ವಿಕತೆಯಲ್ಲಿ ಅಸಾಧಾರಣ ಮೇಧಾವಿತನವನ್ನು ಪ್ರದರ್ಶಿಸಿದ್ದರೂ, ಅತನ ತಾತ್ತ್ವಿಕತೆಯು ಪಾರ್ಮಿನೈಡಿಸ್, ಪೈಥಾಗೊರಾಸ್, ಹೆರಾಕ್ಲೈಟಸ್ ಹಾಗೂ ಸಾಕ್ರಟೀಸರ ತಾತ್ತ್ವಿಕ ಬೆಳಕಿನಡಿಯಲ್ಲಿ ಮುಂದುವರೆದಿರುವುದು ಸುಸ್ಪಷ್ಟ ! ಆದರೆ, ಇದು ಯಾವುದೂ ಆತನ ಅಸಲು (Original) ಚಿಂತನೆಯನ್ನು ಮುಸಕು

---

1 ಸೋಫಿಸ್ಟ್ (Sophist)ಪದಕ್ಕೆ 'ಅಲೆದಾಡುವ ಬೋಧಕ ಎಂದೇ ಅರ್ಥ ಈ ಬಗೆಯ ಜನರು ದೇಶ ಸಂಚಾರ ಕೈಗೊಂಡು, ತರ್ಕ, ವ್ಯಾಕರಣ ಅಲಂಕಾರ ಶಾಸ್ತ್ರಗಳ ಬೋಧನೆಯ ನೆಪದಲ್ಲಿ ತಮ್ಮ ವಾದ-ವೈಖರಿಯಿಂದ ಜನರನ್ನು ಮೈಮರೆಯುವಂತೆ ಮಾಡಿ 'ಸ್ವಾರ್ಥ ಸಾಧನೆಗೈಯುತ್ತಿದ್ದರು'! ಇವರು ಧನದಾಸೆಯಿಂದ ಸಂದರ್ಭಗಳನ್ನು, ದುರುಪಯೋಗ ಮಾಡಿಕೊಂಡು, ಕ್ಷಣಿಕ ಆಕಾಂಕ್ಷೆಗಳಿಗೆ ಜೋತುಬಿದ್ದು, ನೀತಿ ನಿಯಮಗಳನ್ನು ಗಾಳಿಗೆ ತೂರಿ, ಹೊಲಸು ವಿಷಯಾಸಕ್ತ ಜೀವನಕ್ಕೆ ನಾಂದಿಹಾಡಿದರು. ಲೌಕಿಕ ಭೋಗದಲ್ಲೇ ಮಾನವ ಸಾರ್ಥಕ್ಯವಿದೆ ಎಂದು ಹುರಿದೆಡೆಯಲ್ಲೆಲ್ಲಾ ಸಾರುತ್ತಾ, ಕೆಟ್ಟ ಅರ್ಥ ಧ್ವನಿಸುವ "ಸೋಫಿಸ್ಟರು' ಎಂಬ ಹೆಸರನ್ನು ಪಡೆದುಕೊಂಡರು !

ಮಾಡಲಾರವು, ಕುಬ್ಜಗೊಳಿಸಲಾರವು ಎನ್ನುವುದು ಅಷ್ಟೇ ದಿಟ! ಆತನೊಬ್ಬ ಸತ್ಯನಿಷ್ಠ ಅದ್ಭುತ ಸಂಶೋಧಕ ಎನ್ನುವುದರಲ್ಲಿ ಎರಡು ಮಾತಿಲ್ಲ. ಈ ಕಾರಣದಿಂದಲೇ ವಿಶ್ವದ ತಾತ್ತ್ವಿಕ ಸಂಪನ್ನರಲ್ಲಿ ಮೊಟ್ಟ ಮೊದಲ ಬಾರಿಗೆ ತಾತ್ತ್ವಿಕತೆಗೆ ಸೈದ್ಧಾಂತಿಕ ಮೆರುಗನ್ನು ವ್ಯವಸ್ಥಾಬದ್ಧವಾಗಿ ನೀಡಿದ ಕೀರ್ತಿಗೆ ಭಾಜನ, ಪ್ಲೇಟೋ; ಎಂತಹ ಕ್ಲಿಷ್ಟ ಎನಿಸಿದ ತಾತ್ತ್ವಿಕ ನಿಲುವೂ ಸಹ ಪ್ಲೇಟೋವಿನ ಚಿಂತನೆಯ ಒರೆಗಲ್ಲಿಗೆ ಸಿಕ್ಕು ಹೊಸ ಹೊಳಪನ್ನು, ನಾವೀನ್ಯವನ್ನು ಪಡೆದುಕೊಳ್ಳುತ್ತಿತ್ತೆಂದರೆ ಆತನ ಮಹತ್ವದರಿವಾದೀತು!

ಪ್ಲೇಟೋವಿನ ಬರಹಗಳೆಲ್ಲಾ ಸಂವಾದ (Dialogue) ರೂಪದಲ್ಲಿರುವುದೊಂದು ವೈಶಿಷ್ಟ್ಯ. ಪ್ರಶ್ನೋತ್ತರ ರೂಪದಲ್ಲಿರುವ ಇವುಗಳನ್ನು ಪಾಶ್ಚಾತ್ಯರ ಉಪನಿಷತ್ತುಗಳೆಂದೇ ಕರೆಯುವುದು ಪ್ರತೀತಿ;

ನೈಜ ಅರ್ಥದಲ್ಲಿ ತತ್ತ್ವಶಾಸ್ತ್ರಜ್ಞನಾಗಿದ್ದ ಪ್ಲೇಟೋ ತನ್ನ ತಾತ್ವಿಕತೆಯಲ್ಲಿ 'ಖಚಿತ ಜ್ಞಾನ' ಪಡೆಯಲು ಹೆಣಗಿರುವುದು ಆತನ ವಿಶಿಷ್ಟ ಮನೋಧರ್ಮಕ್ಕೊಂದು ಸ್ಪಷ್ಟ ಸಾಕ್ಷಿ; ಈ ಹಿನ್ನೆಲೆಯಲ್ಲಿಯೇ, ಸತ್ಯದ ಯಥಾರ್ಥ ಜ್ಞಾನ ಪಡೆಯುವಲ್ಲಿ ವೈಚಾರಿಕತೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ನಿರಂತರ ಯತ್ನ ಪ್ಲೇಟೋವಿನ ಚಿಂತನೆಯ ಉದ್ದಕ್ಕೂ ಹಾಸುಹೊಕ್ಕಾಗಿದೆ ಎಂದರೆ ಉತ್ಪ್ರೇಕ್ಷೆಯಲ್ಲ! ಅಮೂರ್ತಗೊಳಿಸಿ ಯಥಾರ್ಥವಾಗಿ ತುಂಬಿಕೊಂಡು, ಸುಪುಷ್ಟ ತಾತ್ತ್ವಿಕ ನಿಲುವುಗಳಾಗಿ ಮೂರ್ತಗೊಳಿಸಿ ವಿಶ್ಲೇಷಿಸಿರುವುದು, ಅಬಾಧಿತ ತತ್ತ್ವದ ಅನನ್ಯತೆಯನ್ನು ಎತ್ತಿಹಿಡಿದಿರುವುದು ಆತನ ಚಿಂತನೆಯ ಜೀವಾಳ; ಖಚಿತ ಜ್ಞಾನದ ಲಭ್ಯತೆಯು ಬೌದ್ಧಿಕ ಚಿಂತನೆಯಲ್ಲಿ ನೆಲೆಗೊಂಡಿರುತ್ತದೆ[1] ಎಂಬ ಅಂಶವನ್ನು ಮನವರಿಕೆ ಮಾಡಿಕೊಂಡಿದ್ದ ಪ್ಲೇಟೋವಿನ ಮೂಲಭೂತ ಬಂಡವಾಳ ವಿವೇಚನೆಯ ಹಿರಿಮೆಯೇ ಹೊರತು, ಕಾಲ್ಪನಿಕ ನಿಲುವಿನ ಉತ್ಪ್ರೇಕ್ಷಿತ, ಶುಷ್ಕ ಶಬ್ದ ಭಂಡಾರವಲ್ಲ! ಸ್ವಭಾವ ಸಹಜವಾಗಿ ಮೈದುಂಬಿದ್ದ ಹರಿತ ಬುದ್ಧಿಯನ್ನು ತಾತ್ತ್ವಿಕ ಮಹಾಉಪಕರಣವನ್ನಾಗಿ ಮಾಡಿಕೊಂಡಿರುವ ಪ್ಲೇಟೋ ಎಂದಿಗೂ ಕಲ್ಪನೆಯ ಕವಿಯಾಗುವುದು ಸಾಧ್ಯವೇ ಇರಲಿಲ್ಲ ಎನ್ನುವುದು ಬೇರೆ ಮಾತು! ಈ ಕಾರಣವಾಗಿಯೇ ಇರಬೇಕು ವಿದ್ವಾಂಸರು ಪ್ಲೇಟೋವನ್ನು 'ಬೌದ್ಧಿಕದೊರೆ' ಎಂದೇ ವ್ಯಾಖ್ಯಾನಿಸಿರುವುದು! ಈ ಎಲ್ಲವನ್ನೂ ಸರಿಗಟ್ಟುವಂತೆ ಮತ್ತೊಬ್ಬ ಪಾಶ್ಚಾತ್ಯ ತಾತ್ತ್ವಿಕ ಚಿಂತಕ, ಎ. ಎನ್. ವೈಟ್‌ಹೆಡ್ ಒಂದೆಡೆ ಹೀಗೆ ಉದ್ಘೋಷಿಸಿದ್ದಾನೆ — 'ಪಾಶ್ಚಾತ್ಯ ತಾತ್ತ್ವಿಕತೆಯು ಪ್ಲೇಟೋವಿನ ತಾತ್ತ್ವಿಕತೆಯ ಮೇಲೆ ಕೆತ್ತಿದ ಒಂದು ಅಡಿಟಿಪ್ಪಣಿ: ಅಷ್ಟೇ!!

---

1 Frank Thilly — A History of Philosophy — Page (No) 6
(Published by Central Book Depot, Allahabad — 1981)

II

ಪ್ಲೇಟೋವಿನ ತಾತ್ತ್ವಿಕತೆಗೆ ಒಂದು ಬಲವಾದ ಹಿನ್ನೆಲೆಯಿದೆ. ಸಮಕಾಲೀನ ಭಾರತೀಯ ತತ್ತ್ವಚಿಂತಕರಾದ, ಅನುಭಾವಿ ಶ್ರೀರಾಮಕೃಷ್ಣ ಪರಮ ಹಂಸರನ್ನು ಅರಿತುಕೊಳ್ಳದೆ ಅವರ ಶಿಷ್ಯ ಸ್ವಾಮಿ ವಿವೇಕಾನಂದರನ್ನು ಅರಿಯುವುದು ಹೇಗೆ ಅಸಂಗತವೋ ಹಾಗೆ ಇಲ್ಲಿ 'ಸಾಕ್ರಟೀಸ್' ಬಗ್ಗೆ ಅರಿವಿಲ್ಲದೆ ಆತನ ಶಿಷ್ಯ ಪ್ಲೇಟೋ ಬಗ್ಗೆ ಅರ್ಥೈಸುವುದು ಸಮಂಜಸವಾಗಲಾರದು. ಸಾಕ್ರಟೀಸ್ ಮೂಲತಃ ಬೌದ್ಧಿಕತೆಗೆ ಹೆಸರಾಗಿದ್ದ ಅನುಷ್ಠಾನ ಪ್ರಾಧಾನ್ಯ ನಿಲುವುಳ್ಳ ತಾತ್ತ್ವಿಕ ; ವ್ಯಕ್ತಿ-ಸ್ವಾತಂತ್ರ್ಯ, ವಿಚಾರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಎರವಾಗಿದ್ದ ಎಲ್ಲ ಅಡೆ-ತಡೆಗಳನ್ನು, ವಿಧಿ-ನಿಷೇಧಗಳನ್ನು ಬಗ್ಗುಬಡಿದು, ಮೆಟ್ಟಿನಿಂತು ತನ್ನ ಬದುಕನ್ನೇ ಬಲಿ ಕೊಟ್ಟುಕೊಂಡ ಸಾಕ್ರಟೀಸ್‌ನ ತಾತ್ವಿಕ ಬದುಕಿನ ಮಹತ್ತಿನ ಪ್ರಭಾವ ಪ್ಲೇಟೋವಿನ ಮೇಲೆ ಅಪಾರ, ಅಸದೃಶ ! ಗುರುವಿನ ಪ್ರಭಾವಳಿಯಿಂದ ಆತ ಮುಕ್ತನಾಗಲೇ ಇಲ್ಲ ಬದಲಾಗಿ, ತನ್ನ ತಾತ್ತ್ವಿಕತೆಗೆ ಗುರುವನ್ನು ಆದರ್ಶ ಮೂರ್ತಿಯನ್ನಾಗಿಯೆ ಮುಂದು ಮಾಡಿಕೊಂಡ ಆತ್ಮವಿಮರ್ಶೆಯ[1] ಅಡಿಪಾಯದ ಮೇಲೆ ವೈಚಾರಿಕ ಸೌಧಕಟ್ಟುತ್ತಿದ್ದ ಗುರುವನ್ನು ಅವನು ವಿನೀತ ಭಾವದಿಂದ ತನ್ನ 'ಸಂವಾದಗಳಲ್ಲಿ' ಕೊಂಡಾಡುತ್ತಾನೆ. ಪ್ರೀತಿಯ ಗುರು ಸ್ಮರಣೆಯಲ್ಲಿ ಸಾರ್ಥಕ್ಯ ಕಂಡುಕೊಳ್ಳಲೆತ್ನಿಸುತ್ತಾನೆ.

ಪ್ಲೇಟೋ ತನ್ನ ಗುರು ಸಾಕ್ರಟೀಸ್‌ನ ಶಾಂತಭಾವ ಹಾಗೂ ಅಹಂಶೂನ್ಯತೆಯನ್ನು ಮೈಗೂಡಿಸಿಕೊಂಡಿದ್ದನೆನ್ನಬಹುದು[2]. ಆದುದರಿಂದಲೇ ಇರಬೇಕು ಆತ ಸ್ವತಃ ಜ್ಞಾನಿಯಾಗಿದ್ದರೂ ತಾನು ಅರಿತುಕೊಳ್ಳವುದು ತುಂಬಾ ಇದೆ ಎಂದೇ ತಿಳಿದಿದ್ದನು[3]; ಜ್ಞಾನವೇ ಸದ್ಗುಣ ಸದ್ಗುಣವೇ ಜ್ಞಾನ (Knowledge is virtue, Virtue is Knowledge) ವೆಂಬ ಸಾಕ್ರಟೀಸ್‌ನ ತಾತ್ತ್ವಿಕ ಮೂಲಭೂತ ಎಳೆ ಪ್ಲೇಟೋಗೆ ಸತ್ಯದ ಗೂಢತೆಯನ್ನು ಭೇದಿಸುವಲ್ಲಿ ಪ್ರೇರಣೆ ನೀಡಿತೆನ್ನಬೇಕು.

ಸಾಕ್ರಟೀಸ್‌ಗಿದ್ದಗಿಳೆಂದರೆ ಆತ ಸತ್ಯವನ್ನು ತನ್ನೆದುರಿಗಿರುವ ಗೋಚರ ಜಗತ್ತಿನಲ್ಲೇ ಏಕೆ. ಅದರ ಆಚೆಗೂ (Beyond) ಕಾಣಲೆತ್ನಿಸುತ್ತಿದ್ದನು ! ಅದು ಕೇವಲ ಆತನ ಕೆಟ್ಟ ಕುತೂಹಲ ಎಂದು ತಿಳಿದರೆ ತಪ್ಪಾದೀತು ! ಅದು ಇತರರಿಗಾಗಿಯೂ

---

1 ವಸ್ತು ಸ್ವರೂಪವನ್ನರಿಯುವ ಪ್ರಾಥಮಿಕ ಹಂತವೇ ಸ್ವ-ವಿಮರ್ಶೆ ಎಂದು ಅರಿತಿದ್ದ ಸಾಕ್ರಟೀಸ್‌ನ ನಿಲುವು ಹೀಗಿತ್ತು—'An unexamined Life is not worth Living'.

2 ಅಹಂಶೂನ್ಯತೆ ಹಾಗೂ ಶಾಂತತೆಗಳನ್ನು ಜ್ಞಾನಿಯ ಲಕ್ಷಣಗಳೆಂದು ಹಿಂದೂ ದರ್ಶನವೂ ಸಹ ಒಪ್ಪಿಕೊಂಡಿರುವುದು ಗಮನಾರ್ಹ !

3 ಹೋಲಿಸಬಹುದು — ಯಸ್ಯ ಅಮತಂ ತಸ್ಯಮತಂ ಮತಂ ಯಸ್ಯನ ವೇದಸಃ — ಕೇನೋಪನಿಷತ್ II.3

ಹೌದು?[1] ಈ ಚಪಲ ಪ್ಲೇಟೋವಿನ ಮೇಲೆಯೂ ಪರಿಣಾಮಕಾರಿಯಾಗಿ ಕೆಲಸ ಮಾಡಿದೆ ಎಂದೇ ಹೇಳಬೇಕು.

ಸಾಕ್ರಟೀಸ್ ಹಾಗೂ ಪ್ಲೇಟೋ ತಾತ್ತ್ವಿಕತೆಯಲ್ಲಿ ಕಾಣಸಿಗುವ ಪ್ರಮುಖ ಅನುರೂಪ ಅಂಶವೆಂದರೆ ಅವರು 'ಸೋಫಿಸ್ಟರ'ತಾತ್ತ್ವಿಕತೆ (?) ಯನ್ನು ತರಾಟೆಗೆ ತೆಗೆದುಕೊಂಡಿರುವುದು. ಅಪಾಥಭೂತಿಗಳಾಗಿದ್ದ ಸೋಫಿಸ್ಟರು ಸತ್ಯವನ್ನು ತುಳಿದು ನೀತಿಯನ್ನು ಅಲ್ಲಗೆಳೆದು ಶುಷ್ಕ ವ್ಯಾವಹಾರಿಕ ಲಾಭಕ್ಕಾಗಿ, 'ಸತ್ಯವನ್ನು ಸುಳ್ಳೆಂದೂ, ಸುಳ್ಳನ್ನು ಸತ್ಯವೆಂದೂ ವಾದಿಸಿ ಸಮಾಜದಲ್ಲಿ ಅನಿಷ್ಟವನ್ನು (Evil) ಸಂಸ್ಥಾಪಿಸು ತ್ತಿದ್ದರು! ಎಲ್ಲಾ ವಸ್ತು-ವಿಷಯಗಳಿಗೂ ಮಾನವನೇ ಒರೆಗಲ್ಲು, ವ್ಯಕ್ತಿಗೆ ತೋಚಿದ್ದೇ ಸತ್ಯ, ಗೋಚಿದ್ದೇ ತಾತ್ವಿಕತೆ[2]ಯೇ ಹೊರತು ಯಾವುದೇ ಸಾರ್ವತ್ರಿಕ ಸತ್ಯವಾಗಲೀ, ಶ್ರೇಯವಾಗಲೀ ಖಂಡಿತಾ ಅಸ್ತಿತ್ವದಲ್ಲಿಲ್ಲ! ಧರ್ಮ, ಸದಾಚಾರ, ನ್ಯಾಯಗಳಿಗೆ ತಲೆ ಬಾಗುವವ ಮೂರ್ಖ! ಪಿತೂರಿ, ಒಳಸಂಚುಗಳಡಿಯಲ್ಲಿ ಬದುಕಿಬಾಳುವವನೇ ಬುದ್ಧಿವಂತ! ಮುಂತಾಗಿ ಸಾರಿ ಸಮಾಜವನ್ನು ಕತ್ತಲಲ್ಲಿ ತಳ್ಳಿ, ಸಮಾಜಘಾತುಕ ಶಕ್ತಿಗಳೆನಿಸಿದ್ದ 'ಸೋಫಿಸ್ಟರ ವಿಷಯುಕ್ತ. ಮಾನವತಾ ವಿರೋಧಿ ತಾತ್ತ್ವಿಕ ಕತ್ತಿಯ ನ್ನೆದುರಿಸಿ ನಿಂತು. ವಾಸ್ತವತೆ, ಮಾನವಧರ್ಮ, ನೀತಿ ಹಾಗೂ ಜ್ಞಾನದ ನೈಜ ಅರ್ಥವಂತಿಕೆಯನ್ನು ಪ್ಲೇಟೋ ಎದೆಗುಂದದೆ ಸಮಾಜದಲ್ಲಿ ಸಂಸ್ಥಾಪಿಸಿದನು. ತನ್ನಗುರು ಆದಾಗಲೇ ಸಮಾಜದಲ್ಲಿ ಹಚ್ಚಿದ್ದ ಜ್ಞಾನದ ದೀವಿಗೆಯನ್ನು ಹೆಚ್ಚು ಪ್ರಕಾಶಪಡಿಸಿದನು ; ಬಹುಮುಖ್ಯವಾಗಿ ಪ್ಲೇಟೋ ತನ್ನ ಗುರುವಿನ ಮುಖವಾಣಿ ಯಾಗಿ ನಾಗರಿಕತೆಗೆ ನೈಜ ತಾತ್ವಿಕ ಭದ್ರನೆಲೆಯನ್ನು ಒದಗಿಸಿಕೊಟ್ಟನು.[3] ತಾನು ಕಂಡುಕೊಂಡ ಸಂಪೂರ್ಣ ಸತ್ಯದ ಅಭಿವ್ಯಕ್ತತೆಯನ್ನು ದರ್ಶನ ಇತಿಹಾಸದಲ್ಲಿ ಮೊದಲ ಬಾರಿಗೆ ಸೈದ್ಧಾಂತಿಕವಾಗಿ ನಿರೂಪಿಸಿ ಅದನ್ನು ಸಮಾಜದಲ್ಲಿ ಪ್ರತಿಷ್ಠಾಪಿಸಲು ಸಾಕ್ರಟೀಸ್‌ನು ಆತನಿಗೆ ಪ್ರೇರಕ, ತಾರಕ ಶಕ್ತಿಯಾಗಿದ್ದನು ಎಂದರೆ ಅದು ಅತಿ ಶಯೋಕ್ತಿಯಾಗಲಾರದು.

(iii)

ಪ್ಲೇಟೋ ತನ್ನ ತಾತ್ವಿಕತೆಯಲ್ಲಿ ಇಂದ್ರಿಯ ಸಂವೇದನೆಗೆ ಪ್ರಾಮುಖ್ಯತೆ ನೀಡುವುದಿಲ್ಲ; ಆತನ ಪ್ರಕಾರ ಇಂದ್ರಿಯ ಸಂವೇದನೆ ಕೇವಲ ಅನಿಸಿಕೆ (Feeling) ಎಂಬ ಮಾತ್ರಕಷ್ಟೇ ಸೀಮಿತವಾಗಿಬಿಡುತ್ತದೆ! ಇಂದ್ರಿಯ ಸಂವೇದನೆ ದೋಷ

---

1 Bertrand Russell—History of Western Philosophy–p. 103

2 'ಪ್ರೊಟಾಗೊರಾಸ್' ಎಂಬ ಪ್ರಸಿದ್ಧ ಸೋಫಿಸ್ಟ್‌ನ ನಿಲುವು ಹೀಗಿತ್ತು — 'Man is the Measure of all things'.

3 ಹೋಲಿಸಬಹುದು — 'ತತ್ವಜ್ಞಾನದ ಆಧಾರ ರಹಿತ ನಾಗರಿಕತೆಯು ದೇವ ರಹಿತ ದೇಗುಲವೇ ಸರಿ! — ಹೆಗೆಲ್'

ಯುಕ್ತವೇ ಸರಿ ಎನ್ನುವುದರ ಬಗ್ಗೆ ಆತನಿಗೆ ಸ್ಪಷ್ಟ ಅರಿವಿತ್ತು. ಈ ಹಿನ್ನೆಲೆಯಲ್ಲಿ ನಾವು ಸಾಕ್ರಟೀಸ್‌ನ ಕಡೆ ತಿರುಗಿನೋಡಿದರೆ, ಆತ ಕಂಡುಕೊಂಡಿದ್ದ, 'ಜ್ಞಾನಬೌದ್ಧಿಕ ವಿವೇಚನೆಯನ್ನು ಅವಲಂಬಿಸಿರುತ್ತದೆ.' ಎನ್ನುವ ಅಂಶ ಆತನ ಶಿಷ್ಯ ಪ್ಲೇಟೋವಿನ ತಾತ್ವಿಕತೆಯನ್ನರಿಯಲು ಸಹಕಾರಿ ಎನಿಸುತ್ತದೆ.[1]

ವಸ್ತುಗಳು ಒಂದು ಪರಿಮಿತಿಗೆ ಒಳಪಟ್ಟಿರುವುದನ್ನು ಪ್ಲೇಟೋ ಕಂಡುಕೊಂಡಿದ್ದನು. ಜಗತ್ತಿನ ವಸ್ತುಗಳೆಲ್ಲ ಕೇವಲ 'ತೋರಿಕೆ' (Appearence) ಎಂದು ಆತನ 'ಒಳಗಣ್ಣು' ತಿಳಿಹೇಳಿತ್ತು; ಸಹಜವಾಗಿಯೇ ಪ್ಲೇಟೋ 'ಮಿತಿ'ಯ ಮೇರೆಯನ್ನು ಮೀರಿದ ಅವ್ಯಕ್ತ 'ಸತ್'ಗಾಗಿ ಹುಡುಕಾಟ ನಡೆಸಿದ್ದನು; ಈ ಎಲ್ಲಾ ಸಕಾರಣಗಳಿಂದಾಗಿ ಆತನ ಮೂಲ ಆಶಯ ತೋರಿಕೆಗಳಾಚೆಗಿನ 'ಸತ್ಯದ' (Reality) ಪಾರಮ್ಯವನ್ನು ಎತ್ತಿ ಹಿಡಿಯುವುದಾಗಿತ್ತು;[2] ಜ್ಞಾನದ ವಸ್ತು ನಿಷ್ಠತೆಯನ್ನು ಸಂಸ್ಥಾಪಿಸುವುದಾಗಿತ್ತು. (Objectivity of Knowledge); ಏಕೆಂದರೆ ಕಾಮಾಲೆ ಕಣ್ಣಿನವನಿಗೆ ಜಗತ್ತಿನ ವಸ್ತುಗಳೆಲ್ಲವೂ ಹಳದಿ ಬಣ್ಣದ್ದಾಗಿಯೇ ತೋರುವುದಿಲ್ಲವೇ? ಇದೇ ರೀತಿ ಇಂದ್ರಿಯ ಸಂವೇದನೆ ಸತ್ಯದ ಕಡೆಗಿನ ಹಾದಿಯಿಂದ ವಿಮುಖಗೊಳಿಸುತ್ತದೆ. ಎಂಬ ವಾಸ್ತವ ಪ್ರಜ್ಞೆಯನ್ನು ಪ್ಲೇಟೋ ಮನಗಂಡಿದ್ದನು.

ಜ್ಞಾನವು ಕೇವಲ ಅಭಿಪ್ರಾಯವಾಗುವುದು (opinion) ಶಕ್ಯವಿಲ್ಲ ಎನ್ನುವುದು ಪ್ಲೇಟೋ ನಂಬಿಕೆ; ಆದರೆ, ಕೆಲವುಬಾರಿ ಅಭಿಪ್ರಾಯ ಅಥವಾ ಅಭಿಮತವು ಕಾಕತಾಳೀಯವೆಂಬಂತೆ ಸತ್ಯವಾಗುವುದೂ ಉಂಟು! ಉದಾಹರಣೆಗೆ, 'ನಾಳೆ ಬೆಳಿಗ್ಗೆ ಜ್ಞಾನ ಭಾರತಿಯ ಹೊರವಲಯದಲ್ಲಿ ಮಳೆ ಬೀಳಬಹುದು' ಎಂದು ಯಾರಾದರೊಬ್ಬರು ಕುಚೋದ್ಯದಿಂದಲೋ ಅಥವಾ ಕೇವಲ 'ಊಹೆ'ಯಿಂದಲೋ ಹೇಳಿ, ಅದರಂತೆಯೇ ಆ ಸಮಯದಲ್ಲಿ ಮಳೆಬಿದ್ದುಬಿಟ್ಟರೆ ಅದು ಕೇವಲ ಆಕಸ್ಮಿಕವೇ ಹೊರತು 'ಜ್ಞಾನ'ಪೂರ್ವಕ ಹೇಳಿಕೆಯಲ್ಲ! ಜ್ಞಾನ ಪೂರ್ವಕ ಹೇಳಿಕೆಯು ಸದಾ ಸಕಾರಣವನ್ನು ಆಧರಿಸಿರುತ್ತದೆ. ವಿಶ್ಲೇಷಣೆಯನ್ನು ಅವಲಂಬಿಸಿರುತ್ತದೆ ಎನ್ನುವುದು ಸರಿಯಷ್ಟೇ! ಜ್ಞಾನವು ಬುದ್ಧಿಯ ಕುಲುಮೆಯಿಂದ ಆವಿಷ್ಕಾರವಾಗುವಂಥಾದು, ಅಲ್ಲದೆ ಅದನ್ನು ಬದಲಾಯಿಸುವುದಕ್ಕೆ ಬಾರದು; ಏಕೆಂದರೆ, ಜ್ಞಾನವು ಮೂಲತಃ ಅಬಾಧಿತವಾಗಿದ್ದು ವಾಸ್ತವತೆಗೆ ಪೂರಕವಾಗಿರುತ್ತದೆ.[3] ಒಟ್ಟಾರೆ ಪ್ಲೇಟೋ ಇಂದ್ರಿಯ ಸಂವೇದನೆ ಕೇವಲ ತೋರಿಕೆ ಮಾತ್ರವೆಂದು ಹೇಳಿ, ತನ್ನ ಗುರಿ ಈ ತೋರಿಕೆಗಳಾಚೆಗಿನ ಸತ್ಯವನ್ನು (Reality) ಎತ್ತಿಹಿಡಿಯುವುದೇ ಆಗಿದೆ ಎಂದು ತನ್ನ ಅಂತಿಮ ಉದ್ದೇಶ ಕುರಿತು ಸ್ಪಷ್ಟಪಡಿಸುತ್ತಾನೆ; ಜ್ಞಾನವು ಕೇವಲ 'ಅಭಿಮತದ'

---

1 Frank Thilly — A History of Philosophy – Page No. 76
2 ಅದೇ — ಪುಟ ಸಂಖ್ಯೆ – 77
3 Trank Thilly–A History of Philosophy–Page, 76

ವ್ಯಾಪ್ತಿಗೆ ಸಿಗುವುದು ದುಸ್ಸಾಧ್ಯ, ಏಕೆಂದರೆ ಅಭಿಮತವು ಖಚಿತ ಜ್ಞಾನ ನೀಡಲಾರದು. ಆದಾಗ್ಯೂ ಅದು ಪ್ರತ್ಯೇಕಗಳಿಗೆ ಸೀಮಿತ, ಆದರೆ 'ಜ್ಞಾನ' ಸಾರ್ವತ್ರಿಕಕ್ಕೆ ಬದ್ಧವಾಗಿರುವುದು ;[1] ಜ್ಞಾನವು ಸದಾ ವಸ್ತುನಿಷ್ಠವೇ ಹೊರತು ಮೂರ್ಖ ಸೋಫಿಸ್ಟರು ಹೇಳುತ್ತಿದ್ದ ಹಾಗೆ ವ್ಯಕ್ತಿನಿಷ್ಠವಲ್ಲ.

IV

ಪ್ಲೇಟೋ ತಾತ್ತ್ವಿಕತೆಯಲ್ಲಿ ಎದ್ದು ಕಾಣುವ ಅಂಶವೆಂದರೆ 'ಆತ್ಯಂತಿಕ ಸತ್ಯ'ದ (Ultimate Reality) ಸ್ಪಷ್ಟತೆಯನ್ನು ಪಡೆಯುವಲ್ಲಿ ತೋರುವ ತೀವ್ರ ಆಸಕ್ತಿ[2] (Love of Wisdom) ; ಈ ನೆಲೆಯಲ್ಲಿಯೇ ಆತನ ತಾತ್ತ್ವಿಕತೆಯು ಒಂದು ಮಹತ್ವದ ತಿರುವನ್ನು ಪಡೆದುಕೊಳ್ಳುವುದು ಆತನ ಸಾರ್ವತ್ರಿಕ ಸಿದ್ಧಾಂತದ ಪರಿಕಲ್ಪನೆಯಲ್ಲಿ ! ಪ್ಲೇಟೋ ಈ ಗೋಚರ ಪ್ರಪಂಚದ ಹಿನ್ನೆಲೆಯಲ್ಲಿ ಇರಬಹುದಾದ 'ಸತ್ಯ'ವನ್ನು ಶೋಧಿಸುತ್ತಾ, ಪರೀಕ್ಷಿಸುತ್ತಾ ಅದನ್ನು ಸಂಪೂರ್ಣ ತನ್ನ ಗ್ರಹಿಕೆಗೆ ತೆಗೆದುಕೊಂಡು ತನ್ನದೇ ಆದ ವಿಶಿಷ್ಟ, ವಿಭಿನ್ನ ರೀತಿಯಲ್ಲಿ ತಾರ್ಕಿಕವಾಗಿ ಹೀಗೆ ಮಂಡಿಸುತ್ತಾನೆ :

ಪ್ಲೇಟೋ ಪ್ರಕಾರ 'ಸಾರ್ವತ್ರಿಕಗಳು' (Universal Ideas) ಆತ್ಯಂತಿಕ ಸತ್ಯವೆನಿಸುತ್ತವೆ. ಈ ಸಾರ್ವತ್ರಿಕಗಳು ಸ್ವತಂತ್ರವಾಗಿವೆಯಲ್ಲದೆ ತಮ್ಮದೇ ಆದ ರೀತಿಯಲ್ಲಿ 'ಅಸ್ತಿತ್ವ' ಹೊಂದಿ, ತಮ್ಮದೇ ಆದ ಲೋಕದಲ್ಲಿ ವಿಹರಿಸುತ್ತವೆ ; ಪ್ಲೇಟೋ ಪ್ರತಿಪಾದಿಸುವ ಈ ಬಗೆಯ ಸಾರ್ವತ್ರಿಕಗಳ ಪರಿಕಲ್ಪನೆಯನ್ನು (Concept) ಮೂರ್ತಗೊಳಿಸುವ ನಿಟ್ಟಿನಲ್ಲಿ ನಿಖರವಾಗಿ ಹೇಳುವುದಾದರೆ, ಈ ಜಗತ್ತಿನಲ್ಲಿ ನಾವು ಕಾಣುವ ಪ್ರತೀ ವಸ್ತುಗಳೂ ಕೇವಲ 'ಅಂತಿಮ' ಸತ್ಯದ ನಕಲುಗಳು ! ಅಥವಾ ಪ್ರತಿಬಿಂಬಗಳು ! ಉದಾಹರಣೆಗೆ ಕುರ್ಚಿಗಳನ್ನು ಪ್ರತಿನಿಧಿಸುವ 'ಕುರ್ಚಿತ್ವ (Universal Idea of Chairness) ; ಮಾನವರನ್ನು ಪ್ರತಿನಿಧಿಸುವ 'ಮಾನವತ್ವ' (Universal Idea of Man) ; ಸುಂದರತೆಯನ್ನು ಪ್ರತಿನಿಧಿಸುವ ಸೌಂದರ್ಯ (Universal Idea of Beauty) ಇತ್ಯಾದಿಗಳು ಸಾರ್ವತ್ರಿಕಗಳು ; ವ್ಯಕ್ತಿಯ ಮನದಲ್ಲಿ ಕುರ್ಚಿಯ ಕಲ್ಪನೆಯಿರುವುದಕ್ಕೆ ಕಾರಣ 'ಕುರ್ಚಿತ್ವ' ಎಂಬ ಸ್ವತಂತ್ರ ಸಾರ್ವತ್ರಿಕ ಸತ್ಯವು ಅಸ್ತಿತ್ವದಲ್ಲಿರುವುದರಿಂದ ! ಅರ್ಥಾತ್ ಸರ್ವವಸ್ತುಗಳೂ ಈ ಬಗೆಯ ಸಾರ್ವತ್ರಿಕ ಅಥವಾ ಸಾಮಾನ್ಯಗಳ ನಕಲುಗಳು (Copies) ಕುರ್ಚಿಯ ವಿಷಯದಲ್ಲಿ ಹೇಳುವುದಾದರೆ 'ಕುರ್ಚಿತ್ವ' ಎನ್ನುವುದೇ 'ಅಂತಿಮ ಸತ್ಯ' ಪರಂತು, ವ್ಯಾವಹಾರಿಕ ಜಗತ್ತಿನಲ್ಲಿ ಕಾಣಸಿಗುವ ಕುರ್ಚಿಯಲ್ಲ ! ಇದು ಪ್ಲೇಟೋ ಚಿಂತನೆಯ ವೈಖರಿ !

---

1 Bertrand Russell-History of Western Philosophy-P. 136

2 – ಅದೇ – ಪುಟ – 138

ಪ್ಲೇಟೋವಿನ ಸಾರ್ವತ್ರಿಕ ಸಿದ್ಧಾಂತ (Doctrine of Ideas) ವು ಮೇಲ್ನೋಟಕ್ಕೆ ಸರಳವಾಗಿ ಕಾಣಿಸಿದರೂ ಅದನ್ನು ನಾವು ಗ್ರಹಿಕೆಗೆ ತೆಗೆದುಕೊಳ್ಳುತ್ತಾ ಹೋಗುವಾಗ ಅದೊಂದು ಬಗೆಯಲ್ಲಿ ಸಂಕೀರ್ಣವೆನಿಸುತ್ತದೆ, ಅಲ್ಲದೆ ನಮ್ಮ ಚಿತ್ತ ಭೂಮಿಯಲ್ಲಿ ಕುತೂಹಲವನ್ನು ಒಡಮೂಡಿಸುತ್ತದೆ! ಪ್ಲೇಟೋ, ಅತ್ಯಂತಿಕ ಸತ್ಯವನ್ನು ಕುರಿತು ಹೇಳುವಾಗ ವ್ಯಾವಹಾರಿಕ ಪ್ರತ್ಯೇಕಗಳ ಬಗ್ಗೆ, ಅವುಗಳ ಕ್ಷಣಿಕತೆ ಬಗ್ಗೆ ವಿವರಿಸುತ್ತಾ 'ಅಮೂರ್ತ ತತ್ವ'ದೆಡೆಗೆ ನಮ್ಮನ್ನು ಕರೆದೊಯ್ಯುತ್ತಾನೆ ; ಹಾಗೆ ಹೇಳುವುದಾದರೆ, ಸುಮಧುರವಾಗಿ ಅರಳಿನಿಂತ ಪುಷ್ಪವೊಂದನ್ನು ನಾವು ನೋಡಿದೊಡನೆಯೇ ಅದರ ಕೋಮಲತೆಗೆ ಮನಸೋತು, ತಕ್ಷಣ ಉದ್ಗಾರವೆತ್ತುತ್ತೇವೆ... 'ಓಹ್! ಈ ಹೂವು ಎಷ್ಟು ಸುಂದರ !! ಎಂದು ಇಲ್ಲಿ ಪ್ಲೇಟೋ ನಮಗೊಂದು ಪ್ರಶ್ನೆ ಹಾಕುತ್ತಾನೆ, ಅದೆಂದರೆ—ಸೌಂದರ್ಯ ಎನ್ನುವ ಪರಿಕಲ್ಪನೆ ಆ ಹೂವಿನಲ್ಲಿ ಇರುವುದೇ...? ನಾವೇನಾದರೂ...ಹೌದು! ಎಂದು ಪ್ರತಿಕ್ರಿಯಿಸಿದರೆ, ಪ್ಲೇಟೋ ಮುಂದುವರಿದು ಮತ್ತೆ ನಮ್ಮನ್ನು ಕೆಣಕುತ್ತಾನೆ..., 'ಹೌದಾದರೇ...ಆ, ಹೂವು ಅಶಾಶ್ವತವಾದುದು, ಆದರೆ 'ಸೌಂದರ್ಯ' ಪರಿಕಲ್ಪನೆ ಶಾಶ್ವತವಾದದು, ವಾಸ್ತವ ಹೀಗಿರುವಾಗ, ಶಾಶ್ವತವಾಗಿರುವ ಸೌಂದರ್ಯದ ಪರಿಕಲ್ಪನೆ ಅಶಾಶ್ವತವಾದ ಆ ಪುಷ್ಪದಲ್ಲಿರುವುದು ಸಾಧ್ಯವೇ ? ಪ್ಲೇಟೋ ತಾನೆ ಮುಂದಾಗಿ ಏರ್ಪಟ್ಟ ತಾತ್ವಿಕ ಸಮಸ್ಯೆಯನ್ನು ಸರಳವಾಗಿ ಬಿಡಿಸಿ ಹೇಳುತ್ತಾನೆ ಅಂದರೆ, ನಾವು 'ಎಷ್ಟು ಸುಂದರ !' ಎಂದು ಉದ್ಗಾರವೆತ್ತಿದ ಹೂವು ಮೂಲತಃ ಅಶಾಶ್ವತವಾದುದಾದರೂ ಅದು ತನ್ನದೇ ಆದ ಲೋಕದಲ್ಲಿರುವ ಅಮೂರ್ತವೆನಿಸಿದ ಸೌಂದರ್ಯವೆನ್ನುವ ಪರಿಪೂರ್ಣ ಸಾರ್ವತ್ರಿಕ ಸತ್ಯವನ್ನು ಪ್ರತಿಬಿಂಬಿಸುತ್ತಿದೆ, ಅಷ್ಟೆ ! ಹೀಗೆ ಜಗತ್ತಿನ ಸಕಲ ವಸ್ತುಗಳೂ ತಮ್ಮ ವರ್ಗಕ್ಕೆ ಸೇರಿದ ಸಾರ್ವತ್ರಿಕಗಳನ್ನು ಅನುಕರಿಸುತ್ತವೆ ; ಅಂದರೆ ಒಂದು ವರ್ಗದ 'ಪ್ರತ್ಯೇಕಗಳು' ಅನೇಕವಾಗಿದ್ದರೂ ಸಹ ಅವೆಲ್ಲ ಒಂದೇ ಸಾರ್ವತ್ರಿಕದ ಬುನಾದಿಯ ಮೇಲೆ ನಿಂತಿರುತ್ತವೆ.[1] ಸಾರ್ವತ್ರಿಕಗಳ ಮೇಲೆ ಅವಲಂಬಿತಗೊಂಡಿರುತ್ತವೆ.

ಪ್ಲೇಟೋ ಪ್ರತಿಪಾದಿಸುವಂತೆ, ಸಾರ್ವತ್ರಿಕಗಳು ಸ್ವತಃ ಸಿದ್ಧತತ್ವಗಳು (Sub-Stances) ; ಅವು ಯಾವುದೇ ಎರಡನೆಯದರ ಮೇಲೆ ಆಧಾರಗೊಂಡಿಲ್ಲ ; ಅವು ಅಮೂರ್ತತತ್ವಗಳು; ಅವು ಕೇವಲ ಭಾವಗಳು (The Universals are not things but thoughts) ; ಪ್ರತಿ ವಸ್ತುವರ್ಗಕ್ಕೆ ಒಂದೊಂದು ಸಾರ್ವತ್ರಿಕವಿರುತ್ತದೆ ; ಸಾರ್ವತ್ರಿಕವು ಪರಿಪೂರ್ಣ ತತ್ವವೇ 'ಸತ್' ಎನಿಸಿಕೊಂಡಿದೆ ; ಅದು ಅಕಾಮ ಮತ್ತು ಆಪ್ತಕಾಮ ತತ್ವವೇ ಹೌದು ! ಸಾರ್ವತ್ರಿಕಗಳು ದೇಶಾಕಾಲಾತೀತವಾದವುಗಳು ; ಅವುಗಳನ್ನು ವೈಚಾರಿಕ ನೆಲೆಯಿಂದ (Reason) ಮಾತ್ರವೇ ಗ್ರಹಿಕೆಗೆ ತೆಗೆದುಕೊಳ್ಳಲು ಸಾಧ್ಯ.

---

1 Bertrand Russell–History of Western Philosophy–P. 137

V

ಪ್ಲೇಟೋ ತಾತ್ತ್ವಿಕತೆಯು ಪ್ರಾರಂಭದ ಉತ್ಸಾಹದಲ್ಲಿ ಅನೇಕತೆಯನ್ನು ಹೇಳುವುದಾದರೂ ಅಂತಿಮವಾಗಿ ಬೇರೆ ತಿರುವು ಪಡೆದುಕೊಂಡು ಅದು ಒಂದು ಬಗೆಯ ವಿಶಿಷ್ಟ ಏಕತ್ವಕ್ಕೆ ಶರಣಾಗಿದೆ! ಅನೇಕತೆಯು ನಿಜವಾದರೂ ಆತ್ಯಂತಿಕ ದೃಷ್ಟಿಯಿಂದ ಅದು ಅಷ್ಟೊಂದು ಪ್ರಾಮುಖ್ಯವಾಗಲಾರದು; ಏಕೆಂದರೆ ಈ ಅನೇಕತೆಗೆ ಬುನಾದಿಯಾಗಿರುವ 'ಏಕತ್ವವೇ' ಮುಖ್ಯ ಎನ್ನುವ ಪ್ಲೇಟೋ 'ಜಟ್ಟಿ ಬಿದ್ದರೂ ಮೀಸೆ ಮಣ್ಣಾಗಲಿಲ್ಲ'! ಎಂಬಂತೆ ತನ್ನ ನಿಲುವನ್ನು ಸಮರ್ಥಿಸಿಕೊಳ್ಳಲು ಹೆಣಗಾಡುತ್ತಾನೆ! ಆತನ ರೀತ್ಯಾ ಪ್ರತೀವಸ್ತು–ವರ್ಗಕ್ಕೆ ಆಧಾರವಾಗಿ ನಿಂತಿರುವ ಬಹುತ್ವದ ಸಾರ್ವತ್ರಿಕಗಳಲ್ಲೆಲ್ಲಾ ಬೃಹತ್ತಾದದ್ದು 'ಪರಮಶ್ರೇಯ'! ಈ ಪರಮಶ್ರೇಯದಿಂದಲೇ ಉಳಿದೆಲ್ಲಾ ಸಾರ್ವತ್ರಿಕಗಳು ಅಸ್ತಿತ್ವ ಪಡೆಯುತ್ತವೆಯಲ್ಲದೆ ಅಂತಿಮವಾಗಿ ಪರಮಶ್ರೇಯಕ್ಕೇ ವಾಪಾಸಾಗುತ್ತವೆ! ಅರ್ಥಾತ್ ಪ್ಲೇಟೋವಿನ ತಾತ್ತ್ವಿಕತೆಯಲ್ಲಿ ನಾವು ಅನೇಕತೆಯಲ್ಲಿ ಏಕತೆಯನ್ನು ನೋಡುತ್ತೇವೆ, ಜೊತೆಗೆ ಅದೊಂದು ರೀತಿಯಲ್ಲಿ ಭೇದದಲ್ಲಿ ಅಭೇದ, ಅಭೇದದಲ್ಲಿ ಭೇದವೆನಿಸಿದೆ ಎನ್ನುವುದು ಗಮನಾರ್ಹ.

ಪ್ಲೇಟೋ ನಿಲುವಿನ ಪ್ರಕಾರ ವ್ಯಕ್ತ ಪ್ರಪಂಚವು ಸಾರ್ವತ್ರಿಕ ಸತ್ಯಗಳಿಗೆ ವಿರುದ್ಧವಾಗಿದೆ. ಸಾರ್ವತ್ರಿಕಗಳು ಅಚಲ, ಆದರೆ ಈ ಜಗತ್ತು ಬದಲಾವಣೆ ಪ್ರಕ್ರಿಯೆಯಲ್ಲಿ ಇರುವಂಥಾದ್ದು! ಸಾರ್ವತ್ರಿಕಗಳು ಅಮೂರ್ತ ತತ್ತ್ವಗಳೆನಿಸಿದರೆ ಜಗತ್ತು ಮೂರ್ತ ರೂಪ; ಸಾರ್ವತ್ರಿಕಗಳು ಶಾಶ್ವತ, ಜಗತ್ತು ಅಪರಿಪೂರ್ಣ ಹಾಗೂ ಕ್ಷಣಿಕ; ಜಗತ್ತಿನ ವಸ್ತುಗಳು ಕಣ್ಣಿಗೆ ಎಟಕುತ್ತವೆ, ಆದರೆ ಪರಿಪೂರ್ಣ ಸಾರ್ವತ್ರಿಕಗಳು ಜ್ಞಾನಚಕ್ಷುಸ್ಸಿಗೆ ಲಭ್ಯ.

ಪ್ಲೇಟೋ ಚಿಂತನೆಯಲ್ಲಿ ಅಂತಿಮ ಸತ್ಯದ ಸ್ಥಾನವನ್ನು 'ಪರಮಶ್ರೇಯ' [The Idea of Good] ಪಡೆದುಕೊಂಡಿದೆ ಎಂದು ನಾವು ಗ್ರಹಿಕೆಗೆ ತೆಗೆದುಕೊಳ್ಳುತ್ತಾ, ಅವಲೋಕನವನ್ನು ಮುಂದುವರಿಸುತ್ತಿರುವಾಗ ಆತನ ತಾತ್ತ್ವಿಕತೆಯಲ್ಲಿ 'ದೇವರು' ಎಂಬ ಶಬ್ದವೂ ಕಾಣಸಿಕ್ಕು ನಮ್ಮನ್ನು ಸ್ವಲ್ಪ ಮಟ್ಟಿಗೆ ಗೊಂದಲದಲ್ಲಿ ತಳ್ಳುತ್ತದೆ! ಇದು ನಮ್ಮನ್ನು, 'ಪರಮಶ್ರೇಯ' ಮತ್ತು 'ದೇವರು'–ಇವೆರಡೂ ತತ್ತ್ವಗಳ ಸ್ಥಾನ–ಮಾನಗಳ ಬಗೆಗೆ ತಲೆಕೆಡಿಸಿಕೊಳ್ಳುವತ್ತ ನಮ್ಮನ್ನು ದೂಡುವ ಸಂಭವವಿರುವುದಾದರೂ ಪ್ಲೇಟೋವಿನ 'ಫೈಲೀಬಸ್' ಸಂವಾದ ನಮ್ಮನ್ನು ಇಕ್ಕಟ್ಟಿನ ಅನಗತ್ಯ ಜಿಜ್ಞಾಸೆಯಿಂದ ಕಾಪಾಡುತ್ತದೆ! ಅಲ್ಲಿ ಬಹಳ ನಾಜೂಕಾಗಿ, ದೇವರು ಹಾಗೂ ಪರಮಶ್ರೇಯ ತತ್ತ್ವಗಳೆರಡೂ ಅಭಿನ್ನ ತತ್ತ್ವಗಳು ಎಂಬ ರೀತಿಯ ಪ್ಲೇಟೋ ಅನಿಸಿಕೆಯನ್ನು ನಾವು ಗಮನಿಸಬಹುದಾಗಿದೆ!!

VI

ಪ್ಲೇಟೋ ತನ್ನ ತಾತ್ತ್ವಿಕತೆಯಡಿಯಲ್ಲಿ ಆತ್ಮತತ್ತ್ವವನ್ನು ತಂದಿದ್ದಾನೆ, ಒಪ್ಪಿಕೊಂಡಿದ್ದಾನೆ ; ಆತನ ರೀತ್ಯಾ 'ಆತ್ಮ' ಅಮರ, ಅವಿನಾಶಿ, ಜನನ-ಮರಣಗಳು ಶರೀರಕ್ಕೇ ಹೊರತು ಆತ್ಮಕ್ಕಲ್ಲ ! ಅದು ಆದಿ-ಅಂತ್ಯರಹಿತವೆಂದು ಹೇಳಿ ತಲೆದೂಗುತ್ತಾನೆ ! ಆತನ ಸಂಸ್ಮರಣವಾದ [Argument from Anamnesis] ವಿವರಿಸುವಂತೆ 'ಜ್ಞಾನ' ಎನ್ನುವುದು ಕೇವಲ ಒಂದು ಬಗೆಯ 'ನೆನಪು !' ಅದು ನವೀನವಾಗಿ ಆವಿಷ್ಕಾರಗೊಳ್ಳದು ; ಆತ್ಮವು ತಾನು 'ಅಮೂರ್ತ' ಸ್ಥಿತಿಯಲ್ಲಿ ಸಾರ್ವತ್ರಿಕ ಜಗತ್ತಿನಲ್ಲಿ ಹೊಂದಿದ 'ದಿವ್ಯಾನಂದ' ವನ್ನು ಈ ಪ್ರಾಪಂಚಿಕತೆಗೆ ಬಂದಾಗ ಜ್ಞಾಪಿಸಿಕೊಳ್ಳುವುದು ! ಅರ್ಥಾತ್ ಅದು, 'ರೂಪ [Form] ವನ್ನು ಪಡೆದು ಈ ಜಗತ್ತಿಗೆ ಬಂದು, 'ಪ್ರತ್ಯೇಕ'ಗಳನ್ನು ಕಂಡು ಒಂದು ಬಗೆಯ 'ಪ್ರೇರಣೆ' ಯನ್ನು ಪಡೆಯುತ್ತದೆ. ಆ ಸಮಯದಲ್ಲಿ ಅದಕ್ಕೆ 'ಅಮೂರ್ತ' ಸ್ಥಿತಿಯಲ್ಲಿ ತಾನು ಜ್ಞಾನ ಚಕ್ಷುಸ್‌ನಿಂದ ಹೊಂದಿದ 'ಪರಿಪೂರ್ಣ ಸತ್ಯ'ದ ಜ್ಞಾನ ಮರುಕಳಿಸುತ್ತದೆ ; ಅಂದರೆ ಇಲ್ಲಿ ಪ್ಲೇಟೋ ಅಭಿಪ್ರಾಯಪಡುವುದೇನೆಂದರೆ, ಜ್ಞಾನವು ಜಗತ್ತಿನಲ್ಲಿ ಹೊಸದಾಗಿ ಉದಯಿಸುವುದಿಲ್ಲ! ಆದರೆ, ಮೊದಲೇ ಅವ್ಯಕ್ತ ಸ್ಥಿತಿಯಲ್ಲಿದ್ದ ಜ್ಞಾನ ಹೊಳೆಯುತ್ತದೆ ; ಸೋದಾಹರಣವಾಗಿ ಹೇಳುವುದಾದರೆ, ಒಬ್ಬ ಆಚಾರ್ಯ ತನ್ನ ಜಿಜ್ಞಾಸುವಿನ ಚಿತ್ತ ಭೂಮಿಯಲ್ಲಿ ಹೊಸದಾಗಿ ಏನನ್ನೂ ಬಿತ್ತಲಾರ, ತುಂಬಲಾರ ! ಆದರೆ ಅದಾಗಲೇ ಜಿಜ್ಞಾಸುವಿನ ಮನದಲ್ಲಿ ಅಸ್ಪಷ್ಟವಾಗಿ ಸುಪ್ತವಾಗಿದ್ದ ಜ್ಞಾನವನ್ನು ಬಡಿದೆಬ್ಬಿಸುತ್ತಾನೆ, ಅಷ್ಟೇ ! ಮಸಕು ಮಸುಕಾದ ಜ್ಞಾನದ ಮೋಡಗಳನ್ನು ಯೋಗ್ಯ ಗುರುವು ಚೆದುರಿಸಿದಾಗ ವಿದ್ಯಾರ್ಥಿಯಲ್ಲಿನ ಜ್ಞಾನ ಪ್ರಕಾಶಿಸಲ್ಪಡುವುದು ; ಈ ಬಗೆಯಲ್ಲಿ ಆತ್ಮನಿಗೆ ಜನನವೂ ಇಲ್ಲ, ಮರಣವೂ ಇಲ್ಲ ; ಅದು ಮೂರ್ತಗೊಂಡಾಗ 'ಜನನ' ಎನ್ನುವರು ; 'ಅಮೂರ್ತ' ಗೊಂಡಾಗ 'ಮರಣ' ವೆನ್ನುವರು ; ದೇಹ ಮಾತ್ರ ಹುಟ್ಟು - ಸಾವುಗಳ ಚಕ್ರಕ್ಕೆ ಸಿಗುತ್ತದೆಯೇ ಹೊರತು ಆತ್ಮವಲ್ಲ ;

ಆತ್ಮವು ಪ್ಲೇಟೋ ವಾದಿಸುವಂತೆ 'ಅಮರ' (Immortal) ವಾದುದು. ಪ್ಲೇಟೋ ತನ್ನ ಫೇಡ್ರುಸ್ [Phaedrus] ಸಂವಾದದಲ್ಲಿ, ಆತ್ಮವು ತನಗೆ ತಾನೆ ಚಲನೆಯನ್ನುಂಟುಮಾಡಿಕೊಳ್ಳುತ್ತದೆ ; 'ಸಚಲನಾತ್ಮಕವಾದ' [Self-motion] ಅದಕ್ಕೆ ಯಾವುದರ ಅಡೆ - ತಡೆಯೂ ಇಲ್ಲ !

ಈ ಕಾರಣದಿಂದಲೇ ಅದು ಹುಟ್ಟು - ಸಾವು ಪರಿಧಿಗೆ ಒಳಪಡದು ; ಎಂದೇ ಹೇಳುವನು. ಅಲ್ಲದೆ, ಆತನ ರೀತ್ಯಾ ಆತ್ಮವು ಸಾರ್ವತ್ರಿಕಗಳೊಡನೆ ಸರ್ವ ಬಗೆಯಿಂದಲೂ ಅನುರೂಪತೆ [Affinity] ಯನ್ನು ಪಡೆದಿದೆ ; ಸಾರ್ವತ್ರಿಕಗಳು ಅಮರವಾಗಿರುವುದರಿಂದ ಸಹಜವಾಗಿಯೇ ಆತ್ಮವೂ ಸಹ ಅಮರ ಎಂದು ಸಿದ್ಧವಾಗುತ್ತದೆ.

VII

ಒಟ್ಟಾರೆ ಪ್ಲೇಟೋ ತನ್ನ ಚಿಂತನೆಯ ಪ್ರಾರಂಭದಲ್ಲಿ ಅನೇಕ ಸಾರ್ವತ್ರಿಕ ಸತ್ಯಗಳನ್ನು ಒಪ್ಪಿಕೊಂಡು ಅಂತಿಮವಾಗಿ 'ಏಕತತ್ತ್ವಕ್ಕೆ' [ಪರಮಶ್ರೇಯ] ಬಂದಿರುವುದು ಆತನ ತಾತ್ತ್ವಿಕತೆಯು 'ಬಿಗಿ' ಯನ್ನು ಕಳೆದುಕೊಂಡುದದರ ಸ್ಪಷ್ಟ ದ್ಯೋತಕ! ಆತ 'ದೇವರು' ಮತ್ತು 'ಜಗತ್ತಿನ' ಸ್ಥಾನವನ್ನು ಹೇಳುವಲ್ಲಿ ತಾರ್ಕಿಕ ನೆಲೆ - ಬೆಲೆಯನ್ನು ಮರೆತಿರುವುದೂ ಅಲ್ಲದೆ ದೇವರು ಹಾಗೂ ಜಗತ್ತಿನ ಪ್ರಾಮುಖ್ಯ ಗುರುತಿಸುವಲ್ಲಿ ಸೋತಿರುವುದೂ ಆತನ ತಾತ್ತ್ವಿಕತೆಯಲ್ಲಿನ 'ದೋಷ' ವೆಂದೇ ಹೇಳಬೇಕು! ಆದಾಗ್ಯೂ ಪ್ಲೇಟೋ ತಾತ್ತ್ವಿಕತೆಯು ಗ್ರೀಕ್ ಆಧ್ಯಾತ್ಮ ಪರಂಪರೆಯಲ್ಲಿ ತನ್ನದೇ ಆದ ವಿಶಿಷ್ಟ ಮುದ್ರೆಯನ್ನು ಒತ್ತಿದೆ; ತನ್ನದೇ ಆದ ಸ್ಥಾನವನ್ನು ಪಡೆದು ಕೊಂಡಿದೆ; ಇಂದಿಗೂ ಜಗತ್ತಿನಲ್ಲಿ ಪ್ಲೇಟೋ ಯುವಕರಿಗೆ, ಪ್ರಾಜ್ಞರಿಗೆ ಸ್ಫೂರ್ತಿಯ ಚಿಲುಮೆಯಾಗಿರುವುದು ಆತನ ಮಹತ್ವಕ್ಕೆ ಸ್ಪಷ್ಟ ಸಾಕ್ಷಿ! ಆತನ ಚಿಂತನೆಯಲ್ಲಿ ಬೌದ್ಧಿಕತೆಯನು ಸಮರ್ಥವಾಗಿ ಬಳಸಿಕೊಳ್ಳುವ ಪ್ರಯತ್ನ ಹಾಗೂ ತನ್ನ ನಿಲುವನ್ನು ಉಳಿಸಿ - ಬೆಳೆಸುವಲ್ಲಿ ವ್ಯಕ್ತವಾಗುವ ಪ್ರಾಮಾಣಿಕ ಆತ್ಮವಿಶ್ವಾಸ, ದೃಢತೆ, ಮೆಚ್ಚಿಗೆ ಗಳಿಸುತ್ತದೆ. ನವ್ಯ ತತ್ತ್ವಪರಂಪರೆಗೆ ಸದಾಕಾಲಕ್ಕೂ 'ಆದರ್ಶ' ಹಾಗೂ 'ಆಕರ' ವಾಗುವ ಎಲ್ಲಾ ಅಂಶಗಳೂ ಪ್ಲೇಟೋ ತಾತ್ತ್ವಿಕತೆಯಲ್ಲಿ ನಿಚ್ಚಳವಾಗಿವೆ.

ಕಾಳಿದಾಸನ 'ಮೇಘದೂತ'–ಒಂದು ಸಹೃದಯ ಚಿಂತನೆ

ರಾ. ಲಕ್ಷ್ಮೀನಾರಾಯಣ

ಕವಿ ಕುಲ ಗುರುವಾದ ಕಾಳಿದಾಸನ ಕೃತಿಗಳಲ್ಲಿ ಮೇಘದೂತಕ್ಕೆ ತನ್ನದೇ ಆದ ಅನನ್ಯ ಸ್ಥಾನವಿದೆ. ಆದೊಂದು ಪ್ರೇಮದ ಅಮರ ಕಾವ್ಯ, ಸಿ.ಎ. ಕಿಂಕೇಡ್ ಎಂಬ ವಿದ್ವಾಂಸರು ಮೇಘದೂತವನ್ನು ಕುರಿತು "The most wonderful love poem in any language"–ಎಂದು ಕೊಂಡಾಡಿದ್ದಾರೆ. ಅದೊಂದು ಉತ್ಕೃಷ್ಟ ಭಾವಗೀತೆ ಕತೆಯ ಹಂಗೇ ಇಲ್ಲದೆ, ಮುಕ್ತಕಗಳನ್ನೋದಿ ಆಸ್ವಾದಿಸುವಂತೆ ಇದರ ಪದ್ಯಗಳನ್ನು ಓದಿ ಸವಿಯಬಹುದೆಂಬುದೇ ಅದರ ವಿಶಿಷ್ಟತೆ. ಪೌರ್ವಾತ್ಯ ಮತ್ತು ಪಾಶ್ಚಾತ್ಯ ವಿದ್ವಾಂಸರನೇಕರು ಇದರ ಕಾವ್ಯ ಗುಣವನ್ನು ಕಲ್ಪಕತೆಯನ್ನು ಭಾವಪ್ರವಣತೆಯನ್ನು ಕಲಾತ್ಮಕತೆಯನ್ನು ಬಗೆಬಗೆಯಾಗಿ ಬಣ್ಣಿಸಿದ್ದಾರೆ. 'Meghaduta is a perfect work of Art' ಎಂದು 'ಟಾನಿ' ಎಂಬಾತ ಹೇಳಿದರೆ 'It is a grand production' ಎಂದು ಮ್ಯಾಕ್ಸ್ ಮುಲ್ಲರ್ ಪಂಡಿತ ಮೆಚ್ಚುಗೆಯ ಉದ್ಗಾರ ತೆಗೆದಿದ್ದಾನೆ. ನಮ್ಮ ದೇಶದ ರಮೇಶ್ ಚಂದ್ರದತ್ ಅವರಂತೂ Kalidasas Meghaduta is a lyrical gem, so musical, so pathetic and yet so sublime, that there is nothing equal to it either in Sanskrit or in any other Literature. It is woven into such grand and majestic poetry and a theme so beautiful and sublime, that imagination can conceive nothing lovelier or loflier than that" ಎಂದು ಪ್ರಶಂಸೆಯ ಮಳೆಗರೆದಿದ್ದಾರೆ.

ಈ ಎಲ್ಲ ಮೆಚ್ಚುಗೆಯ ಮತ್ತು ಪ್ರಶಂಸೆಯ ಮಾತುಗಳಿಗಿಂತ ಮಿಗಿಲಾದ ಕಾವ್ಯ ಗುಣವನ್ನು ಅದು ಹೊಂದಿದೆ ಎಂಬುದೇ ಅದರ ವಿಶಿಷ್ಟತೆ. ಕಲ್ಪನೆಯ ಔಜ್ವಲ್ಯ ಮತ್ತು ಭಾವನೆಯ ಭವ್ಯತೆಯಲ್ಲಿ ಇದನ್ನು ಸರಿಗಟ್ಟುವ ಕಾವ್ಯವೇ ಇಲ್ಲ. ಚೇತನಾ ರೋಪಣೆಯ ಶ್ರೇಷ್ಠ ಕಾವ್ಯವೆಂದು ಹೆಸರಾದ ಈ ಕಾವ್ಯದಲ್ಲಿ ಅಚೇತನ ವಸ್ತುಗಳೆಂದು ಸಾಮಾನ್ಯವಾಗಿ ಭಾವಿಸಲಾಗಿರುವ ಪ್ರಕೃತಿಯ ವಸ್ತುಗಳನ್ನು ಮನುಷ್ಯ ಚೇತನವೆಂದು ಕಲ್ಪಿಸಲಾಗಿದೆ. ಮೇಘವನ್ನು ತನ್ನ ಮಿತ್ರನೆಂದು ಭಾವಿಸಿ ಅದನ್ನು ಮಾತಾಡಿಸುವ ಯಕ್ಷ ಮುಂದೆ ನದಿಯನ್ನು ಹೆಣ್ಣೆಂದುಕಲ್ಪಿಸಿರುವ ಗಿಳಿಯನ್ನು ಸಖಿ ಎಂದು ಭಾವಿಸಿರುವ ಪದ್ಯಗಳು ಈ ಕಾವ್ಯದಲ್ಲಿವೆ. ವಾಲ್ಮೀಕಿರಾಮಾಯಣದಲ್ಲಿ ಸೀತೆಯನ್ನು ಕಳೆದುಕೊಂಡ ರಾಮ ಪರ್ವತವನ್ನು ಕುರಿತು ಪ್ರಶ್ನಿಸುವ ಶ್ಲೋಕವೊಂದಿದೆ. ಬಹುಶಃ ಈ ನಿಟ್ಟಿನಲ್ಲಿ ಕಾಳಿದಾಸನಿಗೆ ಮೂಲ ಪ್ರೇರಣೆ ರಾಮಾಯಣದಿಂದಲೇ ಬಂದಿರಬೇಕು. ಅಷ್ಟೇ ಏಕೆ

ವಿರಹಿಯೊಬ್ಬನು ದೂತನ ಮೂಲಕ ತನ್ನ ಪ್ರಿಯ ಪತ್ನಿಗೆ ಪ್ರೇಮದ ಸಂದೇಶವನ್ನು ಕಳಿಸುವ ಯೋಚನೆ ಕಾಳಿದಾಸನಿಗೆ ಬಂದದ್ದೇ ರಾಮಾಯಣದಿಂದ ಎಂದು ಹೇಳುತ್ತಾರೆ. ಚೇತನಾರೋಪಣೆಯ ಮೊದಲ ಪ್ರಯೋಗವನ್ನು ವಿಕ್ರಮೋರ್ವಶಿಯಲ್ಲಿ ಮಾಡಿದ್ದಾನೆ. ಆದರ ಅತ್ಯಂತ ಯಶಸ್ವೀ ಹಾಗೂ ಪ್ರಕರ್ಷ ರೂಪದ ಪ್ರಯೋಗ ಮೇಘಧೂತದಲ್ಲಾಗಿದೆ. ಏಕಾಂಗಿಯಾಗಿ ವಿರಹ ಯಾತನೆಯನ್ನು ಅನುಭವಿಸುತ್ತಿರುವ ಯಕ್ಷನಿಗೆ ಸಂದೇಶ ಕಳಿಸಬೇಕೆಂಬ ಆತುರಕ್ಕಿಂತ, ತನ್ನ ವಿರಹದ ವ್ಯಥೆಯನ್ನು ತೋಡಿಕೊಂಡು ಹೃದಯದ ಭಾರವನ್ನು ಹಗುರಾಗಿಸಿಕೊಳ್ಳಬೇಕೆಂಬ ಕಾತರವಿದೆ, ಹಾಗಾಗಿ ಅವನಿಗೆ ಮೋಡ ತನ್ನ ಸಂದೇಶವನ್ನು ಕೇಳಿಸಿಕೊಳ್ಳುತ್ತದೆಯೆ, ಅದು ತನ್ನ ಸಂದೇಶವನ್ನು ಒಯ್ದು ತನ್ನ ಪತ್ನಿಗೆ ತಲುಪಿಸಬಲ್ಲುದೆ ಎಂಬ ಬಗ್ಗೆ ಸಂದೇಹ ಏಳುವುದೇ ಇಲ್ಲ. ಕಾರಣ ಪ್ರಿಯೆಯ ಹಂಬಲದಿಂದ ಸಂತಪ್ತನಾದವನು ಅವನು. ಹಾಗೆ ಸಂತಪ್ತರಾದವರಿಗೆ ಮೇಘವೇ ಶರಣು ಎಂದು ಅವನು ತಿಳಿದಿದ್ದಾನೆ. ಹಾಗಾಗಿ ಆಷಾಡದ ಮೊದಲ ದಿನ ಮೋಡವನ್ನು ಕಂಡದ್ದೇ ಅದನ್ನು ಸ್ವಾಗತಿಸಿ, ಅರ್ಚಿಸಿ ಮಾತಾಡಿಸುತ್ತಾನೆ. ತನ್ನ ಕ್ಷೇಮ ವಾರ್ತೆಯನ್ನು ಮನದನ್ನೆಗೆ ತಿಳಿಸಿದರೆ, ಆಕೆ ಹೇಗೋ ಜೀವ ಹಿಡಿದು ಬದುಕಿರುತ್ತಾಳೆಂಬ ಆಸೆಯಿಂದ ಅದನ್ನು ಹೊಗಳಿ ದೀನನಾಗಿ ಬೇಡಿಕೊಳ್ಳುತ್ತಾನೆ. ಕನ್ನಡದಲ್ಲಿ ಅಕ್ಕಮಹಾದೇವಿ ತನ್ನ ಆರಾಧ್ಯ ದೈವವಾದ ಚನ್ನಮಲ್ಲಿಕಾರ್ಜುನನು ಅರಸುತ್ತ ಹೊರಟಾಗ ಹೀಗೆಯೇ ತರುಮರಾದಿಗಳನ್ನು, ಪಶುಪಕ್ಷಿ ಮೃಗಗಳನ್ನು ಗಿರಿ ಸರೋವರಗಳನ್ನು ಮಾತಾಡಿಸುತ್ತಾ ಹೋಗುವುದನ್ನು ಕಾಣಬಹುದು.

ಹಾಗೆ ನೋಡಿದರೆ ಮೇಘದೂತದ ಕತೆಯ ಹಂದರ ತೀರಾ ತೆಳು. ಕುಬೇರನ ಕೋಪಕ್ಕೆ ತುತ್ತಾಗಿ ಶಾಪಗ್ರಸ್ತನಾದ ಯಕ್ಷನೊಬ್ಬನು ತನ್ನ ಪ್ರಿಯೆಯನ್ನಗಲಿ ಒಂದು ವರ್ಷಕಾಲ ರಾಮಗಿರಿಯಲ್ಲಿರಬೇಕಾಗುತ್ತದೆ. ಎಂಟು ತಿಂಗಳು ವಿರಹದ ಬೇಗೆಯಲ್ಲಿ ಕಳೆದ ಮೇಲೆ, ಒಂದು ದಿನ ಮಳೆಗಾಲದ ಮೋಡವನ್ನು ನೋಡಿ, ಅಲಕಾ ನಗರದಲ್ಲಿರುವ ತನ್ನ ಪ್ರಿಯೆಗೆ ಪ್ರೇಮ ಸಂದೇಶವನ್ನು ಕೊಂಡೊಯ್ಯಬೇಕೆಂದು ಕೇಳಿಕೊಳ್ಳುತ್ತಾನೆ. ಮೇಘಕ್ಕೆ ಅದು ಸಾಗಬೇಕಾದ ಪಯಣದ ಹಾದಿಯನ್ನು ಸೂಚಿಸಿ, ಮಾರ್ಗದುದ್ದಕ್ಕೂ ಬರುವ ಗಿರಿಗಳು, ನದಿಗಳು, ನಗರಗಳನ್ನು ಮನೋಹರವಾಗಿ ಬಣ್ಣಿಸುತ್ತಾ ಹೋಗುತ್ತಾನೆ. ಇಲ್ಲಿಗೆ ಪೂರ್ವ ಮೇಘವೆಂಬ ಮೊದಲ ಭಾಗ ಮುಗಿಯುತ್ತದೆ. ಉತ್ತರ ಮೇಘದಲ್ಲಿ ಅಲಕಾ ನಗರದ ವೈಭವ, ಅಲ್ಲಿಯ ಯಕ್ಷರ ಭೋಗ ವಿಲಾಸಗಳು, ವಿರಹದಲ್ಲಿ ಬೇಯುತ್ತಿರುವ ತನ್ನ ಪತ್ನಿಯ ಕರುಣಾಜನಕ ಅವಸ್ಥೆ ಮುಂತಾದುವನ್ನು ವರ್ಣಿಸಿ, ಕಡೆಯಲ್ಲಿ ತನ್ನ ಸಂದೇಶವನ್ನು ಹೇಳುತ್ತಾನೆ.

ಸ್ಥೂಲವಾಗಿ ಕತೆ ಇಷ್ಟೆ. ಆದರೆ ಇಷ್ಟು ತೆಳ್ಳನೆಯ ಕತೆಯ ಹಂದರದಮೇಲೆ ಕಾಳಿದಾಸನ ಕಾವ್ಯಲತೆ ದಟ್ಟವಾಗಿ ದಾಂಗುಡಿ ಇಟ್ಟಿದೆ. ಬಾಹ್ಯ ಪ್ರಕೃತಿ ಮತ್ತು ಮಾನವನ ಅಂತಃಪ್ರಕೃತಿಗಳ ಮರ್ಮವನ್ನು ಅರಿತ ಕವಿ, ಅವುಗಳ ಹೃದಯವನ್ನು

ಮಿಡಿದು ದಿವ್ಯ ಸುಮಧುರಗಾನವನ್ನು ಹೊಮ್ಮಿಸಿದ್ದಾನೆ. ಯಕ್ಷ-ಯಕ್ಷಿಯರ ವಿಪ್ರಲಂಭ ಶೃಂಗಾರದ ಭಾವಲಹರಿಗಳ ಜೊತೆ ಜೊತೆಗೇ ಪ್ರಕೃತಿಯ ಸುಮಧುರ ಚಿತ್ರಗಳನ್ನು ಅಂಕಿಸುತ್ತಾ ಹೋಗುವ ಈ ಕಾವ್ಯ ಪ್ರಕೃತಿ ಮತ್ತು ದಾಂಪತ್ಯಪ್ರೇಮದ ಅಮರಕಾವ್ಯ ವೆನಿಸಿರುವುದು ಆಶ್ಚರ್ಯವೇನಲ್ಲ. ಮೇಘ ಪ್ರಯಾಣದ ನೆಪ ಮಾಡಿಕೊಂಡು ನದಿ, ಬೆಟ್ಟ, ನಗರಗಳನ್ನು ಅನನ್ಯವಾಗಿ ಬಣ್ಣಿಸುತ್ತಾ ಸಾಗುವ ಈ ಕಾವ್ಯ ಕಾಳಿದಾಸನ ಲೋಕ ಹೃದಯದ ಪರಿಜ್ಞಾನಕ್ಕೆ ಚಿರಂತನ ಸಾಕ್ಷಿಯಾಗಿದೆ. ಕೆಲವರು ಕಾಳಿದಾಸನಿಗೆ ಈ ಕಾವ್ಯದ ಮೂಲ ಪ್ರೇರಣೆ ದೊರೆತುದು ಅವನು ಆಸ್ಥಾನ ಕವಿಯಾಗಿದ್ದುದರಿಂದ ಎಂದು ಹೇಳುವುದುಂಟು. ರಾಜ ದಿಗ್ವಿಜಯಕ್ಕೆ ಹೋದಾಗ, ಅವನ ಜೊತೆ ಹೋಗಬೇಕಾಗಿ ಬಂದೋ, ರಾಜನೇ ಕುಪಿತನಾಗಿ ಒಂದು ವರ್ಷ ರಾಜಧಾನಿಯಿಂದ ಹೊರದೂಡಿದಾಗಲೋ, ತನ್ನ ನಲ್ಲೆಯನ್ನು ಅಗಲಿರಬೇಕಾಗಿ ಬಂದದ್ದರ ಅನುಭವದ ಆಧಾರದಮೇಲೆ ಈ ಕಾವ್ಯ ರಚಿಸಿರಬೇಕೆಂದು ಹೇಳುತ್ತಾರೆ. ಕವಿಯ ಅನುಭವ ಪ್ರಾಮಾಣಿಕತೆಯನ್ನು ಸ್ಥಾಪಿಸಲು ಇಷ್ಟುದೂರ ಹೋಗಬೇಕಾದ್ದಿಲ್ಲ.ಎಲ್ಲವನ್ನೂ ಸ್ವಾನುಭವದಿಂದಲೇ ರಚಿಸಿರಬೇಕೆಂದು ನಿರೀಕ್ಷಿಸುವುದು ಎಷ್ಟೂ ಸಮಂಜಸವಲ್ಲ. ಯಾವ ಕಾರಣದಿಂದಲೋ ಕವಿಯ ಮನಸ್ಸನ್ನು ಸಂಯೋಗ ಶೃಂಗಾರಕ್ಕಿಂತಲೂ ವಿಯೋಗ ಶೃಂಗಾರ ಹೆಚ್ಚು ಆಕರ್ಷಿಸಿರಬೇಕು.

ಲೋಕ ನಿರೀಕ್ಷೆಯಿಂದ ಪ್ರಾಪ್ತವಾದ ಅನುಭವ, ಕವಿಯನ್ನು ಇದಕ್ಕೆ ಪ್ರೇರಿಸಿರಬೇಕು. ಈ ವಿಯೋಗ ಶೃಂಗಾರದ ಚಿತ್ರಣದ ಮೊದಲ ಪ್ರಯೋಗ ಬಹುಶಃ ಮೇಘದೂತ. ಅನಂತರ ಕುಮಾರ ಸಂಭವದಲ್ಲಿ ಮನ್ಮಥ ವಿಯೋಗದಿಂದ ವಿಲಪಿಸುವ ರತಿವಿಲಾಸದ ಸಂದರ್ಭದ ಚಿತ್ರಣದಲ್ಲ, ರಘುವಂಶದಲ್ಲಿ ಇಂದುಮತಿಯ ವಿಯೋಗದಿಂದ ತೊಳಲುವ ಅಜವಿಲಾಪದಲ್ಲಿ ಹಾಗೂ ಶಾಕುಂತಲದಲ್ಲಿ ದುಷ್ಯಂತ ಶಕುಂತಲೆಯರ ವಿಯೋಗ ಚಿತ್ರಣವಲ್ಲಿ ಕಾಳಿದಾಸ ಸಿದ್ಧಿಯನ್ನು ಪಡೆದಿದ್ದಾನೆ. ಲೋಕದ ಚೆಲುವಿಕೆಗೆ ಕಣ್ಣಾದ ಕವಿಮನದ ಸುಂದರ ಭಾವಲಹರಿಗಳೆನಿಸಿದ ಈ ಪದ್ಯಗಳಲ್ಲಿ ಕಾಳಿದಾಸನ ಸೌಂದರ್ಯ ಗ್ರಹಿಕೆ, ಪ್ರೇಮಕಲೆ, ದೇಶಪ್ರೇಮ, ಭಗವದ್ ಭಕ್ತಿ ಇವೆಲ್ಲವೂ ಉನ್ನತ ಮಟ್ಟದಲ್ಲಿ ಅಭಿವ್ಯಕ್ತಿಯನ್ನು ಪಡೆದಿವೆ.

೨

ಮೇಘದೂತದ ಅತಿಶಯತೆ ಇರುವುದೆಲ್ಲಾ ಅದರ ವರ್ಣನೆಗಳಲ್ಲಿ. ಸುಮಾರು ಐವತ್ತು ವೃತ್ತಗಳಲ್ಲಿ ರಾಮಗಿರಿಯಿಂದ ಅಲಕಾನಗರಿಗೆ ಇರುವ ಪಯಣದ ಹಾದಿಯನ್ನು ನಿರ್ದೇಶಿಸುತ್ತಾ ಸಾಗುತ್ತಾನೆ. ಮಳೆಗಾಲದ ಮೇಘ ಸಂಚಾರದ ಸಹಜತೆಗೆ ಅನುವಾಗುವಂತೆ ಬೆಟ್ಟ, ನದಿ, ನಗರಗಳನ್ನು ಅನನ್ಯವಾಗಿ ವರ್ಣಿಸುತ್ತಾ ಸಾಗುವ ಯಕ್ಷನ ಈ ಭಾವ ಮುಕ್ತಕಗಳು ಒಂದೊಂದೂ 'ಸವಿನುಡಿಚಿತ್ರಾರಗಳು'. ರಾಮಗಿರಿ, ಮಾಳದೇಶ, ಆಮ್ರಕೂಟ ಪರ್ವತ, ರೇವಾನದಿ, ದಶಾರ್ಣದೇಶ,

ವಿದಿಶಾನಗರ, ವೇತ್ರವತೀನದಿ, ನೀಚೈಃಗಿರಿ, ಉಜ್ಜೈನೀ ನಗರ, ಗಂಭೀರಾ ನದಿ, ದೇವಗಿರಿ ಪರ್ವತ, ಚರ್ಮಣ್ವತೀ ನದಿ, ಬ್ರಹ್ಮಾವರ್ತ, ಕುರುಕ್ಷೇತ್ರ, ಸರಸ್ವತಿ ನದಿ, ಕನಖಲ, ಚರಣನ್ಯಾಸ, ಕ್ರೌಂಚರಂಧ್ರ, ಕೈಲಾಸ ಪರ್ವತ, ಮಾನಸ ಸರೋವರ ಮತ್ತು ಅಲಕಾನಗರಿ- ಹೀಗೆ ಸಾಗುತ್ತದೆ ಮೇಘದ ಪಯಣದ ಹಾದಿ, ಈ ಸುದೀರ್ಘ ಯಾತ್ರೆಯಲ್ಲಿ ಮೇಘವು ವಿಶ್ರಮಿಸಿಕೊಳ್ಳಬೇಕಾದ ಜಾಗಗಳಾವುವು, ಮಳೆಗರೆಯಬೇಕಾದ್ದೆಲ್ಲಿ, ನದಿಗಳ ಜಲಹೀರಿ ಎಲ್ಲಿ ಪೋಷಣೆ ಪಡೆಯಬೇಕು, ಎಲ್ಲೆಲ್ಲಿ ಸುಂದರ ದೃಶ್ಯ ವೀಕ್ಷಿಸಬೇಕು, ಎಂತೆಲ್ಲ ವರ್ತಿಸಬೇಕು ಎಂಬೆಲ್ಲ ಸಂಗತಿಗಳನ್ನು ಅತ್ಯಂತ ಆತ್ಮೀಯವಾಗಿ ತಿಳಿಸಿಕೊಡುತ್ತಾನೆ. ಯಕ್ಷನೇ ಇವುಗಳನ್ನೆಲ್ಲಾ ವರ್ಣಿಸುತ್ತಿರುವಂತೆ ಚಿತ್ರಿಸಿರುವುದು ಕೂಡಾ ಕಾವ್ಯದ ಔಚಿತ್ಯದ ದೃಷ್ಟಿಯಿಂದ ಅತ್ಯಂತ ಯುಕ್ತವಾಗಿದೆ. ಇನ್ನುಳಿದ ಸುಮಾರು ಐವತ್ತು ವೃತ್ತಗಳಲ್ಲಿ ಅಲಕಾನಗರ, ಅಲ್ಲಿಯ ಯಕ್ಷರ ಭೋಗ ವಿಲಾಸಗಳು ಮತ್ತು ತನ್ನ ಪ್ರಿಯೆಯ ವಿರಹಾವಸ್ಥೆ – ಇವುಗಳನ್ನು ವರ್ಣಿಸಿದ್ದಾನೆ.

ಕಾವ್ಯದಲ್ಲಿ ಅತ್ಯಂತ ಉತ್ಕಟವಾಗಿ ಚಿತ್ರಿತವಾಗಿರುವ ಭಾವ ಪ್ರೇಮ. ದೃಷ್ಟಿಯಂತೆ ಸೃಷ್ಟಿ. 'ಕಾಮಿ ಸ್ವತಾಂ ಪಶ್ಯತಿ' (ಕಾಮಿ ತನ್ನನ್ನೇ ಕಾಣುತ್ತಾನೆ) ಎಂಬುದು ಶಾಕುಂತಲದಲ್ಲಿ ಬರುವ ಒಂದು ಮಾತು. ಪ್ರಿಯೆಯ ವಿರಹದುರಿಯಲ್ಲಿ ಬೇಯುತ್ತಿರುವ ಕಾರಣದಿಂದಾಗಿ ಬಲದೋಳ ಬಳೆಗಳಚಿ ಹೋಗುವಷ್ಟು ಕೃಶನಾಗಿರುವ ಯಕ್ಷನಿಗೆ ಪ್ರಕೃತಿಯ ಎಲ್ಲ ದೃಶ್ಯಗಳಲ್ಲೂ ಅದೇಪ್ರೇಮದ ವ್ಯಾಪಾರವೇ ಪ್ರಣಯಿಗಳ ಅನುಭವದ ರೂಪದಲ್ಲಿ ಕಂಡುಬರುತ್ತದೆ.

ಆಮ್ರಕೂಟ ಪರ್ವತದ ಸಾನು ಪ್ರದೇಶವೆಲ್ಲ ಪಕ್ವಫಲಗಳಿಂದ ಕೂಡಿರುವ ಕಾಡು ಮಾವಿನ ಮರಗಳಿಂದ ಇಡಿಕಿರಿದಿದೆ. ಇಂಥ ಆಮ್ರಕೂಟದ ಶಿಖರದ ಮೇಲೆ ನುಣುಪಾದ ಜಡೆಯ ಹಾಗಿರುವ ಮೋಡ ಕುಳಿತರೆ, ಅದು ಅಮರ ಮಿಥುನಗಳ ಕಣ್ಣಿಗೆ, ಸುತ್ತಲೂ ಪಾಂಡುವರ್ಣವಾಗಿ ಮಧ್ಯೆ ಮಾತ್ರ ಕಪ್ಪಗಿರುವ ಭೂದೇವಿಯ ಸ್ತನದಂತೆ ತೋರುತ್ತಿತ್ತಂತೆ.

ಸಿದ್ಧರಿಗೆ ಮೇಘದ ಮೇಲೆ ಎಲ್ಲಿಲ್ಲದ ಅಭಿಮಾನ. ಕಾರಣ ಮೇಘದ ಮೊಳಗನ್ನು ಕೇಳಿ ಉದ್ವಿಗ್ನಗೊಂಡ ಸಿದ್ಧರಮಣಿಯರು ಕೂಡಲೇ ಸಂಭ್ರಮದಿಂದ ಪಕ್ಕದಲ್ಲಿರುವ ತಮ್ಮ ಗಂಡಂದಿರನ್ನು ತಬ್ಬಿಕೊಳ್ಳುತ್ತಾರೆ.

ವಿದಿಶಾ ನಗರದಲ್ಲಿ ವೇತ್ರವತೀ ನದಿ ಹರಿಯುತ್ತಿದೆ. ಅದರ ಕೊಂಕಿದಲೆಗಳು ಯುವತಿಯರ ಕೊಂಕುಹುಬ್ಬಿನ ರೀತಿ ಇವೆ. ಅದರ ದಡದಲ್ಲಿ ವಾತಾಡಿಸುವಂತೆ ನಸುಬಾಗಿ ನಿಂತು ಮಧುರ ಸೀತ್ಕಾರದೊಂದಿಗೆ ಅವರ ರುಚಿರ ಜಲಪಾನ ಮಾಡುವ ಮೇಘ ಸವಿಯುವುದು ಕಾಮುಕತ್ವದ ಸೌಖ್ಯಸಾರವಾದ ಅಧರಾಮೃತವನ್ನು.

ಅಲ್ಲೇ ಉಜ್ಜೈನಿಯ ಹತ್ತಿರ ಇರುವ ನೀಚೈರ್ ಗಿರಿಯ ಮೇಲೆ ಮೇಘ ವಿಶ್ರಾಂತಿಗಾಗಿ ನಿಲ್ಲಬೇಕು. ಮೇಘ ಸಂಪರ್ಕದಿಂದ ಗಿರಿಯು ಪುಲಕಿತಗೊಂಡಿತೋ ಎಂಬಂತೆ ಗಿರಿಯ ಮೇಲಿನ ಕದಂಬ ವೃಕ್ಷಗಳೆಲ್ಲಾ ಪುಷ್ಪಭರಿತವಾಗುತ್ತದೆ. ವಿದಿಶಾ ನಗರದ ಪುಣ್ಯ ಸ್ತ್ರೀಯರ ರತಿಸುಖಾವೋದದ ಪರಿಮಳವನ್ನು ಬೀರುತ್ತಿರುವ ಅದೇ ಗಿರಿಕಂದರಗಳು ನಗರದ ಯುವಕರ ಯೌವನದ ಅಗಡುತನವನ್ನು ಪ್ರಕಟಿಸುತ್ತಿವೆ ಯಂತೆ.

ಅಲ್ಲಿ ನಿರ್ವಿಂಧ್ಯಾ ನದಿ ಇದೆ. ನೀರಿನ ಅಲೆಗಳ ಮೇಲೆ ಸಾಲಾಗಿ ಕುಳಿತು ಕಲಕಲ ನಿನಾದ ಮಾಡುವ ಹಕ್ಕಿಗಳ ಒಡ್ಯಾಣ, ಸುಳಿನಾಭಿ, ಅಂಕುಡೊಂಕಾದ ಹರಿವಿನ ಒಯ್ಯಾರದ ನಡಿಗೆಯಿಂದ ಕೂಡಿ ಕಾಮಿನಿಯಂತೆ ತೋರುವ ಆ ನದಿಯಲ್ಲಿ ನೀರನ್ನು ಸುರಿಸಿ ಸಮರಸನಾಗಬೇಕು ಮೇಘ. ಕಾರಣ ಪ್ರಿಯರಲ್ಲಿ ಸ್ತ್ರೀಯರು ತೋರುವ ಒನಪು ಒಯ್ಯಾರಗಳೆ ಪ್ರಣಯ ವಚನವಿದ್ದಂತೆ—

ಅಲೆಗಳುಲ್ಲೋಲದಲಿ ಕಲರವಂಗೈಯುತಿಹ
    ಹಕ್ಕಿಗಳ ಸಾಲಿನೊಡ್ಯಾಣದಿಂದೆ
ಘುಮುಘುಮುಕಿ ಹರಿವಂದು ಸುಭಗಮೆನೆ ತೋರುತಿಹ
    ಆವರ್ತವೆನ್ನುವ ಸುಳಿನಾಭಿಯಿಂದೆ
ಮೆರೆವ ನಿರ್ವಿಂಧ್ಯೆಯನು ಬಳಿಸಾರ್ದು ಸಂತಸದೆ
    ಅಲ್ಲಿ ರಸಲೋಲನೆ ಸುಖಿಸು ಸಖನೆ
ವನಿತೆಯರಿಗಿನಿಯರೊಳು ಒಲವ ಬೇಡುವುದರಲಿ
    ವಿಲಸನವೆ ತಾನಲ್ತೆ ಮೊದಲ ನುಡಿಯು.

ಆ ನಿರ್ವಿಂಧ್ಯಾ ನದಿಯಾದರೋ ಏಕವೇಣೀಧಾರಿಣಿಯಾದ ವಿರಹಿಣಿಯಂತೆ ತೀರಾ ತೆಳುನೀರಿನಿಂದ ಕೂಡಿ ಕೃಶಳಾಗಿದ್ದಾಳೆ. ಬಹುಕಾಲದ ನಂತರ ಸಂಧಿಸುವ ಮೇಘ ಅವಳನ್ನು ಸಂವರ್ಧಿಸಬೇಕಂತೆ.

ಆವಂತಿ ನಗರದಲ್ಲಿ ಶಿಪ್ರಾ ನದಿ ಹರಿಯುತ್ತಿದೆ. ಅದರ ಮೇಲಿನಿಂದ ಬೀಸಿದ ಸಮೀರ, ಕಮಲ ಸೌರಭದಿಂದ ಕೂಡಿ ಸುರತದಿಂದ ಬಳಲಿದ ವಿಲಾಸಿನಿಯರ ಗ್ಲಾನಿಯನ್ನು ಪರಿಹರಿಸುತ್ತದಂತೆ.

ಅಲ್ಲಿ ಶಿಪ್ರಾನದಿಯ ಮೇಲೆ ಬೀಸುವ ಗಾಳಿ
    ಉದಯ ಕಾಲದೊಳುಲಿವ ಸಾರಸಗಳ
ಮದಕಲದ ಕೂಜಿತವ ನಿಡಿದಾಗಿ ಬೆಳೆಯಿಸುತೆ
    ಬಿರಿದ ತಾವರೆಯ ದಳ ಕಂಪನಾಂತು.
ಭೋಗದಭಿಲಾಷೆಯಲಿ ಚಾಟು ವಚನವ ನುಡಿದು
    ಕಾಮಿನಿಯ ಸಂತವಿಸುವಿನಿಯನಂತೆ
ಅಂಗನೆಯರೊಡಲಿಗನುಕಪಲಭಾವದಿ ಸುಳಿದು
    ಬೇಟದಾಯಾಸವನು ನೀಗಲಿಹುದು.

(ಪ್ರೊ. ಎಸ್. ವಿ. ಪರಮೇಶ್ವರಭಟ್ಟರ ಕನ್ನಡ ಅನುವಾದ)

ಹಾಗೆಯೇ ಗಂಭೀರಾನದಿ ಒಂದು ಹೆಣ್ಣು. ಅದರಲ್ಲಿ ಹರಿವ ನೀರು ಆಕೆ ಉಟ್ಟ ನೀಲವಸನ. ದಡದಲ್ಲಿರುವ ವಾನೀರ ಶಾಖೆಗಳು ಅದನ್ನು ಹಿಡಿದಿರುವ ಕೈ. ಬೇಸಗೆಯಿಂದಾಗಿ ದಡದಿಂದ ಸರಿದ ನೀರು ನಿತಂಬದಿಂದ ಜಾರಿದ ವಸನದಂತಿದೆ. "ಅನುಭವಿಯಾದ ಮೇಘನ ಈ ದೃಶ್ಯ ನಿನ್ನನ್ನು ತಡೆದು ನಿಲ್ಲಿಸೀತು. ವಸನ, ನಿತಂಬದಿಂದ ಜಾರಿದಂಥ ಸುವರ್ಣಾವಕಾಶವನ್ನು ಯಾವ ಅನುಭವಿ ರಸಿಕ ತಾನೆ ಕಳೆದುಕೊಳ್ಳುತ್ತಾನೆ"—ಎಂದು ಹೇಳುತ್ತಾನೆ.

ತಟ ನಿತಂಬವದಿನಿತು ತೆರೆದು ತೋರುವ ತೆರದಿ
ವಾನೀರ ಶಾಖೆಗಳ ಕರಗಳಿಂದೆ
ನಸುವೆತ್ತಿ ಹಿಡಿದಿರುವ ನೀಲ ಬಣ್ಣದಿನೆಸೆವ
ಆ ನದಿಯ ನೀರುಡೆಯನಿರದೆ ಸೆಳೆದು
ಮೇಲೆ ನೀನಾಗಸದೆ ಜಗುಳಿ ಕೆಳಗಿಳಿಯುತಿರೆ
ಪಯಣ ಸಮನಿಪುದೆಂತು ನಿನಗೆ ಸಖನೆ !
ರುಚಿಯನರಿತಿಹ ರಸಿಕನಾವನೀ ಲೋಕದಲಿ
ವಿವೃತ ಜಘನೆಯನೆಂತು ತೊರೆಯಲಹನೊ !

ಅಸಹನೀಯವಾದ ವಿರಹವನ್ನನುಭವಿಸಿದ ಯಕ್ಷನಿಗೆ ಇಡೀ ಲೋಕದೆಲ್ಲೆಡೆಯಲ್ಲೂ ಪ್ರಣಯಿಗಳ ಸುರತ ಲೀಲೆಯೇ ಕಂಡರೆ, ಲೋಕವೆಲ್ಲ ತನ್ನಂತೆಯೇ ಎಂದೆನಿಸಿದ್ದರೆ ಅದರಲ್ಲಿ ಆಶ್ಚರ್ಯವೇನು ?

ಇಷ್ಟೆಲ್ಲ ವಿರಹದಲ್ಲಿ ಪಾಡಳಿದಿರುವ ಯಕ್ಷನ ಮನ ನೈರಾಶ್ಯವನ್ನಪ್ಪದೆ, ಲೋಕ ಕಾರುಣ್ಯ ದೃಷ್ಟಿಯಲ್ಲಿ ಮಾಗಿರುವುದೇ ಕಾಳಿದಾಸನ ಕಾವ್ಯ ಪ್ರೌಢಿಮೆಗೆ ಸಾಕ್ಷಿ. ತನಗಂತೂ ಪ್ರಿಯೆಯ ಅಗಲಿಕೆಯಾಯಿತು. ಪ್ರಿಯೆಯ ವಿರಹದುರಿಯಲ್ಲಿ ಬೇಯುವಂತಾಯಿತು. ಅದು ಲೋಕದಲ್ಲಿ ಇನ್ನಾರಿಗೂ ಆಗದಿರಲಿ ಎಂಬಂಥ ಲೋಕ ಕಾರುಣ್ಯ ಭಾವ ಉದಿಸುತ್ತದೆ. ಇದು ನಿಜಕ್ಕೂ ಕಾವ್ಯದ ಆತ್ಮಾತ್ಮಕ ಬೆಳವಣಿಗೆ.

"ಮಹಾಕಾಲೇಶ್ವರನನ್ನು ಅರ್ಚಿಸಿ ಅಲ್ಲಿಂದ ಹಿಂತಿರುಗುವಾಗ ರಾತ್ರಿ ಪ್ರಿಯರ ವಸತಿಗೆ ಹೊರಟಿರುವ ವಿಶಾಲಾನಗರದ ರಮಣಿಯರು ಎದುರಾಗುತ್ತಾರೆ. ಅವರಿಗೆ ಒರೆಗಲ್ಲಿನ ಮೇಲೆಳೆವ ಬಂಗಾರದ ರೇಖೆಯಂತೆ ಹೊಳೆವ ಮಿಂಚು ಬೆಳಕನು ತೋರಿ ಮಾರ್ಗ ತಿಳಿಯುವಂತೆ ಮಾಡು. ಗುಡುಗು-ಮಳೆಯ ಅಬ್ಬರದಿಂದ ಗಲಭೆ ಮಾಡಿ ಅವರನ್ನು ಬೆದರಿಸಬೇಡ"–ಎಂದು ಹೇಳುತ್ತಾನೆ.

"ರಾತ್ರಿ ಕಾಲದಲ್ಲಿ ಪ್ರೇಮಿಗಳಿಗೆ ಹೀಗೆ ಆಪದ್ಬಂಧುವಾದರೆ, ಹಗಲಿನಲ್ಲಿ ಕಮಲಗಳಿಗೆ ಸಮಾಧಾನ ಹೇಳುತ್ತಿರುವ ಸೂರ್ಯನಿಗೆ ಅಡ್ಡ ಬರಬೇಡ"–ಎಂದು ಕೇಳಿಕೊಳ್ಳುತ್ತಾನೆ. ಮೇಲಾಗಿ ಸೂರ್ಯೋದಯದ ಸಮಯದಲ್ಲೇ ಕಾಮಿ ಜನರು ಹಿಂತಿರುಗಿ, ಮುನಿದಿರುವ ತಮ್ಮ ಮಡದಿಯರ ಕಂಬನಿಯನ್ನು ತೊಡೆದು ಸಮಾಧಾನ

ಮಾಡುವ ಸಮಯ. ಆದ್ದರಿಂದ ಸೂರ್ಯನಿಗೆ ಅಡ್ಡಬರಬೇಡ"–ಎಂದು ಕೇಳಿಕೊಳ್ಳು ತ್ತಾನೆ. ಇಂಥ ಸಾನುಕ್ರೋಶಪರ ಹೃದಯವುಳ್ಳ ಯಕ್ಷ ಕೊನೆಗೆ ಮೇಘಕ್ಕೆ ಹಾರೈ ಸುವುದು ಕೂಡಾ ತನ್ನ ಪ್ರೇಯಸಿಯಾದ ಮಿಂಚಿನಿಂದ ಎಂದೂ ಅಗಲಿಕೆ ಉಂಟಾಗ ದಿರಲಿ ಎಂದು.

ಉತ್ತರ ಮೇಘದಲ್ಲಿ ಕುಬೇರನ ಅಲಕಾನಗರಿಯ ಯಕ್ಷರ ವೈಭೋಗ ವಿಲಾಸ ಗಳಾಗಲಿ, ಯಕ್ಷಪತ್ನಿಯ ವಿರಹಾವಸ್ಥೆಯಾಗಲಿ ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಗಿವೆ,

ಅಲ್ಲಿಯ ಯಕ್ಷರ ವೈಭವವನ್ನೇನು ಹೇಳುವುದು! ಅವರು ಆನಂದಕ್ಕಲ್ಲದೆ ಬೇರೆ ಕಣ್ಣೀರು ಸುರಿಸಿ ಅರಿಯರು. ಅಲ್ಲಿರುವುದು ಒಂದೇ ತಾಪ. ಅದು ಮದನ ತಾಪ. ಅದು ಇಷ್ಟ ಜನರ ಸಂಯೋಗದಿಂದ ಪರಿಹಾರವಾಗಬಹುದಾದ್ದು. ಪ್ರಣಯ ಕೋಪದಿಂದ ಪ್ರಿಯ ಪ್ರಿಯೆಯರು ಒಬ್ಬರನ್ನೊಬ್ಬರು ಅಗಲಬಹುದೇ ವಿನಾ ಮರಣ ದಿಂದ ಬರುವಂಥ ಶಾಶ್ವತ ಅಗಲಿಕೆ ಇಲ್ಲ. ಮುಪ್ಪಿಲ್ಲದ ನಿತ್ಯ ಯೌವನಿಗರೆ ಅವರೆಲ್ಲ. ಅವರ ಉತ್ಕಟ ಪ್ರಣಯದ ಒಂದು ಚಿತ್ರ ಹೀಗಿದೆ—

ತೊಂಡೆಹಣ್ಣಿನ ತುಟಿಯ ಪ್ರಿಯತಮೆಯರುಟ್ಟಿರುವ,
ರೇಸಿಮೆಯ ಸೀರೆಯನು ಸೆಳೆಯಲೆಂದು
ನೀವಿಯನು ಸಡಿಲಿಸುತೆ ರಾಗದಿಂ ಪ್ರಿಯರದನು
ಕಂಪಿಸುವ ಕೈಗಳಿಂದೆಳೆಯುವಂದು
ತುಂಗ ಕಿರಣವನೆಸೆದು ತಮ್ಮೆದುರೆ ತೊಳಗುತಿಹ
ರತ್ನಮಣಿ ದೀಪಗಳ ಕಿಡಿಸಲೆಂದು
ಹೇವದಿಂದಂಗನೆಯರೆರಚುತಿರೆ ಕುಂಕುಮವ
ವಿಫಲವಾಗುವುದವರ ಹಿಡಿಯ ಹುಡಿಯು."

(ಎಸ್. ವಿ. ಪರಮೇಶ್ವರಭಟ್ಟರ ಅನುವಾದ)

ಯಕ್ಷ ತನ್ನ ಪತ್ನಿಯನ್ನು ವರ್ಣಿಸುವ ಮಾತುಗಳು ತೀರಾ ಕವಿ ಸಮಯಬದ್ಧವಾದುವು ಎನಿಸಿದರೂ, ಅಲ್ಲೂ ಅವನ ಚಿತ್ರಕ ಶಕ್ತಿ ಎದ್ದು ಕಾಣುತ್ತದೆ—ಅದನ್ನು ಕಾಳಿದಾಸನ ಮಾತುಗಳಲ್ಲೇ ನೋಡಬಹುದು—

ತನ್ವೀ ಶ್ಯಾಮಾ ಶಿಖರಿದಶನಾ ಪಕ್ವ ಬಿಂಬಾಧರೋಷ್ಠೀ
ಮಧ್ಯೇ ಕ್ಷಾಮಾ ಚಕಿತ ಹರಿಣೀ ಪ್ರೇಕ್ಷಣಾ ನಿಮ್ನ ನಾಭಿಃ
ಶ್ರೋಣೀ ಭಾರಾದಲಸಗಮನಾಸ್ತೋಕನಮ್ರಾಸ್ತನಾಭ್ಯಾಂ
ಯಾತ ತ್ರಾಸ್ತೆ ಯುವತಿ ವಿಷಯೇ ಸೃಷ್ಟಿರಾದ್ಯೇವ ಧಾತುಃ

ಯಕ್ಷಪತ್ನಿಯ ವಿರಹದ ಚಿತ್ರಣದಲ್ಲಿ ವಿಪ್ರಲಂಭ ಶೃಂಗಾರದ ನಾಯಿಕೆಯ ಸರ್ವ ಅವಸ್ಥೆಗಳೂ ಮೂರ್ತಿಮತ್ತಾಗಿವೆ. ತನ್ನ ನಲ್ಲನಿಂದ ಅಗಲಿರುವುದರಿಂದ ಆಕೆ ಒಂಟಿ ಯಾದ ಚಕ್ರವಾಕಿಯಂತೆ ಮಿತಭಾಷಿಣಿ, ಶಿಶಿರದಿಂದ ಪೀಡಿತವಾದ ಕಮಲದಂತೆ ತನ್ನ ಎಂದಿನ ಸೌಂದರ್ಯದಿಂದ ಶೋಭಿಸುತ್ತಿಲ್ಲ. ಅತ್ತು ಅತ್ತು ಅವಳ ಕಣ್ಣುಗಳು

ಊದಿ ಕೆಂಪಾಗಿರುತ್ತವೆ, ನಿಟ್ಟುಸಿರಿನ ಬೇಗೆಯಿಂದ ಬಣ್ಣಗೆಟ್ಟ ತುಟಿಗಳಿಂದ ಕೂಡಿರುವ ಅವಳು ಮುಖದ ಮೇಲೆ ಇಳಿಬಿದ್ದ ಕೂದಲುಗಳನ್ನು ಬೊಗಸೆ ಕೈಗಳಿಂದ ಮುಚ್ಚಿಕೊಂಡಿರುವುದರಿಂದ ಅವಳ ಮುಖ, ಮೋಡದ ಮರೆಯಲ್ಲಿ ಅಡಗಿದ ಚಂದ್ರ ನಂತಿರುತ್ತದೆ.

ಇವಳ ವಿರಹಾವಸ್ಥೆ ಎಂಥ ವಿಷಮಾವಸ್ಥೆಯನ್ನು ತಲುಪಿರುತ್ತವೆಂದು, ಅವಳ ಹೃದಯದಾಳದ ಪ್ರೇಮವನ್ನು ಅರಿತ ಅವಳ ಮನದನ್ನ ಯಕ್ಷ ಮೇಘಕ್ಕೆ ಆ ಬಗ್ಗೆ ಮುಂಚೆಯೇ ಕಣಿ ನುಡಿಯುತ್ತಾನೆ. ಕವಿಯ ಮೂಲ ಮಾತುಗಳಲ್ಲೇ ಅದನ್ನು ಕೇಳಬಹುದು—

ಉತ್ಸಂಗೇ ವಾ ಮಲಿನ ವಸನೇ ಸೌಮ್ಯ ನಿಕ್ಷಿಪ್ಯವೀಣಾಂ
ಮದ್ಗೋತ್ರಾಂಕಂ ವಿರಚಿತಪದಂ ಗೇಯಮುದ್ಗಾತುಕಾಮಾ
ತಂತ್ರೀ ಮಾರ್ದ್ರಾಂ ನಯನಸಲಿಲೈಸ್ಸಾರಯಿತ್ವಾ ಕಥಂ ಚಿತ್
ಭೂಯೋ ಭೂಯಸ್ಸ್ವಯಮಪಿ ಕೃತಾಂ ಮೂರ್ಛನಾಂ ವಿಸ್ಮರಂತೀ

"ಮಲಿನ ವಸನವನ್ನು ಧರಿಸಿದ ತೊಡೆಯ ಮೇಲೆ ವೀಣೆಯನ್ನಿಟ್ಟುಕೊಂಡು, ನನ್ನನ್ನು ಕುರಿತ ಗೀತವೊಂದನ್ನು ನುಡಿಸುತ್ತಾ ನನ್ನ ನೆನಪಿನಿಂದಾಗಿ ಕಣ್ಣೀರು ಸುರಿದು, ತಂತಿ ತೊಯ್ದು ಹೋಗಿ, ನಾದ ಸರಿಯಾಗಿ ಹೊರಡದಾಗ ಹೇಗೋ ಅದನ್ನು ಸರಿಮಾಡಿಕೊಂಡು ಶ್ರುತಿಗೊಳಿಸಿ ಮಿಡಿಯುವಾಗ ತಾನೇ ರಚಿಸಿದ ಗೀತವಾದರೂ ಮತ್ತೆ ಮತ್ತೆ ಅದನ್ನು ಮರೆಯುತ್ತಾಳೆ" ವಿರಹಿಣಿಯ ಈ ವ್ಯಕ್ತಿಚಿತ್ರ ಅತ್ಯಂತ ಮೂರ್ತಿಮತ್ತಾಗಿದೆ.

ಅವನಿಗೆ ಅವಳ ಮೇಲಿರುವ ಕರುಣಾಪೂರ್ಣವಾದ ಪ್ರೇಮ ಎಷ್ಟೆಂದರೆ ಮೇಘ ಹೋದಾಗ, ಅವಳೇನಾದರೂ ನಿದ್ರೆಯಲ್ಲಿದ್ದರೆ, ಅವಳನ್ನು ಆಗಲೇ ಎಬ್ಬಿಸಕೂಡದು. ಕಾರಣ ಸ್ವಪ್ನದಲ್ಲಿ ಅವಳು ತನ್ನನ್ನು ಆಲಿಂಗಿಸಿಕೊಂಡ ಅನುಭವದಲ್ಲಿರಬಹುದು. ಎಬ್ಬಿಸಿದರೆ ಆಲಿಂಗನದ ಆ ಸ್ಥಿತಿ ಕೊನೆಗಂಡೀತು !

ಮೇಘಕ್ಕೆ ಅವನು ನೀಡುವ ಸಂದೇಶವಾದರೂ ಇಡೀ ವಿಶ್ವಸಾಹಿತ್ಯದಲ್ಲೇ ಅತ್ಯಂತ ಆರ್ದ್ರವಾದ, ಪ್ರೇಮಲವಾದ, ಒಲವಿನ ತಂತಿಯನ್ನೇ ಮಿಡಿದಂತಿರುವ ಸಂದೇಶ. ಅದರಲ್ಲಿ ನಮಗೆ ಕಾಣಸಿಗುವುದೂ ಯಕ್ಷಯಕ್ಷಿಯರ ಉತ್ಕಟ ಪ್ರೇಮದ ಚಿತ್ರಗಳೇ. ಮೇಘದ ಮೂಲಕ ಕಳಿಸಿರುವ ಸಂದೇಶ ಸಂಗಮದ ಸುಖಕ್ಕಿಂತ ಕಿಂಚಿದೂನ" ಅಷ್ಟೆ. ಸಖಿಯರ ಮಧ್ಯೆ ನೀನಿರುವಾಗ, ನಿನ್ನ ಮುಖಕ್ಕೆ ಮುತ್ತಿಡು ವಾಸೆಯಿಂದ. ಎಲ್ಲರೂ ಕೇಳುವಂತೆ ಹೇಳಬಹುದಾದ ಮಾತಾದರೂ, ನಿನ್ನ ಕಿವಿಯಲ್ಲಿ

ಹೇಳಲು ಇಚ್ಛಿಸುತ್ತಿದ್ದ ನಿನ್ನನಿಯು, ಈಗ ದೂರ ದೇಶದಲ್ಲಿ ಕಣ್ಣು, ಕಿವಿಗಳಿಂದ ದೂರನಾಗಿರುವುದರಿಂದ, ನನ್ನ ಮೂಲಕ ಸಂದೇಶ ಕಳುಹಿಸುತ್ತಿದ್ದಾನೆ—" ಎಂದು ಪೀಠಿಕೆ ಹಾಕಿ ಸಂದೇಶವನ್ನು ಹೇಳಬೇಕಂತೆ.

ತನ್ನ ಪತ್ನಿ ಲೋಕೋತ್ತರ ಸುಂದರಿ ಎಂಬುದನ್ನು ಯಕ್ಷ ಹೇಳುವುದು ಹೀಗೆ—

"ಶ್ಯಾಮಾಲತಾವಳಿಯೊಳಂಗದೊಂದಂದವನು
ಮೊಗದೊಂದು ಕಾಂತಿಯನು ಚಂದಿರನೊಳು
ಚಕಿತ ಹರಿಣಿಯಾಲೋಕನದೆ ನೋಟವನು
ತೆಳ್ಳೊಳೆಯ ಅಲೆಗಳಲಿ ಹುಬ್ಬಿನೊಲವ
ಶಿಖಿಕಲಾಪಂಗಳಲಿ ಕುರುಳ ಸೌಂದರ್ಯವನು
ನೋಡಿ ನಿನ್ನಂವವನು ಪರಿಭಾವಿಸಿ
ಒಂದೆಡೆಯೊಳಾದರೂ ನಿನ್ನ ಸಾದೃಶ್ಯವನು
ಕಾಣದೆಯೆ ಕೊರಗುತಿಹೆನೆಲೆ ಚಂಡಿಯೇ"

ಪ್ರಕೃತಿಯ ಒಂದೊಂದರಲ್ಲೂ ಕಂಡದ್ದು ಕೇವಲ ಅವಳ ಆಂಶಿಕ ಸೌಂದರ್ಯವನ್ನು. ಒಟ್ಟಾರೆ ಅವಳನ್ನು ಹೋಲುವಂಥದು ಎಲ್ಲೂ ಅವನಿಗೆ ಕಂಡಿಲ್ಲ.

"ಗಿರಿಯ ಶಿಲೆಗಳ ಮೇಲೆ ಧಾತು ರಾಗಗಳಿಂದ ಪ್ರಣಯ ಕುಪಿತಳ ಹಾಗೆ ಅವಳ ಚಿತ್ರಬರೆದು, ಅದರ ಪದತಲದಲ್ಲಿ ಬಿದ್ದಹಾಗೆ ತನ್ನನ್ನು ಚಿತ್ರಿಸಿಕೊಳ್ಳಲು ಇಚ್ಛಿಸುತ್ತಾನೆ. ಆದರೆ ಹಾಗೆ ಆಶಿಸಿದ ಮರುಕ್ಷಣದಲ್ಲೆ ಕಣ್ಣಲ್ಲಿ ನೀರು ತುಂಬಿಕೊಂಡು ನೋಟ ಮಸುಳುತ್ತದೆ. ಕ್ರೂರ ವಿಧಿ ಚಿತ್ರದಲ್ಲಾದರೂ ನಾವು ಒಂದಾಗುವುದನ್ನು ಸಹಿಸನು."

"ಸ್ವಪ್ನ ಸಂದರ್ಶನದಲ್ಲಿ ಹೇಗೋ ಏನೋ ನಿನ್ನನ್ನು ಬಿಗಿದಪ್ಪಿಕೊಳ್ಳಬೇಕೆಂಬ ಆಸೆಯಿಂದ, ಉದ್ವೇಗವಶನಾಗಿ ತೋಳು ಚಾಚುವುದನ್ನು ಮತ್ತೆ ಮತ್ತೆ ನೋಡಿ ಮರುಗದಿರುವ ವನದೇವತೆಗಳೇ ಇಲ್ಲ!"

ಇಷ್ಟೆಲ್ಲ ತನ್ನ ವಿರಹವೇದನೆಯ ದಾರುಣತೆಯನ್ನು ವರ್ಣಿಸಿ ಕೊನೆಗೆ ಹೇಳುತ್ತಾನೆ—"ನಾನು ಹೇಗೋ ಜೀವ ಬಗಿ ಹಿಡಿದಿರುವೆ. ನೀನು ಕೂಡಾ ಹಾಗೆಯೇ ನನ್ನ ವಿಕಲಾವಸ್ಥೆಯನ್ನು ಕೇಳಿ ಆತಂಕಗೊಳ್ಳಬೇಡ. ಕಾಲವನ್ನು ಹೇಗೋ ಕಳೆ. ಕಷ್ಟ ಯಾರಿಗಿಲ್ಲ? ಅತ್ಯಂತ ಸುಖವಾಗಲಿ, ಅತ್ಯಂತ ದುಃಖವಾಗಲಿ ಯಾರಿಗಿವೆ ಈ ಲೋಕದಲ್ಲಿ? ಸುಖದುಃಖಗಳು ಚಕ್ರದ ಅರೆಕಾಲುಗಳಂತೆ. ಉಳಿದ ನಾಲ್ಕು ತಿಂಗಳನ್ನು ಕಣ್ಮುಚ್ಚಿ ಕಳೆದರೆ, ನಮ್ಮ ಮನಸ್ಸಿನ ಅಭಿಲಾಷೆಗಳನ್ನೆಲ್ಲ ಶರತ್ಕಾಲದ ಬೆಳ್ದಿಂಗಳ ರಮಣೀಯ ರಾತ್ರಿಗಳಲ್ಲಿ ಈಡೇರಿಸಿಕೊಳ್ಳೋಣ."

ಸಂದೇಶವನ್ನು ಕಳಿಸಿದವನು ತಾನೇ ಎಂದು ನಂಬಿಕೆ ಉಂಟು ಮಾಡಲು ತಮ್ಮಿಬ್ಬರಿಗೆ ಮಾತ್ರ ಗೊತ್ತಿರುವ ಒಂದು ಅನುಭವವನ್ನು ಅಭಿಜ್ಞಾನವಾಗಿ ಹೇಳುತ್ತಾನೆ. ಆ ಅಭಿಜ್ಞಾನದ ಮಾತಿನಲ್ಲೂ ಅವರಿಬ್ಬರ ಗಾಢ ಅನುರಾಗವೇ ಅನುರಮಣನಗೊಳ್ಳುತ್ತಿದೆ.

ಒಂದು ಸಲ ನಿದ್ದೆಯಲ್ಲಿ ನನ್ನ ಕೊರಳನ್ನಪ್ಪಿ ಮಲಗಿದ್ದಾಗ ನೀನು ಏಕೋ ಅತ್ತೆ. ಬಹಳ ಸಲ ಒತ್ತಾಯ ಮಾಡಿ ಕೇಳಿದಾಗ ನಕ್ಕು—"ಕಳ್ಳ! ನೀನು ಮತ್ತಾವಳನ್ನೋ ರಮಿಸುತ್ತಿದ್ದಂತೆ ಕನಸು ಕಂಡೆ" ಎಂದು ಹೇಳಿದೆಯಂತೆ.

ಕೊನೆಯ ಮಾತು ಕೂಡಾ ತೀರಾ ಮರ್ಮಸ್ಪರ್ಶಿಯದ್ದು. ಅದೆಂದರೆ— "ವಿರಹ ಕಾಲದಲ್ಲಿ ಪ್ರೇಮ ಕ್ಷೀಣಿಸುತ್ತದೆ ಎನ್ನುತ್ತಾರೆ. ಆದರೆ ಪ್ರಿಯೆ, ಕೇಳು. ನನ್ನಲ್ಲಿ ಅವಿಶ್ವಾಸ ತೋರಬೇಡ. ಇಷ್ಟ ವಸ್ತುವನ್ನು ಅಗಲಿ ಬಂದಾಗ, ಸುಖ ಭೋಗ ಸಂಸ್ಮರಣೆ ಅದರ ವಿಷಯದಲ್ಲಿ ಪ್ರೇಮವನ್ನು ಇನ್ನೂ ವರ್ಧಿಸುತ್ತದೆ".

"ಈ ಬಂಧು ಕಾರ್ಯವನ್ನು ಕೈಕೊಂಡು, ತನ್ನ ಸಂದೇಶವನ್ನು ಅವಳಿಗೆ ಮುಟ್ಟಿಸಿ, ಅವಳ ಪ್ರತ್ಯುತ್ತರವನ್ನು ತನಗೆ ತಲುಪಿಸಬೇಕೆಂದೂ, ತನ್ನ ಪ್ರಾಣ; ಪ್ರಾತಃಕಾಲದಲ್ಲಿ ತೊಟ್ಟು ಕಳಚುತ್ತಿರುವ ಮಲ್ಲಿಗೆಯಂತೆ ಹೇಗೋ ಉಳಿದಿದೆ"–ಎಂಬ ಮಾತಿನೊಂದಿಗೆ ಕಾವ್ಯ ಕೊನೆಯಾಗುತ್ತದೆ.

(2)

ಪ್ರಕೃತಿ ಚಿತ್ರಗಳನ್ನು ಕೊಟ್ಟಂತೆ, ದೇಶ ವೈಶಿಷ್ಟ್ಯ, ವೈಚಿತ್ರ್ಯಗಳನ್ನು ಸ್ಥಳ ವೈಶಿಷ್ಟ್ಯಗಳನ್ನು ಕವಿ ನಮ್ಮ ಮನಃಪಟಲದ ಮೇಲೆ ಅಂಕಿಸುವ ಸೊಗಸು ಅವನಿಗೇ ವಿಶಿಷ್ಟವಾದ್ದು.

ಉದಾಹರಣೆಗೆ ಅಲಕಾನಗರದ ವರ್ಣನೆ ಅಂಥದೊಂದು ಸುಂದರ ಚಿತ್ರ– "ಬಾಹ್ಯೋದ್ಯಾನಸ್ಥಿತ ಹರಶಿರಶ್ಚಂದ್ರಿಕಾಧೌತಹರ್ಮ್ಯಾ"

ಅಲಕಾವತಿಯ ಸೌಧಗಳು ಅದರ ಬಾಹ್ಯೋಧ್ಯಾನದಲ್ಲಿದ್ದ ಹರನಶಿರಸ್ಸಿನ ಚಂದ್ರಿಕೆಯಿಂದ ಬೆಳಗುತ್ತಿದ್ದುವು–ಎಂದು ವರ್ಣಿಸುವಲ್ಲಿ, ವೈರಾಗ್ಯ ಚಕ್ರವರ್ತಿಯಾದ ಶಂಕರನ ನೆರೆಯಲ್ಲೇ ಅವನ ಶಿರಶ್ಚಂದ್ರಿಕೆಯ ಅಡಿಯಲ್ಲೇ ಭೋಗಜೀವಿಗಳಾದ ಯಕ್ಷರ ನೆಲೆಗಳು–ಒಂದು ರೀತಿಯಲ್ಲಿ ವೈರಾಗ್ಯದ ಛತ್ರ ಛಾಯೆಯಲ್ಲಿ, ವೈಭೋಗ ನಿರಾತಂಕವಾಗಿ ನೆಲೆಸಿತ್ತು ಎಂಬ ಸೌಧಗಳು! ಮೊದಲೇ ಬಿಳಿದಾದ ಹರ್ಮ್ಯಗಳು ರಜತಗಿರಿ–ಗೊಡೆಯನಾದ ಹರನ ಶಿರಶ್ಚಂದ್ರಿಕೆಯಿಂದ ತೊಳೆಯಲ್ಪಟ್ಟಂಥ ಸೌಧಗಳು.

ಕೈಲಾಸದ ತಪ್ಪಲಲ್ಲಿ ಈ ಅಲಕಾಪುರಿ ಹೇಗೆ ನೆಲೆಸಿತ್ತು ಎಂಬುದು ಇನ್ನೂ ಉಜ್ವಲವಾದ ಚಿತ್ರ. ಕಾಳಿದಾಸನ ಮಾತುಗಳಲ್ಲೇ ಅದನ್ನು ನೋಡಬಹುದು—

"ತಸ್ಯೋತ್ಸಂಗೇ ಪ್ರಣಯಿನ ಇವಸ್ರಸ್ತ ಗಂಗಾ ದುಕೂಲಾಮ್
ನತ್ವಂ ದೃಷ್ಟ್ವಾನ ಪುನರಲಕಾಮು ಜ್ಞಾಸ್ಯಸೇಕಾಮಚಾರಿನ್
ಯಾವಃ ಕಾಲೇ ವಹತಿ ಸಲಿಲೋದ್ಗಾರ ಮುಚ್ಚೈರ್ವಿಮಾನಾ
ಮುಕ್ತ ಜಾಲ ಗ್ರಥಿತಮಲಕಂ ಕಾಮಿನೀ ವಾಭ್ರಬೃಂದಮ್"

ಗಿರಿರಾಜನಾದ ಕೈಲಾಸ ಪರ್ವತದ ತಪ್ಪಲಿನಲ್ಲಿರುವ ಅಲಕಾನಗರಿ ಪ್ರಿಯನ ತೊಡೆಯಮೇಲೆ ಕುಳಿತಿರುವ ಪ್ರಜಾಯನಿಯಂತಿದೆ. ಅಲ್ಲೇ ಪಕ್ಕದಲ್ಲೇ ಹರಿಯುವ ಗಂಗೆಯಾದರೋ ಆ ಪ್ರಿಯೆಯ ಶರೀರದಿಂದ ಸರಿದುಬಿದ್ದ ಬಿಳಿಯ ವಸ್ತ್ರದಂತಿದೆ. ವರ್ಷಾಕಾಲದಲ್ಲಿ ಬಿಳಿಯ ವಿಮಾನಗಳ ಅಗ್ರಭಾಗದಲ್ಲಿ ಬಿಳಿಯ ನೀರನ್ನು ಸುರಿಸುತ್ತಿರುವ ಕರಿಯ ಮೋಡ, ಸುಂದರಿಯೊಬ್ಬಳು ತೋರಮುತ್ತಿನ ಗೊಂಚಲನ್ನು ತನ್ನ ಮುಂಗುರುಳಲ್ಲಿ ಕಟ್ಟಿಕೊಂಡಂತೆ ಕಾಣುತ್ತದೆ.

ಕಾಳಿದಾಸನಿಗೆ ಉಜ್ಜಯಿನಿ ಎಂದರೆ ಪಂಚಪ್ರಾಣ. ವಿಶೇಷ ಪಕ್ಷಪಾತ ನಮ್ಮ ಪಂಪನಿಗೆ ಬನವಾಸಿ ಇದ್ದಂತೆ. ಅದು ಮೇಘಕ್ಕೆ ಅಲಕಾನಗರದ ದಾರಿಯಲ್ಲಿ ಬರುವಂಥನಗರವಲ್ಲ. ಸ್ವಲ್ಪ ಅಡ್ಡದಾರಿಯಾದರೂ ಅದನ್ನು ತಪ್ಪಿಸಕೂಡದೆಂದು ಹೇಳುತ್ತಾನೆ. ಅದರ ವೈಶಿಷ್ಟ್ಯವನ್ನು, ಒಂದು ಮಾತಿನಲ್ಲಿ ಸೂಚಿಸಿ ಬಿಡುತ್ತಾನೆ. "ಪ್ರಾಪ್ಯವಂತೀನ್ ಉದಯನ ಕಥಾ ರೋವಿದ ಗ್ರಾಮ ವೃದ್ಧಾನ್"–ಎಂಬುದೇ ಆ ಮಾತು. ಅಲ್ಲಿಯ ಹಿರಿಯರು ಉದಯನನ ಕಥೆ ಹೇಳುವುದರಲ್ಲಿ ನಿಷ್ಣಾತರು. ಅದು "ಕಾಂತಿಮತ್ಖಂಡ ಮೇಡಂ"–ಎಂದರೆ ದೇವಲೋಕವನ್ನು ಬಿಡಬೇಕಾಗಿ ಬಂದ ಜೀವಿಗಳು ತಮ್ಮ ಶೇಷ ಪುಣ್ಯವನ್ನು ಅನುಭವಿಸಲು 'ಸ್ವರ್ಗದ ಒಂದು ಖಂಡ'ವನ್ನು ತಂದಂತಿದೆ. ಕಾಳಿದಾಸನ ಒಲುಮೆಯ ಊರು ಅದಾಗಿರಬೇಕು. ಅವನು ಉಜ್ಜಯಿನಿಯ ವಿಕ್ರಮಾದಿತ್ಯನ ಆಸ್ಥಾನ ಕವಿಯಾಗಿದ್ದ ಎಂಬ ಮಾತೂ ಅದಕ್ಕೆ ಪೋಷಕ. ಹೀಗೆ ತನ್ನ ಮಾತೃಭೂಮಿ ಸ್ವರ್ಗಕ್ಕಿಂತ ಒಂದು ಕೈಮಿಗಿಲು ಎಂಬಂತೆ ಬಣ್ಣಿಸುತ್ತಾನೆ, ಉಜ್ಜಯಿನಿಯ ಸಂಪತ್ತೂ ಅಷ್ಟೆ. ಅಲ್ಲಿ ರಾಶಿ ಬಿದ್ದಿರುವ ಮುತ್ತು ರತ್ನ, ಹವಳಗಳನ್ನು ನೋಡಿದರೆ, ರತ್ನಾಕರವೆನಿಸಿದ ಸಾಗರದಲ್ಲಿ ಇನ್ನು ಉಳಿದಿರುವುದು ಕೇವಲ ನೀರು ಮಾತ್ರವೇ.

೪

ಕಾಳಿದಾಸ ತನ್ನ ಉಪಮೆಗಳಿಗೆ ಹೆಸರಾದವನು. ಮೇಘದೂತದಲ್ಲಿ ಸುಂದರವಾದ ಉಪಮೆ, ಉತ್ಪ್ರೇಕ್ಷೆ ಮತ್ತು ಅರ್ಥಾಂತರನ್ಯಾಸಗಳು ತುಂಬ ಸಹಜವಾಗಿ ಬಂದು ಕಾವ್ಯದ ಶೋಭೆಯನ್ನು ಹೆಚ್ಚಿಸಿವೆ. ಅವು ಕವಿಯ ಲೋಕಾನುಭವದ್ಯೋತಕವೂ ಆಗಿವೆ. ಕೆಲವನ್ನು ಮಾತ್ರ ನೋಡಬಹುದು.

ಪರ್ವತದ ತಪ್ಪಲಲ್ಲಿ ಸಂಚರಿಸುತ್ತಿದ್ದ ಮೋಡವನ್ನು ವಪ್ರಕ್ರೀಡೆಯಲ್ಲಿ ಪರಿಣತವಾದ ಗಜಕ್ಕೆ ಹೋಲಿಸಿದ್ದಾನೆ. ಕೈಲಾಸದ ಬಿಳಿಯ ಶಿಖರಗಳು 'ತ್ರ್ಯಂಬಕನ ಅಟ್ಟ ಹಾಸದ ರಾಶಿ' ಯಂತೆ ಇವೆ ಎನ್ನುತ್ತಾನೆ. 'ನಗೆ ಬೆಳ್ಳಗಿದೆ' ಎಂಬುದು ಕವಿ ಸಮಯವೇ ಆದರೂ ಈ ಉಪಮೆ ಅದರ ಭವ್ಯತೆಯಿಂದಾಗಿ ಮನಸೆಳೆಯುತ್ತದೆ.

ಕೈಲಾಸವನ್ನು "ತ್ರಿದಶವನಿತಾದರ್ಪಣ" ಎಂದು ಇನ್ನೊಂದು ಕಡೆ ಹೇಳುತ್ತಾನೆ. ಕೈಲಾಸದ ಉಪತಟದ ಬಣ್ಣ ಆಗ ತಾನೆ ಕಡಿದಿಟ್ಟ ಗಜದಂತದ ಹಾಗೆ ಇದೆ ಎನ್ನುತ್ತಾನೆ. ನುಣ್ಣಗೆ ಅರೆದ ಅಂಜನದ ಹಾಗೆ ಕಪ್ಪಾಗಿರುವ ಮೋಡ ಕೈಲಾಸದ ಉಪತಟವನ್ನೇರಿದಾಗ ಶ್ವೇತ ವರ್ಣದ ಬಲರಾಮನ ಹೆಗಲ ಮೇಲೆ ಶೋಭಿಸುವ ಕರಿಯ ವಸನದಂತೆ ಕಾಣುತ್ತದೆ ಎಂಬುದು ಒಂದು ಸಾರ್ಥಕವಾದ ಉಪಮೆ.

ಮೇಘ, ಸಂದೇಶವನ್ನು ಕೊಂಡೊಯ್ಯುವ ಕಾಲಕ್ಕೆ ಯಕ್ಷ ಪತ್ನಿಯ ಸ್ಥಿತಿ ಹೇಗಿರುತ್ತದೆ. ಎಂಬುದನ್ನು ಸೂಚಿಸುವ ಉಪಮೆ ಹೀಗಿದೆ—ಗವಾಕ್ಷದಿಂದ ಬರುವ ಚಂದ್ರ ಕಿರಣಗಳಿಂದ ಹಿತವಾಗುತ್ತದೆಂದು ಅದನ್ನು ನೋಡ ಹೋದಾಗ, ವಿರಹದ ದೆಸೆಯಿಂದಾಗಿ, ಆ ಚಂದ್ರ ಕಿರಣಗಳು ಆಪ್ಯಾಯಮಾನವಾಗದೆ, ವ್ಯಸನದಿಂದ ಕಣ್ಣು ತಿರುಗಿಸಿದಾಗ ಅವುಗಳಲ್ಲಿ ನೀರು ತುಂಬಿಕೊಳ್ಳುತ್ತದೆ. ಕಣ್ಣೀರ ಭಾರದಿಂದ ತೊಯ್ದ ರೆಪ್ಪೆಗಳನ್ನು ಮುಚ್ಚಿಕೊಳ್ಳುವ ಆಕೆ, ಮೋಡ ಆವರಿಸಿರುವ, ಮಳೆಯ ದಿನದಂದು, ತೆರೆದೂತೆರೆಯದ ಹಾಗಿರುವ ನೆಲತಾವರೆಯ ಹಾಗೆ ಇರುತ್ತಾಳೆ—ಎಂಬುದು ಅವಳ ಆಗಿನ ಸ್ಥಿತಿಯನ್ನು ಅತ್ಯಂತ ಸಹಜವಾಗಿ ಚಿತ್ರಿಸುವ ಒಂದು ಉಪಮೆ— "ಸಾಭ್ರೇವಹ್ನೀವ ಸ್ಥಲ ಕಮಲಿನೀಂನಪ್ರಭುದ್ಧಾಂನ ಸುಪ್ತಾಂ".

ಮೇಘ, ಸಂದೇಶ ತಂದಾಗ, ಶುಭನಿಮಿತ್ತವಾಗಿ ಯಕ್ಷಿಯ ಕಣ್ಣು ರೆಪ್ಪೆ ಅದುರುತ್ತದೆ. ಅದು-"ಮೀನು ಸೋಕಿದ್ದರಿಂದ ಕುವಲಯ ಅದುರಿದಂತೆ ಇರುತ್ತದೆ"-ಎಂಬುದು. "ಮೀನಕ್ಷೋಭಾಚ್ಚಲಕುವಲಯ ಶ್ರೀತುಲಾಮೇಷ್ಯತೀತಿ".

ಇದರಲ್ಲಿ ಬರುವ ಅರ್ಥಾಂತರನ್ಯಾಸಗಳಲ್ಲಿ ಹೀಗೆಯೇ ವೈಚಿತ್ರ್ಯ ಪೂರ್ಣವಾಗಿವೆ.

1) "ಮೇಘಾ ಲೋಕೇ ಭವತಿಸುಖಿನೋಽಪ್ಯನ್ಯಥಾ ವೃತ್ತಿಚೇತಃ
ಕಂಠಾಶ್ಲೇಷೇಪ್ರಣಯಿನಿಜನೇ ಕಿಂ"ಪುನರ್ದೂರ ಸಂಸ್ಥೇ"

(ಮೇಘವನ್ನವಲೋಕಿಸಿದಾಗ ಸುಖಿಗಳ ಅಂತರಂಗವೂ ಅನ್ಯಥಾ ಭಾವವನ್ನು ತಾಳುತ್ತದೆ. ಇನ್ನು ಕೊರಳ ಅಪ್ಪುಗೆಯನ್ನಾಶಿಸುವ ಪ್ರಣಯಜನ ದೂರವಿರುವಂಥವರ ಸ್ಥಿತಿ ಹೇಗಿರಬೇಡ)

2) "ಕಾಮಾರ್ತಾಹಿ ಪ್ರಕೃತಿ ಪಣಾಃ ಚೇತನಾ ಚೇತನೇಷು".

(ಕಾಮಾರ್ತರಾದವರು ಚೇತನಾ ಚೇತನಗಳ ವಿಷಯಕ್ಕೆ ಸ್ವಭಾವ ಸಹಜವಾಗಿಯೇ ದೀನರು)

3) "ಯಾಚ್ಞಾಮೋಘಾವರಮಧಿಗುಣೇನಾಧಮೇ ಲಬ್ಧಕಾಮಾ"

(ಉತ್ತಮರನ್ನು ಬೇಡಿದುದು ವ್ಯರ್ಥವಾದರೂ ಸಾರ್ಥಕವೇ. ಕುತ್ಸಿತರನ್ನು ಬೇಡಿದರೆ ಸಾರ್ಥಕವಾದರೂ ವ್ಯರ್ಥವೇ.)

ಹೀಗೆ ಸಾಮಾನ್ಯ ಮಾತುಗಳಿಂದ ವಿಶೇಷವನ್ನು ಸಮರ್ಥನೆ ಮಾಡುವ ಅರ್ಥಾಂತರ ನ್ಯಾಸಗಳು ಕಾವ್ಯದ ತುಂಬ ಇವೆ.

ಜ

ಮೇಘದೂತ ಕಾವ್ಯ ಹುಟ್ಟಿದಂದಿನಿಂದ ಇಂದಿನವರೆಗೆ ಅಖಂಡವಾಗಿ ಏಕಪ್ರಕಾರವಾದ ಜನಪ್ರಿಯತೆಯನ್ನು ಪಡೆದುಕೊಂಡು ಬಂದಿದೆ. ಇದುವರೆಗೆ ಮೇಘದೂತಕ್ಕೆ ಸುಮಾರು ಐವತ್ತು ವ್ಯಾಖ್ಯಾನಗಳು ಬಂದಿವೆ. ಪ್ರಸಿದ್ಧ ವ್ಯಾಖ್ಯಾನಕಾರ ಮಲ್ಲಿಕಾನಾಥನಂತೂ ಇದರ ವ್ಯಾಖ್ಯಾನಕ್ಕೆ ಜೀವಿತವನ್ನು ಮೀಸಲಿಟ್ಟಿದ್ದನೋ ಎಂಬಂತೆ-"ಮಾಘೇ ಮೇಘೇಗತಂ ವಯಃ" ಎಂದು ಹೇಳಿದ್ದಾನೆ. ಜಗತ್ತಿನ ಬಹುತೇಕ ಎಲ್ಲ ಪ್ರಮುಖ ಭಾಷೆಗಳಿಗೆ ಅನುವಾದವಾಗಿದೆ. ಕನ್ನಡದಲ್ಲೇ ನಾಲ್ಕು ಅನುವಾದಗಳು ಇದುವರೆಗೆ ಬಂದಿವೆ. ಬೇಂದ್ರೆಯವರ ಮೇಘದೂತವನ್ನು ಅನುವಾದವೆನ್ನುವುದಕ್ಕಿಂತ ಪುನಃ ಸೃಷ್ಟಿ ಎನ್ನಬಹುದು. ಕಾಳಿದಾಸನ ಮೇಘದೂತವನ್ನನುಸರಿಸಿ ಭಾರತೀಯ ಭಾಷೆಗಳಲ್ಲಿ ದೂತ ಕಾವ್ಯಗಳ ಒಂದು ಸರಣಿಯೇ ಸೃಷ್ಟಿಯಾಯಿತು. ಪವನ ದೂತ, ನೇಮಿದೂತ, ಶಿಲಾದೂತ, ಉದ್ಧವ ದೂತ, ಹಂಸದೂತ, ಮನೋದೂತ, ತುಲಸೀದೂತ, ದೂತ ಹಂಸ, ಶುಕಸಂದೇಶ, ಹಂಸ ಸಂದೇಶ, ಭೃಂಗ ಸಂದೇಶ, ಮೇಘದೌತ್ಯ, ಮೇಘ ಪ್ರತಿ ಸಂದೇಶ ಮುಂತಾದುವು. ತೆಲುಗಿನಲ್ಲಿ ಕವಿ ಜಾಶ್ವನ ಗಬ್ಬಿಲಮು ಮೇಘದೂತದ ಮೇಲ್ಪಂಕ್ತಿಯನ್ನನುಸರಿಸಿದ ಕಾವ್ಯ. ಹೀಗೆ ಕಾಳಿದಾಸನನ್ನು ಅನುಸರಿಸಿ, ಅನುಕರಿಸಿ ಅನೇಕ ಕವಿಗಳು ಆಗಿ ಹೋಗಿದ್ದಾರೆ. ಆದರೆ ಮಹಾಕವಿ ಅನುಕರಣೆಗೆ ಸಿಕ್ಕುವುದಿಲ್ಲ. ಕವಿ ರವೀಂದ್ರರು ಹೇಳಿದಂತೆ "ಪ್ರಣಯೀ ಹೃದಯದ ಮಿಡಿತವನ್ನು ವಿಶ್ವ ಸಂಗೀತದ ಧ್ರುವ ಪದದಲ್ಲಿ ಬಂಧಿಸಿಟ್ಟಿರುವ ಕಾವ್ಯ" ಇದಾಗಿದೆ. ಆದ್ದರಿಂದಲೇ ಶತ ಶತಮಾನಗಳು ಸಂದರೂ ವಿಶ್ವದ ಎಲ್ಲ ಸಹೃದಯರ ಹೃದಯದಲ್ಲಿ ಅದಕ್ಕೆ ಶಾಶ್ವತ ಸ್ಥಾನ ಲಭ್ಯವಾಗಿರುವುದು.

(ಈ ಲೇಖನದಲ್ಲಿ ಉದ್ಧೃತವಾಗಿರುವ ಕನ್ನಡ ಅನುವಾದದ ಪದ್ಯಗಳು ಪ್ರೊ॥ಎಸ್. ವಿ. ಪರಮೇಶ್ವರ ಭಟ್ಟರ ಕನ್ನಡ ಮೇಘ ದೂತದಿಂದ ಆಯ್ದುವು)

ಗ್ರಂಥ ಋಣ :

1) ಕಾಳಿದಾಸ ಮಹಾಕವಿ—ಸಿ. ಕೆ. ವೆಂಕಟರಾಮಯ್ಯ

2) ಕಾಲಿದಾಸ—ಆದ್ಯ ರಂಗಾಚಾರ್ಯ

3) ಕನ್ನಡ ಕಾಳಿದಾಸ ಮಹಾ ಸಂಪುಟ —ಪ್ರೊ॥ ಎಸ್. ವಿ. ಪರಮೇಶ್ವರ ಭಟ್ಟ

4) ಕನ್ನಡ ಮೇಘದೂತ—ಕ. ನರಸಿಂಹಶಾಸ್ತ್ರಿ

5) ಕನ್ನಡ ಮೇಘದೂತ—ಅಂಬಿಕಾತನಯ ದತ್ತ

6) ಮಲ್ಲಿನಾಥ ವ್ಯಾಖ್ಯಾನ.

7) ಮೇಘ ಸಂದೇಶ— ಡಾ॥ ಮಾಸ್ತಿವೆಂಕಟೇಶ ಅಯ್ಯಂಗಾರ್

—ವಿಮರ್ಶೆ ಭಾಗ-1

ಶುಭೋದಯ

ಡಾ. ವಿಜಯಕುಮಾರ ಮಹಾನುಭಾವಿಗಳು

ಬೆಳೆವ ಪಯಿರಿಗೆ ನೀರು ಇರದಿರೆ ಸುಗ್ಗಿ ಬರುವುದು ಎಂದಿಗೆ?
ಮುಳ್ಳು ಬೆಳೆದಿದೆ ದಾರಿ ಎಲ್ಲೆಡೆ ನಡೆವ ಪಾದಕೆ ತೊಡಕಿದೆ.
ಮಬ್ಬು ಕವಿದಿದೆ ಮನದ ಎದುರಿಗೆ ಬೆಳಕು ಮೂಡುವುದೆಂದಿಗೆ?
ಪಥವು ದೂರವು ಪಯಣ ಸಾಗಲು ದೇಹ ಕಿಲ್ಲವು ತ್ರಾಣವು.

ಹಾಲ ಹೊಳೆಯು ಮಾತು ಹರಿದಿದೆ ಪ್ರಗತಿ ಎಲ್ಲವು ಬಿಂಬವು
ಶಿಖರದೆತ್ತರ ಮಾತು ಹೊರಟಿದೆ ಮನಸು ಮಾತ್ರವು ರಾಡಿಯು
ಹೃದಯವೆಲ್ಲವು ರಿಪುಗಳಾರಲಿ ಬದುಕು ಬವಣೆಯು ಬೇಸಿಗೆ
ನಗೆಯ ಚಂದ್ರನು ಎಂದು ಮೂಡುವ ಹರುಷ ನನಸಿನ ಬಾಳಿಗೆ

ಗಿಡವು ನಗುತಿದೆ ಹೂವು ಅರಳಿಸಿ ಮನಸು ನಗುವುದೆಂದಿಗೆ?
ಹೂವ ಕಂಪಿದೆ ಗಾಳಿ ಅಲೆಯಲಿ ಮೈತ್ರಿ ಬೆಳೆಯಲಿ ಈ ದಿನ
ಹಕ್ಕಿ ಹಾಡಿದೆ ಶುಭದ ಗಾನವ ಹರುಷ ಗಂಟೆಯು ಕೇಳಿದೆ
ಚಿಗುರು ಚಿಮ್ಮಿದೆ ಕೊಂಬೆ ರೆಂಬೆಲಿ ನಗಲಿ ಮನೆ ಮನೆನಾಡಲಿ.

ಮೊಗ್ಗು ಅರಳಲಿ ಫಸಲು ತುಂಬಲಿ ಸುಗ್ಗಿ ಮನೆ ಮನೆ ತುಂಬಲಿ
ನಗುವ ಬಾಳಿದು ಪಾಡ ಹಾಡುವ ಕಾವ್ಯ ನೌಕೆಯುಏರುವ
ಅಲೆಯು ತೆರೆ ತೆರೆ ಬೆಳಗು ಕಲಕಲ ನೋಟ ವಿಸ್ತರವಾಗಲಿ
ಬಯಲ ಮಾನಸದೇವ ಕುಳಿತಹ ಮನಸು ಹೃದಯದ ಪೀಠದಿ.

ಮೂರುಜಾವುದ ದೇವರು ಒಬ್ಬರೇ ಅಥವಾ ಹಲವರೇ ? ಒಂದು ಚಿಂತನೆ

ಡಾ. ಸಿ. ನಾಗಭೂಷಣ

ಕನ್ನಡನಾಡಿನ ಮಧ್ಯಕಾಲೀನ ಧಾರ್ಮಿಕ ಚರಿತ್ರೆಯಲ್ಲಿ ಅದರಲ್ಲೂ ವಿಶೇಷವಾಗಿ ವೀರಶೈವ ಧಾರ್ಮಿಕ ಚರಿತ್ರೆಯಲ್ಲಿ ಮೂರುಜಾವುದದೇವರ ಹೆಸರು ಮಹತ್ತರವಾದುದು ಬೇರೆ ಬೇರೆ ಕಾಲಕ್ಕೆ ಸೇರಿದ ಒಟ್ಟು ಹದಿಮೂರು ಶಾಸನಗಳಲ್ಲಿ ಮತ್ತು ಸಾಹಿತ್ಯ ಕೃತಿಗಳಲ್ಲಿ ಮೂರುಜಾವುದದೇವರ ಉಲ್ಲೇಖ ಕಂಡು ಬರುತ್ತದೆ. ಮೂರು ಜಾವುದದೇವರನ್ನು ಕುರಿತು ಬರೆದ 'ವಿಶ್ವಬ್ರಾಹ್ಮಣ ಜಗದ್ಗುರು ಮೂರುಜಾವಿ ಚಿಕ್ಕೇಶ್ವರರು' ಎಂಬ ಲೇಖನದಲ್ಲಿ ವಿಭಿನ್ನ ಕಾಲದ ಅಂದರೆ ಸುಮಾರು ಹನ್ನೊಂದನೇ ಶತಮಾನದ ಮಧ್ಯಭಾಗದಿಂದ ಹದಿಮೂರನೇ ಶತಮಾನದ ಕೊನೆಯ ಭಾಗದವರೆಗಿನ ಶಾಸನಗಳಲ್ಲಿ ಉಲ್ಲೇಖಿತನಾಗಿರುವ ಮೂರುಜಾವುದದೇವರು ಒಬ್ಬರೇ ಎಂದು ಹೇಳಲಾಗಿದೆ.[1] ವಿಭಿನ್ನ ಕಾಲದ ಶಾಸನಗಳಲ್ಲಿ ಉಲ್ಲೇಖಿತರಾಗಿರುವ ಮೂರುಜಾವುದ ದೇವರುಗಳೆಲ್ಲರು ಶೈವಧರ್ಮಕ್ಕೆ ಸಂಬಂಧ ಪಟ್ಟವರು ಆಗಿರುತ್ತಾರೆ. ಲೇಖಕರು, ಮಹಾಸಿದ್ಧಗೋರಖನಾಥನು ಕ್ರಿ.ಶ. 9ನೇ ಶತಮಾನದಿಂದ 13ನೇ ಶತಮಾನಗಳ ವರೆಗೆ ಜೀವಿಸಿ ಪವಾಡವನ್ನು ಎಸಗಿದನೆನ್ನಲಿಕ್ಕೆ ಭಾರತೀಯ ಸಾಹಿತ್ಯದಲ್ಲಿ ಬಲಿಷ್ಠವಾದ ಆಧಾರಗಳಿವೆ ಎಂಬ ಹೇಳಿಕೆಯನ್ನು ಆಧಾರವಾಗಿಟ್ಟುಕೊಂಡು ಸುಮಾರು 270 ವರ್ಷಗಳ ಅಂತರದ ವಿಭಿನ್ನ ಶಾಸನಗಳಲ್ಲಿ ಉಲ್ಲೇಖಿತರಾಗಿರುವ ಮೂರುಜಾವುದ ದೇವರು ಒಬ್ಬರೇ ಎಂದು ಸಮರ್ಥಿಸಿಕೊಂಡಿದ್ದಾರೆ. ಈ ಸಮರ್ಥನೆ ಅತ್ಯಂತ ದುರ್ಬಲವಾದುದು ಎಂದೆನಿಸುತ್ತದೆ.

ಇತ್ತೀಚೆಗೆ ಮೂರು ಜಾವುದದೇವರ ಉಲ್ಲೇಖ ಇರುವ ನೂತನ ಶಾಸನಗಳು South Indian Inscription Vol. No. xx. ಶಿವಮೊಗ್ಗ ಜಿಲ್ಲೆಯ ಸಪ್ಲಿಮೆಂಟರರಿ ವಾಲ್ಯೂಂ. Karnataka Inscription Vol No IV. V. VI. ಸಂಪುಟಗಳು Summaries of Inscriptions [1943-44 to 1949-50] K.R.I. ಪುಸ್ತಕಗಳನ್ನು ಪರಿಶೀಲಿಸುತ್ತಿರುವಾಗ ನನ್ನ ಗಮನಕ್ಕೆ ಬಂದವು. ಈ ಶಾಸನ

1 ಎ. ಜಿ. ದೀಕ್ಷಿತ ಮತ್ತು ಜಿ. ಜ್ಞಾನಾನಂದ : ಮೂರುಜಾವಿದೇವರ ಚರಿತೆ ಪು. 162.

ಗಳಲ್ಲಿಯು ಹಾಗೂ ಸಾಹಿತ್ಯ ಕೃತಿಗಳಲ್ಲಿಯು ವಿವರಗಳಿಂದ ಮೂರು ಜಾವುದ ದೇವರು ಒಬ್ಬರಲ್ಲ ಹಲವರು ಎಂಬುದನ್ನು ಈ ಲೇಖನದಲ್ಲಿ ಸಾಧಾರವಾಗಿ ವಿವರಿಸಲಾಗಿದೆ. ಎಂ. ಎಂ. ಕಲಬುರ್ಗಿರವರು ಶಾಸನಗಳಲ್ಲಿ ಶಿವಶರಣರು ಎಂಬ ಪುಸ್ತಕದಲ್ಲಿ ಮೂರು ಜಾವುದದೇವರಿಗೆ ಸಂಬಂಧಿಸಿದ ಆರು ಶಾಸನಗಳನ್ನು ಉಲ್ಲೇಖಿಸಿದ್ದಾರೆ.[2] ಈ ಆರು ಶಾಸನಗಳ ಜೊತೆಗೆ ಇತರೆ ಏಳು ಶಾಸನಗಳು ಸೇರಿ ಒಟ್ಟು ಹದಿಮೂರು ಶಾಸನಗಳು ಮೂರುಜಾವುದದೇವರಿಗೆ ಸಂಬಂಧಿಸಿದವುಗಳು ಆಗಿವೆ. ಅವುಗಳ ವಿವರ ಇಂತಿದೆ.

೧	S.I.I. Vol No	lx-1	ನಂ. 124	ಹಿರೆಮುಗಲೇರಿಶಾಸನ	ಕಾಲ ಕ್ರಿ.ಶ. 1059
೨	S.I.I. Vol No	xx	ನಂ. 198	ಲಕ್ಷ್ಮೇಶ್ವರ	ಕಾಲ ಕ್ರಿ.ಶ. 1227
೩	S.I.I. Vol No	xx	ನಂ. 228	ಕಲಿಕೇರಿ	ಕಾಲ ಕ್ರಿ.ಶ. 13ನೇ ಶತಮಾನ
೪	ಅದೇ		ನಂ. 332	ಕಲಿಕೇರಿ	ಅದೇ
೫	K.I. Vol No	vi	ನಂ. 37	ರಟ್ಟಹಳ್ಳಿ	ಕಾಲ ಕ್ರಿ.ಶ. 1174
೬	ಅದೇ		ನಂ. 42	ರಟ್ಟಹಳ್ಳಿ	ಕಾಲ ಕ್ರಿ.ಶ. 1237
೭	ಅದೇ		ನಂ. 43	ರಟ್ಟಹಳ್ಳಿ	ಕಾಲ ಕ್ರಿ.ಶ. 1237
೮	ಧಾರವಾಡ ಜಿಲ್ಲಾ ಶಾಸನ ಸೂಚಿ		ನಂ. 212	ರಟ್ಟಹಳ್ಳಿ	ಕಾಲ ಅಸ್ಪಷ್ಟ
೯	K.I. Vol No.	iv	ನಂ. 43	ಮೇಡೂರ	ಕಾಲ ಕ್ರಿ.ಶ. 1186
೧೦	Summaries of Inscription (1948-49)		K.R.I. No. 29	ಕಡೂರ	ಕಾಲ ಕ್ರಿ.ಶ. 13ನೇ ಶತಮಾನ
೧೧	E.C. Vol No.	xvii	ನಂ. 361	ಶಿಕಾರಿಪುರ	ಕಾಲ ಕ್ರಿ.ಶ. 13ನೇ ಶತಮಾನ
೧೨	ಧಾರವಾಡ ಜಿಲ್ಲಾ ಶಾಸನ ಸೂಚಿ		ನಂ. 286	ಹಿರೇಮೊರಬ	ಕಾಲ ಕ್ರಿ.ಶ. 12ನೇ ಶತಮಾನ

ವೀರಶೈವ ಸಾಹಿತ್ಯ ಕೃತಿಗಳಲ್ಲಿ ಪಾಲ್ಕುರಿಕೆ ಸೋಮನಾಥನ ಗಣ ಸಹಸ್ರನಾಮಾವಳಿ, ಕೆರೆಯ ಪದ್ಮರಸನ ಸಾನಂದ ಚರಿತೆ, ಗುಬ್ಬಿ ಮಲ್ಲಣಾರ್ಯನ ವೀರಶೈವಾಮೃತ ಮಹಾ ಪುರಾಣ, ವಿರಕ್ತತೋಂಟದಾರ್ಯನ ಸಿದ್ಧೇಶ್ವರ ಪುರಾಣ, ಶಾಂತನಿರಂಜನನ ಅಬ್ಬಲೂರು ಚರಿತೆಗಳಲ್ಲಿ ಮೂರುಜಾವುದದೇವರ ಉಲ್ಲೇಖ ಕಂಡು ಬರುತ್ತದೆ. ಶಾಸನಗಳಲ್ಲಿ ಉಲ್ಲೇಖಿತರಾಗಿರುವ ಮೂರು ಜಾವುದ ದೇವರು ಶೈವಮತಕ್ಕೆ ಸಂಬಂಧ ಪಟ್ಟವರಾಗಿದ್ದು ಶೈವಶಾಖೆಯ ಸ್ಥಾನಪತಿಗಳೂ ಆಗಿದ್ದಾರೆ.

ಮೂರು ಜಾವುದ ದೇವರಲ್ಲಿ ಅತ್ಯಂತ ಪ್ರಾಚೀನರು ಕ್ರಿ. ಶ. 1059ರ ಹರಪನಹಳ್ಳಿ ತಾಲ್ಲೋಕಿನ ಹಿರೇಮುಗಲೇರಿ ಶಾಸನದಲ್ಲಿ[3] ಉಲ್ಲೇಖಿಸಲ್ಪಟ್ಟವರು ಆಗಿದ್ದಾರೆ. ಈ ಶಾಸನವು ಕಲ್ಯಾಣಿ ಚಾಲುಕ್ಯ ತ್ರೈಲೋಕ್ಯಮಲ್ಲನ ಕಾಲಕ್ಕೆ ಸಂಬಂಧಿ

2 ಎಂ. ಎಂ. ಕಲಬುರ್ಗಿ : ಶಾಸನಗಳಲ್ಲಿ ಶಿವಶರಣರು. ಪು. 108 ರಿಂದ 113.

3 S.I.I. Vol. No. IX-1 ಹಿರೇಮುಗಲೇರಿ ನಂ. 124

ಸಿದುದಾಗಿದೆ. ಇಲ್ಲಿಯು ಮೂರು ಜಾವುದದೇವರು ತ್ರಿಕೂಟೇಶ್ವರ ದೇವರ ಮಠದ ಸ್ಥಾನಪತಿಗಳು ಮತ್ತು ಅರಿಯದೇವರ ಶಿಷ್ಯರು ಎಂಬುದಾಗಿ ತಿಳಿದು ಬರುತ್ತದೆ. ಉಚ್ಚಂಗಿ ಮೂವತ್ತನ್ನು ಆಳುತ್ತಿದ್ದ ಮಹಾ ಮಂಡಲೇಶ್ವರ ಸಿಂಗಣದೇವರಿಂದ ಕಾಲಂಕರ್ಚಿ ಉಚ್ಚಂಗಿ ಮೂವತ್ತರ ಬಳಿಯ ಕಾಡವಾರಹಳ್ಳಿ ಉತ್ತರದಿಕ್ಕಿನ ಭೂಮಿಯನ್ನು ದಾನವಾಗಿ ಪಡೆದುದಾಗಿ ಶಾಸನ ತಿಳಿಸುತ್ತದೆ. ರಾಜ ಪೂಜಿತನಾಗಿ ದಾನವನ್ನು ಪಡೆಯುವಷ್ಟರ ಮಟ್ಟಿಗೆ ಪ್ರಸಿದ್ಧಿಯನ್ನು ಪಡೆದಿದ್ದರು. ಇವರು ಮೂರು ಜಾವುದ ದೇವರುಗಳಲ್ಲಿ ಅತ್ಯಂತ ಪ್ರಾಚೀನ ವ್ಯಕ್ತಿಗಳಾದ್ದುದರಿಂದ ಇವರನ್ನು ಮೊದಲನೇ ಮೂರು ಜಾವುದ ದೇವರು ಎಂದು ಗುರುತಿಸಲಾಗಿದೆ.

ಎರಡನೇ ಮೂರು ಜಾವುದ ದೇವರು ಹಿರೇಕೆರೂರ ತಾಲ್ಲೋಕಿನ ಕ್ರಿ.ಶ. 1174ರ ರಟ್ಟಹಳ್ಳಿಯ ಶಾಸನದಲ್ಲಿ[4] ಉಲ್ಲೇಖಿಸಲ್ಪಟ್ಟವರು ಆಗಿದ್ದಾರೆ. ಈ ಶಾಸನವು ಕಲಚೂರಿದೊರೆ ರಾಯಮುರಾರಿ ಸೋವಿದೇವನ ಕಾಲಕ್ಕೆ ಸಂಬಂಧಿಸಿದುದಾಗಿದೆ. ಈ ಶಾಸನವಲ್ಲಿ ಕಾಳಾಮುಖ ಶಾಖೆಯ ಗುರು ಸಂಪ್ರದಾಯಕ್ಕೆ ಸೇರಿದ ವ್ಯಕ್ತಿಗಳ ಉಲ್ಲೇಖ ಕಾಲಾನುಕ್ರಮದಲ್ಲಿ ಕಂಡುಬರುತ್ತದೆ. ಅವರುಗಳೆಂದರೆ ವಾಮದೇವ, ವಾದಿರುದ್ರ, ಕ್ರಿಯಾಶಕ್ತಿ, ಅಮೃತರಶಿ, ಶ್ರೀಕಂಠದೇವ, ಕ್ರಿಯಾಶಕ್ತಿ II ಸರ್ವೇಶ್ವರ ಕಲ್ಯಾಣಶಕ್ತಿ, ಮೂರು ಜಾವುದ ದೇವ ಮತ್ತು ಲಕುಲೀಶ. ಈ ಶಾಸನದ ಪ್ರಕಾರ ಕಾಳಾಮುಖ ಶಾಖೆಯ ಗುರು ಸಂಪ್ರದಾಯಕ್ಕೆ 9ನೆಯವರಾಗಿ ಮೂರು ಜಾವುದ ದೇವರು ಕಂಡುಬರುತ್ತಾರೆ. ಈತನನ್ನು ಕುರಿತು ಶಾಸನವು

"ತದಮ ಸಮುದ್ಭವ ಈಶ್ವರ
ಪದ ಕಮಳ ಭ್ರಮರ ನಾಗಮುಬುಜಾತ ಸಮು
ಭ್ಯುದಿತ ದಶಶತ ಮಯೂಖಿಂ
ಮದನೋಗ್ರಂ ಮೂರುಜಾವಿದೇವ ಬ್ರತಿಪಂ" ಎಂದು ಕೀರ್ತಿಸಿದೆ.

ಈ ಮೂರು ಜಾವುದ ದೇವರುಗಳ ಗುರುಗಳು ಕಲ್ಯಾಣ ಶಕ್ತಿಗಳಾಗಿದ್ದಾರೆ. ಲಕುಲೀಶರು ಇವರ ಶಿಷ್ಯರಾಗಿದ್ದಾರೆ. ಈ ಎರಡನೇ ಮೂರು ಜಾವುದ ದೇವರನ್ನು ಕುರಿತು ಹಿರೇಕೆರೂರ ತಾಲ್ಲೋಕಿನ ಕ್ರಿ.ಶ. 1186ರ ಮೇಡೂರ ಶಾಸನ[5] ಮತ್ತು ಹಿರೇಮೊರಬ ಶಾಸನಗಳು[6] ರಾಜಗುರು ಮೂರು ಜಾವುದ ದೇವ. ಎಂದು ಕೀರ್ತಿಸಿವೆ. ಕಾಳಾಮುಖ ಶಾಖೆಯ ಗುರು ಸಂಪ್ರದಾಯ ವ್ಯಕ್ತಿಯಾದ ಈ ಮೂರುಜಾವುದ ದೇವರನ್ನು 'ಎರಡನೇ ಮೂರು ಜಾವುದ ದೇವರು' ಎಂದು ಇಲ್ಲಿ ಗುರುತಿಸಲಾಗಿದೆ.

---

4. K. I. Vol. No. VI ರಟ್ಟಹಳ್ಳಿ ನಂ. 37
5. K. I. Vol. No. IV. ಮೇಡೂರ ನಂ. 43
6. ಧಾರವಾಡ ಜಿಲ್ಲಾ ಶಾಸನ ಸೂಚಿ [ಸಂ॥ ಎಂ. ಎಂ. ಕಲಬುರ್ಗಿ] ನಂ. 286 ಹಿರೆಮೊರಬ

ಕ್ರಿ.ಶ. 1238ಕ್ಕೆ ಸೇರಿದ ರಟ್ಟಹಳ್ಳಿ ಶಾಸನವು ಕಾಳಾಮುಖ ಶಾಖೆಯ ಗುರು ಸಂಪ್ರದಾಯದ ವ್ಯಕ್ತಿಗಳನ್ನು ಉಲ್ಲೇಖಿಸುತ್ತಾ ಕೊನೆಯಲ್ಲಿ ಇನ್ನೊಬ್ಬ ಮೂರು ಜಾವುದ ದೇವರನ್ನು ಉಲ್ಲೇಖಿಸಿದೆ.[7] ಕಾಳಾಮುಖ ಶಾಖೆಯ ಗುರು ಸಂಪ್ರದಾಯದ ವ್ಯಕ್ತಿಗಳ ವಿವರವು ಈಗಾಗಲೇ ಕ್ರಿ.ಶ. 1174ರ ಶಾಸನದಲ್ಲಿ ಬಂದಿರುವುದನ್ನು ಈಗಾಗಲೇ ಗುರುತಿಸಲಾಗಿವೆ. ಈ ಶಾಸನದಲ್ಲಿ ಬರುವ ಮೂರುಜಾವುದ ದೇವರನ್ನು ಮೂರನೇ ಮೂರುಜಾವುದ ದೇವ' ಎಂದು ಸೂಚಿಸಲಾಗಿದೆ. ಈ ಮೂರನೇ ಮೂರು ಜಾವುದ ದೇವರು ಕಾಳಾಮುಖ ಶಾಖೆಯ ಸಂಪ್ರದಾಯಕ್ಕೆ ಸೇರಿದ್ದು ಎರಡನೇ ಮೂರು ಜಾವುದ ದೇವರ ವಂಶಪರಂಪರೆಯುವನಾಗಿದ್ದಾರೆ. ಇವರು ಲಕು ಲೀಶನ ಶಿಷ್ಯ ಎಂಬುದು ಲಕುಲೀಶನನ್ನು ಉಲ್ಲೇಖಿಸಿದ ನಂತರ ಪದ್ಯದಲ್ಲಿಯ

ತಚ್ಛಿಷ್ಯಂ
ಮಾನಸ ವಾಚಕ ಕಾಯಕ
ದೇವಸಮಂ ಪೊರ್ದಲೊಲ್ಲದಿಹ ಪರಸುಖದ
ಜ್ಞಾನಮನೆ ಬಿಟ್ಟ ಶಿವನ

ಧ್ಯಾನದಿ ನೆಲೆಗೊಂಡ ಮೂರು ಜಾವಿ ಬ್ರತಿಪಂ ವಿವರದಿಂದ ತಿಳಿದು ಬರುತ್ತದೆ. ಶಿವಧ್ಯಾನದಲ್ಲಿ ನಿರತರಾದ ಈ ಮೂರನೇ ಮೂರು ಜಾವುದ ದೇವರು ಅದೇ ಸಂಪ್ರದಾಯದ ಸ್ಥಾನಾಚಾರ್ಯ ಮತ್ತು ರಾಜಗುರುವಾಗಿದ್ದು ತನ್ನ ನೇತೃತ್ವದಲ್ಲಿ ತಡಂಬೇಶ್ವರ ದೇವರ ಪ್ರವಿಷ್ಟದಲ್ಲಿ ಮಲ್ಲೇಶ್ವರ ರಾಜೇಶ್ವರ ದೇವರ ಪ್ರತಿಷ್ಠೆಯನ್ನು ಹೊಂಬಮ್ಮಿಸೆಟ್ಟಿಯರಿಂದ ಮಾಡಿಸಿದುದಾಗಿ ಈ ಶಾಸನದ ವಿವರದಿಂದ ತಿಳಿದು ಬರುತ್ತದೆ. ಅದೇ ಕಾಲಕ್ಕೆ ಸೇರಿದ ರಟ್ಟಹಳ್ಳಿಯ ಮತ್ತೊಂದು ಶಾಸನದ[9] ಪ್ರಕಾರ ಇವರೇ ಶ್ರೀ ಕದಂಬೇಶ್ವರ ದೇವರ್ಗೆ ನಂದಾವಳಿಕಂ ಶ್ರೀಗಂದಕ್ಕೆಂದು ಗುಬ್ಬಿಯ ಕಲ್ಲೆಯ ಎಂಬ ವ್ಯಕ್ತಿಯಿಂದ ಕಾಲಂಕರ್ಚಿಸಿಕೊಂಡು ಸುಂಕದಾನವನ್ನು ಪಡೆಯುತ್ತಾರೆ. ಕ್ರಿಶ. 1237ಕ್ಕೆ ಸೇರಿದ ರಟ್ಟಹಳ್ಳಿಯ ಮತ್ತೊಂದು ಶಾಸದಲ್ಲಿ ಈ ಮೂರು ಜಾವುದ ದೇವರೇ ಕಾರಣದ ಕಲ್ಲರಸ ಮತ್ತು ಹಲವು ವ್ಯಾಪಾರಸ್ಥರಿಂದ ಮಲ್ಲಿನಾಥ ದೇವಾಲಯ ಕ್ಕಾಗಿ ದಾನವನ್ನು ಪಡೆದ ವಿವರ ಇದೆ.[10] ಈ ಮೂರನೇ ಮೂರು ಜಾವುದದೇವರನ್ನು ಕುರಿತು ರಟ್ಟಹಳ್ಳಿ ಶಾಸನಗಳಲ್ಲಿ ಅಲ್ಲದೆ ಸಮಕಾಲೀನ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೋಕಿನ ಚಿಕ್ಕಮಾಗಡಿ ಶಾಸನ ಮತ್ತು ಲಕ್ಷ್ಮೇಶ್ವರದ ಶಾಸನಗಳು ಉಲ್ಲೇಖಿಸುತ್ತವೆ.

---

7. K. I. Vol. No. VI. ರಟ್ಟಹಳ್ಳಿ ನಂ. 43
8. ಅದೇ
9. K. I. Vol. No. VI. ರಟ್ಟಹಳ್ಳಿ ನಂ. 43
10. ಅದೇ ನಂ. 42

ಚಿಕ್ಕ ಮಾಗಡಿ ಶಾಸನದಲ್ಲಿಯು ಮೂರುಜಾವುದ ದೇವರು ಮಾಡಿಸಿದ ಧರ್ಮ ಕಾರ್ಯಗಳ ಬಗೆಗೆ ಉಲ್ಲೇಖ ಇದೆ. ಇವರು ಕದಂಬೇಶ್ವರ ದೇವಾಲಯಕ್ಕೆ ಕೆಲಸ ವನ್ನು ಮಾಡಿಸಿದ ವಿವರ ಇದೆ. ಈ ಕದಂಬೇಶ್ವರ ದೇವಾಲಯವು ರಟ್ಟಹಳ್ಳಿ ಶಾಸನದಲ್ಲಿ ಬರುವ ಕದಂಬೇಶ್ವರ ದೇವಾಲಯವೇ ಆಗಿದೆ. ಜೊತೆಗೆ ಮೂರನೇ ಮೂರು ಜಾವುದ ದೇವರ ಮಹಿಮೆಯನ್ನು ಕುರಿತು ರಟ್ಟಹಳ್ಳಿ ಶಾಸನದಲ್ಲಿ ಬರುವ ಯಮನಿಯಮ ಸ್ವಾಧ್ಯಾಯ ಧ್ಯಾನಧಾರಣಮೋನಾನುಷ್ಠಾನ ಜಪಸಮಾಧಿ ಶೀಲಗುಣ ಸಂಪಂನರುಂ ಎಂಬ ವಿಶೇಷಣ ಈ ಶಾಸನದಲ್ಲಿಯು ಮೂರು ಜಾವುದದೇವರನ್ನು ಕುರಿತ ಉಲ್ಲೇಖದಲ್ಲಿಯೂ ಇದೆ,

ಲಕ್ಷ್ಮೇಶ್ವರದ ಕ್ರಿ.ಶ. 1227 ರ ಶಾಸನದಲ್ಲಿ ಉಕ್ತವಾಗಿರುವ ಮೂರು ಜಾವುದ ದೇವರು, ರಟ್ಟಹಳ್ಳಿ ಶಾಸನೋಕ್ತ ಎರಡನೇ ಮೂರು ಜಾವುದ ದೇವರ ವಂಶ ಪರಂಪರೆಯವರಾದ ಮೂರನೇ ಮೂರು ಜಾವುದ ದೇವರೆಂದು ಹೇಳಲು ಅವಕಾಶ ಇದೆ. ರಟ್ಟಹಳ್ಳಿಯ ಕಾಲಮಿತಿ ಇಲ್ಲದ ಮತ್ತೊಂದು ಶಾಸನದಲ್ಲಿ[12] ಮೂರು ಜಾವುದದೇವರು ಹುಲಿಗೆರೆಗೆ ಪಯಣಿಸಿದ ವಿವರ ದೊರೆಯುತ್ತದೆ. ಈ ಮೂರು ಜಾವುದ ದೇವರು ಲಕ್ಷ್ಮೇಶ್ವರ ಶಾಸನದಲ್ಲಿಯ ಉಲ್ಲೇಖದ ಪ್ರಕಾರ ಕೇದಾರದೇವ ಮತ್ತು ಚಿಕ್ಕೇಶ್ವರ ದೇವರ ದೇವಾಲಯಗಳಿಗೆ ದಾನಮಾಡಿದ ಸಂಗತಿ ತಿಳಿದುಬರು ತ್ತದೆ. ವೀರಮಾಹೇಶ್ವರ ನಿಷ್ಠ ಏಕಾಂತರಾಮಯ್ಯನಿಗೆ ಶಿವಮತ ಪ್ರಸಾರ ಕ್ರಿಯೆ ಯಲ್ಲಿ ಸಹಾಯ ಮಾಡಿದ ಮೂರು ಜಾವುದ ದೇವರ ಮೂಲ ಹೆಸರು ಚಿಕ್ಕೇಶಯತಿ ಎಂಬುದು ಕ್ರಿ.ಶ. 1650 ರಲ್ಲಿದ್ದ ಶಾಂತ ನಿರಂಜನನ ಅಬ್ಬಲೂರು ಚರಿತ್ರೆಯಿಂದ[13] ತಿಳಿದು ಬರುತ್ತದೆ. ಈ ಚಿಕ್ಕೇಶ್ವರನನ್ನು ಸ್ಥಾವರ ರೂಪದಲ್ಲಿ ಆರಾಧಿಸುತ್ತಿದ್ದರು ಎಂಬುದಾಗಿ ತಿಳಿದು ಬರುತ್ತದೆ ಏಕಾಂತ ರಾಮಯ್ಯನಿಗೆ ಮತ ಪ್ರಸಾರ ಕ್ರಿಯೆಯಲ್ಲಿ ಸಹಾಯ ಮಾಡಿದ ವ್ಯಕ್ತಿ ಕ್ರಿ.ಶ. 1179ರ ರಟ್ಟಹಳ್ಳಿ ಶಾಸನದಲ್ಲಿ ಉಕ್ತರಾದ ಎರಡನೆ ಮೂರು ಜಾವುದ ದೇವರು ಎಂಬುದನ್ನು ಮುಂದೆ ನಿರೂಪಿಸಲಾಗಿದೆ. ಅದೇ ವಂಶದವ ರಾದ ಮೂರನೇ ಜಾವುದದೇವರು ತನ್ನ ಪೂರ್ವದ ಮೂರು ಜಾವುದ ದೇವರ ಅರ್ಥಾತ್ ಚಿಕ್ಕೇಶಯತಿಗೆ ಗೊಗ್ಗಿಯಾಚಾರ್ಯ ಎಂಬುವನಿಂದ ಭೂಮಿಯನ್ನು ಕೊಂಡು ಅರ್ಪಿಸಿರುವುದಾಗಿದು ಈ ಶಾಸನದಿಂದ ತಿಳಿದು ಬರುತ್ತದೆ. ಹೀಗಾಗಿ ಲಕ್ಷ್ಮೇಶ್ವರ ಶಾಸನದಲ್ಲಿ ಉಲ್ಲೇಖಿತರಾಗಿರುವ ಮೂರು ಜಾವುದ ದೇವರು ಕ್ರಿ.ಶ. 1238 ರ ರಟ್ಟಹಳ್ಳಿಯ ಶಾಸನದಲ್ಲಿ ಉಲ್ಲೇಖಿತರಾದ ಮೂರನೇ ಮೂರು ಜಾವುದ ದೇವರು ಆಗಿದ್ದಾರೆ ಎಂದು ಊಹೆ ಮಾಡಲು ಅವಕಾಶ ಇದೆ.

---

11 E C Vol No. XVII ನಂ. 361 ಚಿಕ್ಕಮಾಗಡಿ

12 ಧಾರವಾಡ ಜಿಲ್ಲಾ ಶಾಸನಸೂಚಿ (ಸಂ॥ ಎಂ. ಎಂ. ಕಲಬುರ್ಗಿ) ನಂ. 211. ಪು. 76

13 ಅಬ್ಬಲೂರು ಚರಿತೆ (ಸಂ॥ ಎಸ್. ಬಸವಾರಾಧ್ಯ) ನಂ. 5 ಪ.ಸಂ. 43

ಹೊಯ್ಸಳ ದೊರೆ ಎರಡನೇ ಬಲ್ಲಾಳನ ಕಾಲಕ್ಕೆ ಸೇರಿದ ಹಾನ್‌ಗಲ್ ತಾಲ್ಲೋಕಿನ ಕಲಕೇರಿಯ ಎರಡು ಶಾಸನಗಳಲ್ಲಿ[14] (ಸು. 13ನೇ ಶತಮಾನ) ಮೂರಾ ಜಾವುದ ದೇವರ ಉಲ್ಲೇಖ ಕಂಡು ಬರುತ್ತದೆ ಇವರನ್ನು ಕಲಕೇರಿ ಶಾಸನ ಗಳು 'ಭಿಕ್ಷೆಯ ಮೂರುಜಾವುದ ದೇವ' ಎಂದು ಸ್ತುತಿಸಿವೆ. ಈ ಭಿಕ್ಷೆಯ ಮೂರು ಜಾವುದ ದೇವರು ಕಲಕೇರಿಯ ಸ್ವಯಂಭು ಸೋಮನಾಥ ದೇವಾಲಯದ ಸ್ಥಾನಾಚಾರ್ಯರಾಗಿದ್ದು ಕಲಿಕೇರಿಯ ನಾಳ್ಪ್ರಭು ಚಲದಂಕ ರಾಮಹರಿಯಮ ಸೆಟ್ಟಿ ಮತ್ತು ಅವನ ಮಕ್ಕಳಾದ ವೀರಯಗೌಡ ಮತ್ತು ಎಕ್ಕಮಗೇದ (?) ನಿಂದ ಕೆಲವು ಭೂಮಿಯನ್ನು ದಾನವಾಗಿ ಪಡೆಯುತ್ತಾನೆಂಬ ಎಂಬ ವಿವರ ಶಾಸನದಿಂದ ತಿಳಿದು ಬರುತ್ತದೆ. ಈ ಮೂರು ಜಾವುದ ದೇವರು ಕಲಿಕೇರಿಯ ದೇವಸ್ಥಾನದ ಸ್ಥಾವಾ ಚಾರ್ಯರಾಗಿದ್ದರು ಎಂಬುದು ಈ ಶಾಸನದಲ್ಲಿ ಸ್ಪಷ್ಟವಾಗಿ ತಿಳಿದು ಬರುವುದರಿಂದ ಉಳಿದ ಮೇಲಿನ ಮೂರು ಜಾವುದ ದೇವರುಗಳಿಗಿಂತ ಬೇರೆಯವ ಎಂಬುದಾಗಿ ನಮಗೆ ಅನಿಸುತ್ತದೆ ಹೀಗಾಗಿ ಇವರು ನಾಲ್ಕನೆಯ ಮೂರು ಜಾವುದ ವ್ಯಕ್ತಿಯೆಂದು ಪರಿಗಣಿಸಬಹುದಾಗಿದೆ.

ಈ ಮೇಲಿನ ವಿವರದಿಂದ ಸದ್ಯಕ್ಕೆ ಉಪಲಬ್ಧ ಇರುವ ಶಾಸನಗಳಲ್ಲಿ ಉಲ್ಲೇಖಿತ ರಾಗಿರುವ ಮೂರು ಜಾವುದ ಹೆಸರಿನ ವ್ಯಕ್ತಿಯ ಒಬ್ಬರಾಗಿರದೆ ನಾಲ್ಕು ಮಂದಿ ಎಂಬ ನಿಲುವಿಗೆ ಬರಬಹು ಎಂದೆನಿಸುತ್ತದೆ. ಈ ಹೇಳಿಕೆಯನ್ನು ಕರಾರುವಕ್ಕಾಗಿ ಪರಿಗಣಿಸಲು ಸಾಧ್ಯವಾಗದಿದ್ದರೂ ನಿತ್ಯದ ಹತ್ತಿರಕ್ಕಿದೆ ಎಂಬುದನ್ನು ಅಲ್ಲಗಳೆಯು ವಂತಿಲ್ಲ ಕ್ರಮವಾಗಿ ಹೇಳುವುದಾದರೆ ಕ್ರಿ. ಶ. 1059 ರ ಹಿರೇಮಾಗಲೇರಿ ಶಾಸನದಲ್ಲಿ ಉಲ್ಲೇಖಿತರಾಗಿರುವ ಮೂರು ಜಾವುದ ದೇವರು ಮೊದಲನೆ ಮೂರು ಜಾವುದ ದೇವರೆಂದೂ, ಕ್ರಿ.ಶ, 1174 ರ ರಟ್ಟಹಳ್ಳಿ ಮತ್ತು ಕ್ರಿ.ಶ. 1186 ಮೇಡೂರ ಶಾಸನಗಳಲ್ಲ ಉಲೇಖಿತರಾಗಿರುವ ಮೂರು ಜಾವುದೇವರು ಎರಡನೇ ಜಾವುದದೇವರೆಂದೂ, ಕ್ರಿ.ಶ. 1227, 1228 ರ ರಟ್ಟಹಳ್ಳಿ ಶಾಸನ ಕ್ರಿ.ಶ. 1227ರ ಲಕ್ಷ್ಮೀಶ್ವರ ಶಾಸನ ಮತ್ತು ಇದೇ ಕಾಲಕ್ಕೆ ಸೇರಿದ ಚಿಕ್ಕಮಾಗಡಿ ಶಾಸನಗಳಲ್ಲಿ ಉಲ್ಲೇಖಿತರಾಗಿರುವ ಮೂರು ಜಾವುದದೇವರನ್ನು ಮೂರನೇ ಮೂರು ಜಾವುದ ರೆಂದೂ, ಕ್ರಿ.ಶ. ಹದಿಮೂರನೇ ಶತಮಾನಕ್ಕೆ ಸೇರಿದ ಕಲಕೇರಿ ಶಾಸನಗಳಲ್ಲಿ ಉಲ್ಲೇಖಿತರಾಗಿರುವ ಭಿಕ್ಷೆಯ ಮೂರುಜಾವುದ ದೇವರನ್ನು ನಾಲ್ಕನೆಯ ಮೂರು ಜಾವುದರೆಂದೂ ಸದ್ಯಕ್ಕೆ ಭಾವಿಸ ಬಹುದಾಗಿದೆ. ಈ ನಾಲ್ವರಲ್ಲಿ ಕ್ರಿ.ಶ. 1174 ರ ಮೂರು ಜಾವುದ ದೇವರನ್ನು ಹೊರತು ಪಡಿಸಿ ಉಳಿದ ಮೂವರು ಮೂರು ಜಾವುದ ದೇವರುಗಳಿಗೆ ಬೇರೆ ಪರ್ಯಾಯ ಹೆಸರುಗಳು ಇರುವುದರ ಬಗೆಗೆ ಶಾಸನಗಳಲ್ಲಿ

14 S.I.I. Vol No. x x ಕಲಕೇರಿ ನಂ. 332,335

ಉಲ್ಲೇಖ ಇಲ್ಲ. ನಾಲ್ಕು ಮಂದಿ ಮೂರುಜಾವುದ ದೇವರುಗಳು ಶೈವಮತಕ್ಕೆ ಸಂಬಂಧ ಪಟ್ಟವರಾಗಿದ್ದು. ಸ್ಥಾನಾಚಾರ್ಯರು ಮತ್ತು ಕಾಳಾಮುಖ ಶಾಖೆಯ ಗುರು ಸಂಪ್ರದಾಯಕ್ಕೆ ಸೇರಿದವರಾಗಿದ್ದಾರೆ.

ವೀರಶೈವ ಸಾಹಿತ್ಯದಲ್ಲಿ ಉಲ್ಲೇಖಿತರಾಗಿರುವ ಮತ್ತು ಏಕಾಂತ ರಾಮಯ್ಯನಿಗೆ ಶಿವಮತ ಪ್ರಸಾರ ಕ್ರಿಯೆಯಲ್ಲಿ ಸಹಾಯ ಮಾಡಿದ ಮೂರು ಜಾವುದ ದೇವರು ಮೇಲಿನ ನಾಲ್ಕು ಜನ ಮೂರು ಜಾವುದ ದೇವರುಗಳಲ್ಲಿ ಒಬ್ಬರಾಗಿದ್ದಾರೆ. ಆ ಮೂರು ಜಾವುದ ದೇವರು ಕ್ರಿ.ಶ. 1174ರ ಶಾಸನೋಕ್ತ ಕಾಳಾಮುಖ ಶಾಖೆಯ ಗುರು ಸಂಪ್ರದಾಯಕ್ಕೆ ಸೇರಿದ ಎರಡನೇ ಮೂರು ಜಾವುದ ದೇವರು ಆಗಿದ್ದಾರೆ ಎಂಬುದನ್ನು ಕೆಳಕಂಡ ಆಧಾರಗಳಿಂದ ಸಮರ್ಥಿಸ ಬಹುದಾಗಿದೆ.

ಏಕಾಂತ ರಾಮಯ್ಯನು ಜೈನರ ವಿರುದ್ಧ ಹೋರಾಡಿ ಶಿವಪಾರಮ್ಯದ ಘಟನೆಯನ್ನು ಸಾರುವ ಅಬ್ಬಲೂರು ಶಾಸನದ ಕಾಲಕ್ಕೂ, ಎರಡನೇ ಮೂರು ಜಾವುದ ದೇವರನ್ನು ಉಲ್ಲೇಖಿಸಿರುವ ರಟ್ಟಹಳ್ಳಿ ಶಾಸನದ ಕಾಲಕ್ಕೂ ಅಷ್ಟಾಗಿ ವ್ಯತ್ಯಾಸ ಕಂಡುಬರುವುದಿಲ್ಲ. ಇವರೀರ್ವರೂ ಹನ್ನೆರಡನೇ ಶತಮಾನದ ಉತ್ತರಾರ್ಧದ ಆರಂಭದ ಭಾಗದಲ್ಲಿ ಜೀವಿಸಿದ್ದರು ಎಂಬುವನ್ನು ಶಾಸನಗಳು ಸಮರ್ಥಿಸುತ್ತವೆ. ರಟ್ಟಹಳ್ಳಿ ಮತ್ತು ಅಬ್ಬಲೂರುಗಳು ನಾಗರಖಂಡ ಎಪ್ಪತ್ತರ ಪ್ರದೇಶದಲ್ಲಿಯೇ ಕಂಡು ಬರುತ್ತವೆ. ಮಹತ್ವದ ಸಂಗತಿ ಎಂದರೆ ಕಾಳಾಮುಖ ಶೈವಮತಕ್ಕೂ ಇವರೀರ್ವರಿಗೂ ಸಂಬಂಧ ಇರುವುದು. ಎರಡನೇ ಮೂರು ಜಾವುದ ದೇವರು ಕಾಳಾಮುಖಶಾಖೆಯ ಗುರುಸಂಪ್ರದಾಯಕ್ಕೆ ಸೇರಿದವರು ಎಂಬದನ್ನು ಈಗಾಗಲೇ ಗುರುತಿಸಲಾಗಿದೆ. ಏಕಾಂತ ರಾಮಯ್ಯನು ಕಾಳಾಮುಖ ಶೈವ ಶಾಖೆಗೆ ಸಂಬಂಧ ಪಟ್ಟವನು ಎಂಬುದನ್ನು ಕೆಲವು ಶಾಸನಗಳು ಸಮರ್ಥಿಸುತ್ತವೆ. ಪ್ರಾಚೀನ ಕಾಳಾಮುಖ ಯತಿಗಳಿಗೆ 'ಏಕಾನ್ತ ನಿವಾಸಿ' ಎಂಬ ವಿಶೇಷಣ ಇದ್ದಿತು ಎಂಬುದು ಆಂಧ್ರಪ್ರದೇಶದ ಆಲಂಪುರ, ಶ್ರೀಶೈಲ, ಸಂಗಮೇಶ್ವರ ಮುಂತಾದ ಸ್ಥಳಗಳಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ. ಇವು ಪ್ರಾಚೀನ ಕಾಲದಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಕರ್ನಾಟಕದ ಭಾಗಗಳಾಗಿದ್ದವು. ಕರ್ನೂಲ್ ಜಿಲ್ಲೆಯ ಸಾತಾನಿಕೋಟದಲ್ಲಿ ದೊರೆತ ಕ್ರಿ. ಶ. ಏಳನೆಯ ಶತಮಾನದ ಲಿಪಿಯುಳ್ಳದ್ದಿರುವ ಕನ್ನಡ ಶಾಸನದಲ್ಲಿ ಏಕಾನ್ತನಿವಾಸಿನ್ ಲೋಕಾಶೀಲಾಭಿಮಾನನಾದ ಗುರುಮಹೇಶ್ವರ ಕಾಳಾಮುಖ ಆಟ್ಟುವನ್ ಎಂಬುವನ ಉಲ್ಲೇಖ ಇದೆ.[15] ಏಕಾನ್ತನಿವಾಸಿ ಎಂಬ ವ್ಯಕ್ತಿಯನ್ನು ಹೆಸರಿಸುವ ಕ್ರಿ. ಶ. 9ನೇ ಶತಮಾನದ ಕನ್ನಡ ಲಿಪಿಯಲ್ಲಿರುವ ಎರಡು ಶಾಸನಗಳು ಆಲಂಪುರದಲ್ಲಿ[16] ದೊರೆತಿವೆ.

---

15. A. R. S. I. E. 1937-38. ಸಂ. B. 333.
16. A. R. I. 1954-60. ಸಂ. B. 148-149.

ರಾಮಯ್ಯನಿಗೂ ಏಕಾಂತ ವಿಶೇಷಣ ಇದ್ದುದನ್ನು ಶಾಸನ ಮತ್ತು ಕಾವ್ಯಗಳಿಂದ ತಿಳಿಯಬಹುದಾಗಿದೆ. ಏಕಾಂತ ರಾಮಯ್ಯನು ಜೈನರ ವಿರುದ್ಧ ಹೋರಾಡಿ ಶಿವ ಪಾರಮ್ಯವನ್ನು ಘೋಷಿಸಿದ ಅಬ್ಬಲೂರಿನ ಬ್ರಹ್ಮೇಶ್ವರ ದೇವಾಲಯ ಕ್ರಿ.ಶ. 1144ರ ವರೆಗೂ ಮೂವರ ಕೋಣೆಯ ಸಂತತಿಯ ಕಾಳಾಮುಖ ಗುರುಗಳ ಆಳ್ವಿಕೆಗೆ ಒಳ ಪಟ್ಟಿದ್ದಿತು ಎಂಬುದನ್ನು ಶಾಸನಗಳಿಂದ ತಿಳಿಯಬಹುದಾಗಿದೆ. ಅಬ್ಬಲೂರು ಕಾಳಾಮುಖರ ಪ್ರಸಿದ್ಧ ಕೇಂದ್ರವಾಗಿದ್ದ ಬಳ್ಳಿಗಾವೆಯ ಪರಿಸರದಲ್ಲಿಯೇ ಇರುವುದ ರಿಂದ ಏಕಾಂತರಾಮಯ್ಯನು ಆರಂಭದಲ್ಲಿ ಕಾಳಾಮುಖ ಶೈವ ಮತಕ್ಕೆ ಸೇರಿದ್ದವನು ಎಂದು ಊಹಿಸಬಹುದಾಗಿದೆ.

ಅಬ್ಬಲೂರು ಶಾಸನದಲ್ಲಾಗಲೀ, ರಟ್ಟಹಳ್ಳಿ ಶಾಸನಗಳಲ್ಲಾಗಲೀ ಮೂರು ಜಾವುದದೇವರಿಗೆ 'ಚಿಕ್ಕೇಶಯತಿ' ಎಂಬ ಹೆಸರು ಮೂಲ ಹೆಸರಾಗಿದ್ದಿತು ಎಂಬುದು ಕಂಡು ಬರುವುದಿಲ್ಲ. ಆದಾಗ್ಯೂ ಲಕ್ಷ್ಮೇಶ್ವರ ಶಾಸನವು ಪರೋಕ್ಷವಾಗಿ ಎರಡನೇ ಮೂರು ಜಾವುದದೇವರಿಗೆ ಚಿಕ್ಕೇಶ್ವರ ಎಂಬ ಹೆಸರು ಇದ್ದಿತು ಎಂಬುದನ್ನು ಉಲ್ಲೇಖಿ ಸಿರುವುದನ್ನು ಹಿಂದಾಗಲೇ ಗುರುತಿಸಲಾಗಿದೆ. 'ಮೂರು ಜಾವುದದೇವ' ಎಂಬುದು ವಿಶೇಷಣವಾಗಿದ್ದು ಆತನಿಗೆ ಮೂಲ ಹೆಸರು ಇರುವುದರ ಬಗೆಗೆ ವೀರಶೈವ ಸಾಹಿತ್ಯ ಕೃತಿಗಳಲ್ಲಿ ಉಲೇಖ ಇದೆ. ಆದರೆ ಇಲ್ಲಿಯೂ ವಿಭಿನ್ನ ರೀತಿಯ ಹೇಳಿಕೆಗಳು ಗೊಂದಲಕ್ಕೆ ಎಡೆಮಾಡಿಕೊಡುತ್ತವೆ.

ಎರಡನೇ ಮೂರು ಜಾವುದದೇವರು ಜೀವಿಸಿದ್ದ ಕಾಲಕ್ಕೆ ಸನಿಹದಲ್ಲಿದ್ದ ಪಾಲ್ಕುರಿಕೆ ಸೋಮನಾಥರ ಗಣಸಹಸ್ರನಾಮಾವಳಿಯಲ್ಲಿ ಇವರ ಉಲ್ಲೇಖ ಇದೆ. ಈ ಕೃತಿಯ ಅಥ ಅಮರಗಣ ಸಂಕೀರ್ತನಂನಲ್ಲಿಯ 1[illegible]0ನೇ ಸಾಲಿನಲ್ಲಿ ಈ ಹೆಸರು ಕಂಡು ಬರುತ್ತದೆ.[17] 'ಮೂರು ಜಾವದದೇವದ ದೇವಯ್ಯೋಮೃತ ನಾಥಾಪಯ್ಯಸ್ತಥಾ'. ಸಾನಂದ ಚರಿತ್ರೆಯಲ್ಲಿ ಶಿವಶರಣರನ್ನು ಸ್ತುತಿಸುವ ಪದ್ಯದಲ್ಲಿ ಮೂರು ಜಾವುದದೇವನ ಉಲ್ಲೇಖ ಕಂಡುಬರುತ್ತದೆ.

ಹಿರಿಯ ಮೂಱುಂ ಜಾವದೇವರು
ಬರಗು ರಾಜ ನಿರಂತ ದೇವರ[18]

ಈ ಎರಡು ಕೃತಿಗಳಲ್ಲಿ ಮೂರು ಜಾವುದದೇವರ ಉಲ್ಲೇಖ ಮಾತ್ರ ಕಂಡು ಬರುತ್ತಿದ್ದು ಜೀವನ ವೃತ್ತಾಂತದ ಬಗೆಗೆ ಉಲ್ಲೇಖ ಇಲ್ಲ. ಮೂರು ಜಾವುದದೇವರ

---

17. ಗಣಸಹಸ್ರನಾಮಾವಳಿ (ಸಂ. ಬಿ. ಶಿವಮೂರ್ತಿ ಶಾಸ್ತ್ರಿಗಳು) ಶರಣ ಸಾಹಿತ್ಯ, ಬೆಂಗಳೂರು, ಪು. 13.

18. ಸಾನಂದ ಚರಿತೆ (ಸಂ. ಎಸ್. ಬಸಪ್ಪ) ಸಂ. 9. ಪ. ಸಂ. 68.

ಚರಿತ್ರೆಯು ಬಗೆಗೆ ಸಂಕ್ಷಿಪ್ತವಾದ ವಿವರವು ಗುಬ್ಬಿ ಮಲ್ಲಣಾರ್ಯನ ವೀರಶೈವಾಮೃತ ಮಹಾಪುರಾಣದಲ್ಲಿ ಕಂಡುಬರುತ್ತಿದ್ದು ಪವಾಡಪುರುಷನನ್ನಾಗಿ ಚಿತ್ರಿಸಿದೆ.

ಈ ಕೃತಿಯ ಪ್ರಕಾರ

ಉರಿಯೊಳಗೆ ಬೆಂದ ಕೈಕಾಲ್ಗಳಂ ಪಡೆದು
ಜೈನರು ನೋಡೆ ಮೇಲಕಡರಿಸಿ ರವಿಯ ರಾಮಯನ
ಶಿರವನೊಲವಿಂ ಪಡೆದ ಮೂರು ಜಾವುದದೇವರು[19]

ಆಗಿದ್ದಾರೆ ಈ ಮೂರು ಜಾವುದದೇವರ ಮೂಲ ಹೆಸರು ಚಿಕ್ಕೇಶಯತಿ ಎಂಬುದಾಗಿ ಈ ಪುರಾಣ ಕಾವ್ಯದಲ್ಲಿ ಎಲ್ಲಿಯೂ ಕಂಡುಬರುತ್ತಿಲ್ಲವಾದರೂ ಇವರು ಏಕಾಂತ ರಾಮಯ್ಯನಿಗೆ ಶಿವಮತ ಪ್ರಸಾರ ಕಾರ್ಯದಲ್ಲಿ ಸಹಾಯ ಮಾಡಿದ ಬಗೆಗೆ ವಿವರ ಇದೆ. ಕ್ರಿ. ಶ. 1650 ರಲ್ಲಿದ್ದ ಶಾಂತನಿರಂಜನ ಅಬ್ಬಲೂರು ಚರಿತೆಯಲ್ಲಿ 'ಮೂರು ಜಾವುದ' ಹೆಸರು ಚಿಕ್ಕೇಶಯತಿಯ ಬಿರುದು ಎಂಬುದಾಗಿ ತಿಳಿದು ಬರುತ್ತದೆ. ಇಡೀ ಕಾವ್ಯದ ಉದ್ದಕ್ಕೂ ಅಲ್ಲಲ್ಲಿ ಚಿಕ್ಕೇಶಯತಿಯ ಸ್ತುತಿ ಇರುವುದನ್ನು ಕಾಣಬಹುದು. ಈ ಸಾಂಗತ್ಯ ಕೃತಿಯ ಪ್ರಕಾರ ಅಬ್ಬಲೂರಿನಲ್ಲಿ ಜೈನರು ಒಡ್ಡಿದ ಪಣವನು ಸ್ವೀಕರಿಸಿದ ಏಕಾಂತರಾಮಯ್ಯನು ಗಂಡಗತ್ತರಿಯಿಂದ ತನ್ನ ರುಂಡವನ್ನು ಕತ್ತರಿಸಿ ಕೊಂಡಮೇಲೆ ಏಕಾಂತರಾಮಯ್ಯನ ರುಂಡವನ್ನು ಹೊನ್ನ ಹರಿವಾಣದಲ್ಲಿಟ್ಟು ಶೈವ ಕ್ಷೇತ್ರಗಳನ್ನು ಸಂದರ್ಶಿಸಿ ಹೊತ್ತು ತಂದ ಅಗ್ಗಣಿಯ ಹೊನ್ನಿತಂದೆಗಳು ಅಂತರವಳ್ಳಿ ಯಲ್ಲಿದ್ದ ಪಂಚಬ್ರಹ್ಮ ಮತದ ಚಿಕ್ಕೇಶಯತಿಯನ್ನು ಕಾಣುತ್ತಾರೆ. ಅಲ್ಲಿ ರಾಮಯ್ಯನ ಪಣದ ವಿವರವನ್ನು ತಿಳಿಸಿ ಈ ದಿನ ಕೊನೆಯ ದಿನ ಅಸ್ತಂಗತನಾಗುವ ಸೂರ್ಯನನ್ನು ತಡೆದು ಈ ಕಾರ್ಯದಲ್ಲಿ ರಾಮಯ್ಯನನ್ನು ಜಯಶೀಲನಾಗುವಂತೆ ಮಾಡಬೇಕೆಂದು ಪ್ರಾರ್ಥಿಸುತ್ತಾರೆ. ಚಿಕ್ಕೇಶನು,

ಶಿವಬ್ರಾಹ್ಮೇಣೇಕಾಂತರಾಮ ಜೈನರಿಗಾದ
ವಿವರವ ಪೇಳಿ ಭಾಸ್ಕರಗೆ
ದಿವಸೇಳು ತುಂಬುಗೊಡದೆ ಮೂರು ಜಾವತೆ
ತವಕದಿ ಮರಳಿ ಬಾಯೆಂದ

ಎಂದು ಅಪ್ಪಣೆ ಮಾಡುತ್ತಾನೆ. ರಾಮಯ್ಯನು ತನ್ನ ಕಾರ್ಯದಲ್ಲಿ ಜಯಶೀಲ ನಾಗುತ್ತಾನೆ. ಜನತೆ ಚಿಕ್ಕೇಶನನ್ನು ಮೂರು ಜಾವುದದೇವ ಎಂದು ಸ್ತುತಿಸುತ್ತಾರೆ. ಅಂದಿನಿಂದ ಚಿಕ್ಕೇಶಯತಿಗೆ ಮೂರು ಜಾವುದದೇವ ಎಂಬ ಪರ್ಯಾಯ ಹೆಸರು ಲಭಿಸುತ್ತದೆ. ಏಕಾಂತರಾಮ್ಮನ ವೀರಮಾಹೇಶ್ವರ ನಿಷ್ಠೆಯನ್ನು ಕಂಡು ಬಿಜ್ಜಳನು ಅಬ್ಬಲೂರು, ಧೂಪದಹಳ್ಳಿ, ನೂಲಿಗೇರಿ ಭೋಗಾವಿ ಊರುಗಳನ್ನು ರಾಮಯ್ಯನಿಗೆ

19. ವೀರಶೈವಾಮೃತ ಮಹಾಪುರಾಣ (ಸಂ. ಎಸ್. ಶಿವಪ್ಪಶಾಸ್ತ್ರಿ) ಹಾಂ. 8. ಸಂ. 4. ಪ. ಸಂ. 31.

ದತ್ತಿ ಕೊಟ್ಟಹಾಗೆ ರಾಮಯ್ಯನ ಮತಪ್ರಸಾರ ಕ್ರಿಯೆಗೆ ಸಹಾಯ ಮಾಡಿದ ಚಿಕ್ಕೇಶ ಯತಿಗೂ ಸಹ ಬಿಜ್ಜಳನು ಅಂತರವಳ್ಳಿ ಆಲದಕಟ್ಟಿ, ಸುಂಕಾಪುರದ ಅಂತ್ಯದಲಿಹ ಗ್ರಾಮ ಮಾಗೋಡು, ನಿಟ್ಟೂರುಗಳನ್ನು ದತ್ತಿಯಾಗಿ ಪಡೆಯುತ್ತಾನೆ ಎಂಬ ವಿವರ ಶಾಂತ ನಿರಂಜನನ ಅಬ್ಬಲೂರು ಚರಿತ್ರೆಯಿಂದ ವ್ಯಕ್ತಪಟ್ಟರೂ ವಿರಕ್ತ ತೋಂಟ ದಾರ್ಯನ ಸಿದ್ದೇಶ್ವರ ಪುರಾಣದಲ್ಲಿಯ ವಿವರವು ಸಂದೇಹಕ್ಕೆ ಎಡೆಮಾಡಿಕೊಡುತ್ತದೆ.

ಈ ಕೃತಿಯಲ್ಲಿಯ

... .ಅಗ್ಗಣಿಯ ದೇವರಸರೊಲವಿಂದ
ಮನಸಿಜಾರಿಯ ನುತಿಸಿ ಪಡುಗಡಲೊಳಿಳಿಯುತಿಹ
ದಿನಕರನ ಮೂರುಜಾವದ ತಾಣ ಪಡರೆಂದು ಪೇಳಿದಾ ಮಾತುಗೇಳ್ದು
ತನು ಕಂಪಿಸುತ್ತಿಮಂ ವೀರಭದ್ರನೇ ಬಳಿಕ್ಕನ
ಘನಹ ಸೂರ್ಯಪಾತನ ಗಣೇಶನೋ ಎನು
ತ್ತನುವಿನಿಂದಂಜಿ ಮೇಲದೆ ಮುಗಳ್ದಿಳಿ ರವಿ ಮೂರು ಜಾವದ ತಾಣಕೆ
ಬಂದುನಿಲೆಯಗ್ಗಳಿಯ ದೇವರಸರಿಗೆ ನಾಮ
ವಂದಿಂದ ಮೂರು ಜಾವದೇವರೆಂದಾಯ್ತು[20]...

ಎಂಬ ವಿವರದಿಂದ ಅಗ್ಗಳಿಯ ದೇವರಸರಿಗೆ ಮೂರು ಜಾವುದದೇವ ಎಂಬ ಹೆಸರು ಬಂದಿತೆಂದು ತಿಳಿಯುತ್ತದೆ. ಇದರಿಂದಾಗಿ ಚಿಕ್ಕೇಶಯತಿಯ ಮತ್ತೊಂದು ಹೆಸರು ಅಗ್ಗಳಿಯ ದೇವರಸ ಎಂಬ ಹೆಸರು ಆಗಿರಬಹುದೇ ? ಎಂಬ ಅನುಮಾನ ಉಂಟಾದರೂ ಮೂರು ಜಾವುದದೇವ ಮತ್ತು ಅಗ್ಗಳಿಯ ದೇವರಸರು ಇಬ್ಬರೂ ಬೇರೆ ಬೇರೆ ವ್ಯಕ್ತಿಗಳು ಎಂಬುದಕ್ಕೆ ಕೆರೆಯ ಪದ್ಮರಸರ ಸಾನಂದ ಚರಿತೆಯಲ್ಲಿ ಖಚಿತ ಆಧಾರ ಇದೆ. ಸಾನಂದ ಚರಿತೆಯ ಕಾಲ ಹದಿಮೂರನೇ ಶತಮಾನದ ಮೂರು ಜಾವುದದೇವರು ಜೀವಿಸಿದ್ದ ಕಾಲಕ್ಕೆ ಸನಿಹದಲ್ಲಿ ರಚಿತವಾದ ಕೃತಿಯಾಗಿದೆ.

ಈ ಕೃತಿಯು ಮೊದಲು ಮೂರು ಜಾವುದದೇವರನ್ನು ಉಲ್ಲೇಖಿಸಿ ನಂತರ ಅಗ್ಗಣಿಯ ಹೊನ್ನಯ್ಯ, ನೇಮದ ಅಗ್ಗಣಿಯ ಹಂಪಯ್ಯ ಮುಂತಾದವರ ಜೊತೆ ಅಗ್ಗಳಿಯ ದೇವರಸರನ್ನು ಉಲ್ಲೇಖಿಸಿದೆ.[21] ಇದರಿಂದಾಗಿ ಇವರೀರ್ವರೂ ಬೇರೆ ಬೇರೆ ಎಂದು ಹೇಳಬಹುದು. ಪೂರಕ ಸಂಗತಿ ಎಂದರೆ ಹರಿಹರನ ಏಕಾಂತರಾಮಿ ತಂದೆ ರಗಳೆಯಲ್ಲಿ ಅಗ್ಗಳಿಯ ದೇವರಸನ ಉಲ್ಲೇಖ ಇದ್ದು ಆತನು ರಾಮಯ್ಯನಿಗೆ ಮಾಡಿದ ಸಹಾಯವನ್ನು ವರ್ಣಿಸಿಲ್ಲ. ಏಕಾಂತ ರಾಮಯ್ಯನಿಗೆ ಶಿವಮತ ಪ್ರಸಾರ ಕಾರ್ಯದಲ್ಲಿ ಸಹಾಯ ಮಾಡಿದ ಮೂರು ಜಾವುದದೇವರು ಅಂತರವಳ್ಳಿಯವನು

20 ವಿರಕ್ತ ತೋಂಟದಾರ್ಯನ ಸಿದ್ಧೇಶ್ವರ ಪುರಾಣ (ಸಂ॥ ವೈ. ನಾಗೇಶ ಶಾಸ್ತ್ರಿಗಳು) ಸಂ. 7. ಪು. ಸಂ. 51-52.

21 ಸಾನಂದ ಚರಿತೆ (ಸಂ॥ ಎಸ್. ಬಸಪ್ಪ) ಸಂ. 9. ಪ. ಸಂ. 68 ಮತ್ತು 71.

ಎಂದೂ, ವಿಶ್ವಕರ್ಮ ಬ್ರಾಹ್ಮಣ ವಂಶಾಬ್ಧಿ ಚಂದ್ರಮನು, ಕಂತುಹರನ ಮತದವರ ಸಂತತಿಯ ಕಾಯ್ದುವನು ಎಂದೂ, ರೂಢಚಾರ್ಯ ಎಂಬ ಪರ್ಯಾಯ ಹೆಸರನ್ನು ಹೊಂದಿದವನು ಎಂಬ ವಿವರ ಅಬ್ಬಲೂರು ಚರಿತ್ರೆಯಿಂದ ತಿಳಿದುಬರುತ್ತದೆ. ಅಂತರ ವಳ್ಳಿಯಲ್ಲಿ ಮೂರುಜಾವುದ ದೇವರ ಮೂರ್ತಿಯು ಕಂಡು ಬರುತ್ತದೆ. ಇಂದಿಗೂ ವಿಶ್ವಕರ್ಮದ ಸಮುದಾಯದವರು ಈ ಮೂರು ಜಾವುದ ದೇವರನ್ನೇ ತನ್ನ ವಂಶದ ಮೂಲ ಪುರುಷನೆಂದು ಭಾವಿಸಿ ಉತ್ತರ ಕರ್ನಾಟಕದ ವಿವಿದೆಡೆಗಳಲ್ಲಿ ಮೂರು ಜಾವುದ ದೇವರ ಹೆಸರಿನ ಮಠಗಳನ್ನು ಸ್ಥಾಪಿಸಿಕೊಂಡಿದ್ದಾರೆ. ಅವುಗಳಲ್ಲಿ ಗಮನೀಯ ವಾದವುಗಳೆಂದರೆ ವಿಜಾಪುರ ಶ್ರೀಮೂರು ಜಾವಧೀಶ್ವರ ಸಂಘ, ವಿಜಾಪುರ ಜಿಲ್ಲೆಯ ಗುಂಡ ಬಾವಡಿಯ ಮೂರು ಜಾವುದ ಮಠ. ಸಿಂದಗಿ ತಾಲ್ಲೋಕಿನ ಬಂಟನೂರಿನ ಮೂರು ಜಾವುದ ಮಠ, ಅಫಜಲ್‌ಪುರದ ಮೂರುಜಾವುದ ಮಠ, ಬೀಳಗಿಯ ಮೂರು ಜಾವುದ ಮಠ, ಬರಡೋಲದ ಮೂರುಜಾವುದ ಮಠ.

ಗ್ರಂಥ ಋಣ

1 South Indian Inscription Vol. No- 1 - 1. xx.

2 Karnataka Inscription Vol No. IV.V.VI.

3 Summaries of Inscription Kannada Research Institute. (1943-44 to 1949-50) Karnataka University Dharwar. 1966.

4 ಧಾರವಾಡ ಜಿಲ್ಲಾ ಶಾಸನಸೂಚಿ (ಸಂ॥ ಎಂ. ಎಂ. ಕಲಬುರ್ಗಿ) ಕರ್ನಾಟಕ ವಿಶ್ವ ವಿದ್ಯಾಲಯ. ಧಾರವಾಡ, 1975

5 ಗಣಸಹಸ್ರ ನಾಮಾವಳಿ (ಸಂ॥ ಬಿ. ಶಿವಮೂರ್ತಿ ಶಾಸ್ತ್ರಿ) ಶರಣಸಾಹಿತ್ಯ, ಬೆಂಗಳೂರು. 1975

6 ಶಾಸನದ ಚರಿತ್ರೆ (ಸಂ॥ ಎಸ್. ಬಸಪ್ಪ) ಮೈಸೂರು ವಿಶ್ವವಿದ್ಯಾಲಯ. ಮೈಸೂರು 1980

7 ಅಬ್ಬಲೂರು 'ಚರಿತ್ರೆ (ಸಂ॥ ಎಸ್. ಬಸವಾರಾಧ್ಯ) ಮೈಸೂರು ವಿಶ್ವವಿದ್ಯಾಲಯ ಮೈಸೂರು 1973

8 ಮೂರು ಜಾವಿದೇವರ ಚರಿತ್ರೆ. ವಿ. ಜಿ. ದೀಕ್ಷಿತ ಮತ್ತು ಜಿ. ಜ್ಞಾನಾನಂದ ಸಂಸ್ಕೃತಿ ಸಾಹಿತ್ಯ ಪ್ರಸಾರ ಸಮಿತಿ ಕೆ. ಜಿ. ಎಫ್. 1992

ಇನ್‌ಫ್ಲಿಬ್‌ನೆಟ್ (INFLIBNET) ಗ್ರಂಥಾಲಯ ಮತ್ತು ಮಾಹಿತಿ ಜಾಲ

ಉಮಾ ಜಗನ್ನಾಥ್

ಸಾರಾಂಶ

ಅವಿರತವಾಗಿ ಮಿಂಚಿನ ವೇಗದಲ್ಲಿ ಬೆಳೆಯುತ್ತಿರುವ ಅಗಾಧವಾದ ಜ್ಞಾನ ಸಂಪತ್ತನ್ನು ಒಂದು ಕಡೆ ಹಿಡಿದಿಟ್ಟು ಜ್ಞಾನಾರ್ಥಿಗಳಿಗೆ, ಅವರು ಕೆಲಸ ಮಾಡುವ ಸ್ಥಳದಲ್ಲಿಯೇ ಗಣಕಯಂತ್ರಗಳ ಮೂಲಕ ಸಂಪೂರ್ಣ ಮಾಹಿತಿಯನ್ನು ಸರಿಯಾದ ಸಮಯದಲ್ಲಿ ಸಮಗ್ರವಾಗಿ ಒದಗಿಸಿ ದೇಶದ ಜ್ಞಾನ ಸಂಪತ್ತು ಮತ್ತು ಆರ್ಥಿಕ ಸಂಪತ್ತಿನ ಬೆಳವಣಿಗೆಗಾಗಿ ಹಗಲಿರುಳೂ ಶ್ರಮಿಸುತ್ತಿರುವ 'INFLIBNET' ಎಂಬ 'ಮಾಹಿತಿ ಮತ್ತು ಗ್ರಂಥಾಲಯಗಳ ಜಾಲ'ದ ರಚನೆಯನ್ನು ಇಲ್ಲಿ ವಿವರಿಸಲಾಗಿದೆ. ಇದು ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಒಂದು ಬೃಹತ್ ಯೋಜನೆ. ಈ ಯೋಜನೆಯ ಹಿನ್ನೆಲೆ, ಅವಶ್ಯಕತೆ ಮತ್ತು ಕಾರ್ಯ ಹಾಗೂ ಚಟುವಟಿಕೆಗಳ ಪರಿಚಯಿಸುವ ಪ್ರಯತ್ನ ಈ ಲೇಖನ.

INFLIBNET ನ ಬೆಳವಣಿಗೆ

ರಾಜ್ಯದ ಎಲ್ಲಾ ವಿಶ್ವವಿದ್ಯಾಲಯ ಮತ್ತು ಗ್ರಂಥ ಭಂಡಾರಗಳನ್ನು ಒಟ್ಟುಗೂಡಿಸುವ ಒಂದು ರಾಷ್ಟ್ರೀಯ ಜಾಲವನ್ನು ರಚಿಸುವ ಸಲುವಾಗಿ 1988 ರಲ್ಲಿ ವಿಶ್ವವಿದ್ಯಾಲಯ ಧನಸಹಾಯ ಆಯೋಗ (UGC) ಒಂದು ಸಮಿತಿಯನ್ನು ನಿಯೋಜಿಸಿತು. ಈ ರಾಷ್ಟ್ರೀಯ ಜಾಲದ ಮುಖ್ಯೋದ್ದೇಶ ರಾಷ್ಟ್ರದ ಎಲ್ಲಾ ಗ್ರಂಥ ಭಂಡಾರಗಳ ಸದುಪಯೋಗ ಸರ್ವರಿಗೂ ಲಭಿಸುವಂತಾಗುವುದು. UGC ಯ ಆಗಿನ ಅಧ್ಯಕ್ಷರಾದ ಪ್ರೊ. ಯಶಪಾಲ್ ಅವರು ಈ ಮಾಹಿತಿ ಜಾಲದ ಮೊದಲ ಅಧ್ಯಕ್ಷರು.

ಈ ಸಮಿತಿಯ ಮೊದಲ ಸಭೆ ಏಪ್ರಿಲ್, 22, 1988 ರಂದು ಸೇರಿ ಶ್ರೀಯುತರಾದ ಪ್ರೊ. ಯಶಪಾಲ್, ಅಂದಿನ ಪ್ರಧಾನ ಮಂತ್ರಿಗಳ ದೂರಸಂಪರ್ಕ ಮತ್ತು ಎಲೆಕ್ಟ್ರಾನಿಕ್ ಸಲಹೆಗಾರರಾದ ಡಾ॥ ಸ್ಯಾಮ್ ಪಿಟ್ರೋಡ, ಡಾ॥ ಎನ್. ಶೇಷಗಿರಿ, NIC Director General ಮತ್ತು ಇತರೇ ಶೈಕ್ಷಣಿಕ, ಎಲೆಕ್ಟ್ರಾನಿಕ್

ಮತ್ತು ರಾಷ್ಟ್ರದ ಸಂಪನ್ಮೂಲ ಗ್ರಂಥಾಲಯ ವಿಭಾಗಗಳ ಮುಖ್ಯಸ್ಥರುಗಳು ಈ ಜಾಲದ ರೂಪರೇಷೆಯನ್ನು ಸಿದ್ಧಪಡಿಸಿದರು. ಈ ನಿಟ್ಟಿನಲ್ಲಿ ಜಾಲದ ಕಾರ್ಯ ನಿರ್ವಹಣೆಗಾಗಿ ಒಂದು ಕಾರ್ಯಕಾರಿ ಸಮಿತಿಯನ್ನು ರಚಿಸಿ, ಈ ಕೆಳಕಂಡ ಸದಸ್ಯರುಗಳನ್ನು ಸಲಹೆಗಾರರನ್ನಾಗಿ ನೇಮಿಸಿತು.

1 ಡಾ|| ಟಿ. ಬಿ. ರಾಜಶೇಖರ್
ವೈಜ್ಞಾನಿಕ ಅಧಿಕಾರಿ
ರಾಷ್ಟ್ರೀಯ ವಿಜ್ಞಾನ ಮಾಹಿತಿ ಕೇಂದ್ರ
ಭಾರತೀಯ ವಿಜ್ಞಾನ ಮಂದಿರ
ಬೆಂಗಳೂರು–560 012

2 ಶ್ರೀ ಎನ್. ಎಮ್. ಮಲ್‌ವಾಡ್
ಗ್ರಂಥಪಾಲಕರು
ಭಾರತೀಯ ವಿಜ್ಞಾನ ಮಂದಿರ
ಬೆಂಗಳೂರು-560 012

3 ಶ್ರೀ ಎಮ್. ಕೆ. ಆರ್. ನಾಯ್ಡು
ಗ್ರಂಥಪಾಲಕರು
ಎಸ್.ಎನ್.ಡಿ.ಟಿ.
ಮಹಿಳಾ ವಿಶ್ವವಿದ್ಯಾನಿಲಯ
ಬೊಂಬಾಯಿ-400 020

4 ಡಾ|| ಟಿ. ಎ. ವಿ. ಮೂರ್ತಿ
ಗ್ರಂಥಪಾಲಕರು
ಹೈದರಾಬಾದ್ ವಿಶ್ವವಿದ್ಯಾನಿಲಯ
ಹೈದರಾಬಾದ್–500 134

5 ಡಾ|| ಎಸ್. ರಮಣಿ
ನಿರ್ದೇಶಕರು
ಎನ್.ಸಿ.ಎಸ್.ಟಿ.
ಬೊಂಬಾಯಿ-400 049

6 ಶ್ರೀ ಕೆ. ಗುಣಶೇಖರನ್
ಶಿಕ್ಷಣ ಅಧಿಕಾರಿ
U.G.C.
ನವದೆಹಲಿ-110 002

ಮತ್ತು ಇತರರು

ಸಮಿತಿಯ ಕಾರ್ಯ ಚಟುವಟಿಕೆಗಳು

ಈ ರಾಷ್ಟ್ರೀಯ ಯೋಜನೆಯ ಆದೇಶದಂತೆ, ಕಾರ್ಯಕಾರಿ ಸಮಿತಿಯ ಸದಸ್ಯರುಗಳು ಮಾಹಿತಿಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಆ ಮಾಹಿತಿಗಳೆಂದರೆ,

1 ದೇಶದ ಯಾವ ಯಾವ ಗ್ರಂಥಾಲಯಗಳು ಗಣಕಯಂತ್ರಗಳನ್ನು ಬಳಸುತ್ತಿವೆ.

2 ಮಾಹಿತಿ ಜಾಲದ ನಕ್ಷೆಯ ತಯಾರಿಕೆ.

3 ಕಾರ್ಯ ನಿರ್ವಹಣೆಗಾಗಿ ಬೇಕಾದ ಆರ್ಥಿಕ ಮತ್ತು ಸಿಬ್ಬಂದಿ ವರ್ಗದ ಅಂಕಿ, ಅಂಶ.

4 ಮಾಹಿತಿ ಜಾಲಕ್ಕೆ ಬೇಕಾಗುವ Hardware ಮತ್ತು Software ಗಳ ಅಗತ್ಯ.

ಈ ಜಾಲ ರಾಷ್ಟ್ರಕ್ಕೇ ಸೀಮಿತವಾಗದೆ, ಮುಂದೆ ವಿಶ್ವಜಾಲಕ್ಕೂ ವಿಸ್ತರಿಸುವ ಸಾಧ್ಯಾ ಸಾಧ್ಯತೆಗಳನ್ನು ಪರಿಗಣಿಸಲಾಗುವುದು. ಈ ಯೋಜನೆಗೆ ಸುಮಾರು 200 ಕೋಟಿ ರೂ.ಗಳ ವೆಚ್ಚದ ಅಂದಾಜು ಮಾಡಲಾಗಿದೆ. ಈಗಾಗಲೇ ಮೊದಲನೇ ಕಂತಾಗಿ 25 ಕೋಟಿ ರೂ.ಗಳ ಬಿಡುಗಡೆಯಾಗಿ ಯೋಜನೆ ಕಾರ್ಯರೂಪಕ್ಕೆ ಬಂದಿದೆ.

ಗಣಕಯಂತ್ರ ಜಾಲ (Computer Network) ಎಂದರೇನು ?


ಮಾಹಿತಿಗಳ ಸಮರ್ಪಕ ಬಳಕೆಯ ಸಂಯೋಜನೆಗೆ ಗಣಕಯಂತ್ರವನ್ನು ಅಳವಡಿಸುವ ತಂತ್ರವೇ ಗಣಕಯಂತ್ರ ಜಾಲ, ಇಂಥ ಜಾಲಗಳನ್ನು ಭೌಗೋಳಿಕ ಪ್ರದೇಶ ವ್ಯಾಪ್ತಿಗೆ ಅನುಗುಣವಾಗಿ ಕಲ್ಪಿಸಬಹುದು :—

(1) WAN (Wider Area Network) : ಅಂತರ್ ದೇಶೀಯ ಮತ್ತು ಅಂತರ್ ರಾಜ್ಯಗಳ ನಡುವೆ ಸಂಪರ್ಕ ಜೋಡಣೆ. ಇದನ್ನು ಅತಿ ದೂರಸಂಪರ್ಕ ಜಾಲವೆನ್ನಬಹುದು.

(2) MAN (Metropolitan Area Network) : ದೇಶೀಯ ಮತ್ತು ರಾಜ್ಯದ ಮುಖ್ಯ ಪಟ್ಟಣಗಳ ನಡುವಿನ ಸಂಪರ್ಕ.

(3) LAN (Local Area Network) : ಸ್ಥಳೀಯ ಮತ್ತು ಸಂಸ್ಥೆಯ ಇತರೇ ವಿಭಾಗಗಳ ನಡುವೆ ಸಂಪರ್ಕ.

LAN, MAN ಮತ್ತು WAN ಗಳನ್ನು ಒಂದಕ್ಕೊಂದು ಜೋಡಿಸಿ ವಿಶ್ವ ಜಾಲವನ್ನೇ ಸೃಷ್ಟಿಸಬಹುದು.



ವಿಶಾಲವಾದ ಭಾರತ ದೇಶವು ನಗರಗಳಿಗಿಂತ ಹೆಚ್ಚಾಗಿ ಹಳ್ಳಿಗಳಿಂದ ಕೂಡಿದೆ. ನಗರದಿಂದ ನಗರಕ್ಕೆ ದೂರಸಂಪರ್ಕ Cable ಗಳ ಮೂಲಕ ಸಂಪರ್ಕವನ್ನು ಕಲ್ಪಿಸುವುದು ಸುಲಭ ಸಾಧ್ಯವಾಗಿದೆ. ಆದರೆ ನೂರಾರು ನದಿ ಬೆಟ್ಟಗಳನ್ನು ಹೊಂದಿರುವ ನಮ್ಮ ದೇಶದ ಮೂಲೆ ಮೂಲೆಯಲ್ಲಿರುವ ದುರ್ಗಮ ಪ್ರದೇಶಗಳನ್ನು

ಸರಿಯಾದ ಕಾಲಕ್ಕೆ ಸಂಪರ್ಕಿಸುವುದು ಕಷ್ಟಸಾಧ್ಯವಾಗಿದೆ. ಹಾಗೂ, ನೈಸರ್ಗಿಕ ಹಾವಳಿಯಿಂದಾಗಿ ನಮ್ಮ ದೂರಸಂಪರ್ಕವು ಸಮರ್ಪಕವಾಗಿ ಕೆಲಸ ಮಾಡಲು ಅಡಚಣೆವುಂಟಾಗುತ್ತದೆ.

1983 ರಿಂದೀಚೆಗೆ ಭಾರತದಲ್ಲಿ ಬಾಹ್ಯಾಕಾಶ ಆಯೋಗವು ಬಹು ಉಪಯೋಗಿ ಉಪಗ್ರಹ ಇನ್‌ಸ್ಯಾಟ್‌ಗಳ ಮೂಲಕ ದೂರ ಸಂಪರ್ಕ ಕಲ್ಪಿಸುವುದರಲ್ಲಿ ಯಶಸ್ವಿಯಾಗಿದೆ. ಈ ಇನ್‌ಸ್ಯಾಟ್‌ಗಳು ನೈಸರ್ಗಿಕ ವೈಪರೀತ್ಯದಲ್ಲಿಯೂ ಸಮರ್ಪಕವಾಗಿ ಕೆಲಸ ಮಾಡಬಲ್ಲವು. ಈ ಇನ್‌ಸ್ಯಾಟ್‌ನ ಉಪಯೋಗದಿಂದ ದುರ್ಗಮ ಪ್ರದೇಶಗಳಿಗೂ ಮತ್ತು ಮೂಲೆ ಮೂಲೆಯಲ್ಲಿರುವ ಹಳ್ಳಿಗಳಿಗೂ ಕೂಡ ಮಾಹಿತಿ ವರ್ಗಾವಣೆಗೆ ಅಗತ್ಯವಾದ ಗಣಕಯಂತ್ರಗಳ ಜೋಡಣೆ ಇನ್‌ಫ್ಲಿಬ್‌ನೆಟ್‌ಗೆ ಸಾಧ್ಯವಾಗಿದೆ.

ಇನ್‌ಫ್ಲಿಬ್‌ನೆಟ್ ನ ನಕ್ಷೆಯು, ಗ್ರಂಥಾಲಯಗಳಿರುವ ಪ್ರದೇಶಗಳನ್ನು ಅವಲಂಬಿಸಿರುತ್ತದೆ. ದೊಡ್ಡ ದೊಡ್ಡ ನಗರಗಳ ಗ್ರಂಥಾಲಯಗಳಿಗೆ Cable ಗಳ ಮೂಲಕ ಜಾಲವನ್ನು ಏರ್ಪಡಿಸಲಾಗುವುದು. ಏಕೆಂದರೆ ಈ ನಗರ ಪ್ರದೇಶಗಳಲ್ಲಿ ದೂರ ಸಂಪರ್ಕ ವ್ಯವಸ್ಥೆ ಸಮರ್ಪಕವಾಗಿದೆ. ಹಿಮಾಲಯದ ತಪ್ಪಲುಗಳಲ್ಲಿ ಇರುವ ವಿಶ್ವವಿದ್ಯಾನಿಲಯಗಳ ಮತ್ತು ಮೂಲೆ ಮೂಲೆಯಲ್ಲಿರುವ ಪಳ್ಳಿಗಳ ಗ್ರಂಥಾಲಯಗಳಿಗೆ ಇನ್‌ಸ್ಯಾಟ್ ಉಪಗ್ರಹದ ಬಳಕೆಯಿಂದ ಜಾಲವನ್ನು ಕಲ್ಪಿಸಲಾಗುವುದು.

ಗ್ರಂಥಾಲಯ ಮತ್ತು ಮಾಹಿತಿ ಜಾಲ

ನಮ್ಮ ಗ್ರಂಥಾಲಯಗಳು ಭವಿಷ್ಯದಲ್ಲಿ ಹೇಗಿರಬೇಕು ?

ಕಂಪ್ಯೂಟರ್, ಟಿ.ವಿ. ಮಾನಿಟರ್, ವೀಡಿಯೋ, CD-Rom ಡಿಸ್ಕ್ ಡ್ರೈವ್, ಲೇಸರ್ ಪ್ರಿಂಟರ್, ವೀಡಿಯೋ ಪ್ರಿಂಟರ್‌ಗಳನ್ನು ಹೊಂದಿ, ವೀಡಿಯೋ ಮತ್ತು ಚಲನ ಚಿತ್ರ ಮಾಧ್ಯಮಗಳಿಗೆ ಆಕರ್ಷಿತರಾಗಿರುವ ಇಂದಿನ ಜನಾಂಗ ಮುಂದಿನ ಗ್ರಂಥಾಲಯವನ್ನು ಆಸಕ್ತಿಯಿಂದ ಬಳಸುವಂತಾಗಬೇಕು. ಗ್ರಂಥಪಾಲಕರ ಇಂತಹ ಕನಸಿನ ಆಕರ್ಷಣೀಯ ಗ್ರಂಥಾಲಯದ ಕೂಸೇ "ಮಾಹಿತಿ ಜಾಲ".

ಅಭಿವೃದ್ಧಿ ಶೀಲ, ಪ್ರಬಲ ರಾಷ್ಟ್ರಗಳೊಡನೆ ಸರಿಸಮನಾಗಿ ತಾವೂ ತಲೆ ಎತ್ತಿ ನಿಲ್ಲಬೇಕೆಂಬ ಉತ್ಕಟೇಚ್ಛೆಯಿಂದಾಗಿ, ಇಂದು ರಾಷ್ಟ್ರಗಳ ನಡುವೆ ಸ್ಪರ್ಧಾತ್ಮಕ ಪೈಪೋಟಿಗಳು ನಡೆಯುತ್ತಿವೆ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಇಂತಹ ಪೈಪೋಟಿಗಳು ಆಧುನಿಕತೆಯ ಮುಖ್ಯ ಲಕ್ಷಣವೇ ಅಲ್ಲದೇ ಪ್ರಗತಿಯ ಸೂಚಕವೂ ಆಗಿದೆ. ಈ ಸೆಣಸಾಟದಲ್ಲಿ ಹೊಸ ಹೊಸ ವೈಜ್ಞಾನಿಕ ಸಂಗತಿಗಳ ಆವಿಷ್ಕಾರ, ಅತ್ಯುನ್ನತ ಮಟ್ಟದ ತಾಂತ್ರಿಕ ಪ್ರಗತಿ, ಅಪಾರವಾದ ಜ್ಞಾನ ಸಂಪತ್ತು, ಅತ್ಯದ್ಭುತ ಮಾಹಿತಿ ಮುಂತಾದವು ಅವಿರತವಾಗಿ ಮಿಂಚಿನ ವೇಗದಲ್ಲಿ ಬೆಳೆಯುತ್ತಿವೆ. ಅಪಾರವಾಗಿ

ಬೆಳೆಯುತ್ತಿರುವ ಈ ಅಗಾಧವಾದ ಜ್ಞಾನ ಸಂಪತ್ತನ್ನು ಮಾನವ ತನ್ನ ಕೈಗೆಟುಕುವಂತೆ ಮಾಡಿಕೊಳ್ಳಲು ಜೀವನ ಪರ್ಯಂತ ಶ್ರಮಿಸಿದರೂ ಸಾಧ್ಯವಿಲ್ಲ. ವಿಶಿಷ್ಟವಾದ ಜ್ಞಾನ ಕ್ಷೇತ್ರದಲ್ಲಿ, ಎಲ್ಲಾ ಮಾಹಿತಿಗಳನ್ನು ಅವಲೋಕಿಸಿ, ಅವುಗಳ ಹೊಸ ಹೊಸ ಆಯಾಮಗಳನ್ನೂ ಜಗತ್ತಿನೆಲ್ಲೆಡೆ ಪ್ರಕಟವಾಗಿರುವ ಅವನಿಗೆ ಬೇಕಾದ ಮಾಹಿತಿಗಳು, ಎಷ್ಟೇ ಶ್ರಮಪಟ್ಟರೂ ಸಂಪೂರ್ಣವಾಗಿ ದೊರೆಯುವ ಭರವಸೆ ಇಲ್ಲ.

ಸಂಪೂರ್ಣ ಮಾಹಿತಿಗಳ ತಿಳಿವಳಿಕೆಯ ಅಭಾವದಿಂದಾಗಿ ಒಂದೇ ವಿಷಯದ ಪುನಾರಾವೃತ್ತಿ ಸಂಶೋಧನೆಗಳು ನಡೆಯುವ ಸಾಧ್ಯತೆಯೂ ಇದೆ. ಇತ್ತೀಚಿನ ಸಂಶೋಧನೆಯ ಅರಿವಿನ ಕೊರತೆಯೇ ಇಂಥಹ ಪ್ರಮಾದಗಳಿಗೆ ಎಡೆ ಮಾಡಿಕೊಡುತ್ತವೆ. ಇದರಿಂದ ಕಾಲ ಮತ್ತು ಹಣ ಎರಡೂ ಪೋಲಾಗುವುದಲ್ಲದೇ, ದೇಶದ ಆರ್ಥಿಕ ನಷ್ಟಕ್ಕೂ ದಾರಿಯಾಗುತ್ತದೆ. ಸಮಯ ಮತ್ತು ಹಣದ ಸದುಪಯೋಗಕ್ಕಾಗಿಯೇ 'ಮಾಹಿತಿ' ಸಂಗ್ರಹಣೆಯ ಕಾರ್ಯ ಅತ್ಯವಶ್ಯಕವಾಗಿ ನಡೆಯಬೇಕಾಗಿದೆ, ರಾಷ್ಟ್ರದ ಅಭಿವೃದ್ಧಿಯು ಇಂತಹ ಕಾರ್ಯದ ಮೇಲೆ ಅವಲಂಬಿತವಾಗಿದೆ ಎಂದರೆ ತಪ್ಪಾಗಲಾರದು.

ವಿಶ್ವವಿದ್ಯಾಲಯಗಳು, ವೈಜ್ಞಾನಿಕ ಮತ್ತು ತಾಂತ್ರಿಕ ಸಂಶೋಧನಾ ಕೇಂದ್ರಗಳು, ನಿಯತಕಾಲಿಕೆಗಳಿಗೆ ಚಂದಾದಾರರಾಗಿ ತಮ್ಮ ಸಂಶೋಧಕರಿಗೆ ಮಾಹಿತಿಗಳನ್ನು ಒದಗಿಸಿ ಕೊಡಲು ಪ್ರಯತ್ನಿಸುತ್ತವೆ. ಆದರೆ ಯಾವುದೇ ಸಂಸ್ಥೆಗೂ ವಿಶ್ವದ ಎಲ್ಲಾ ನಿಯತ ಕಾಲಿಕಗಳನ್ನು ಮತ್ತು ಪುಸ್ತಕಗಳನ್ನು ಕೊಳ್ಳಲು ಸಾಧ್ಯವಿಲ್ಲ. ಇದಲ್ಲದೇ ಚಂದಾದರಗಳೂ (Subscription rates) ದಿನದಿಂದ ದಿನಕ್ಕೆ ಹೆಚ್ಚುತ್ತಾಹೋಗುತ್ತಿವೆ. ಹೊರ ದೇಶಗಳಲ್ಲಿ ಪ್ರಕಟವಾಗುವ ನಿಯತಕಾಲಿಕಗಳು ಕಡಲಂಚೆಯ ಮೂಲಕ ನಮಗೆ ತಲುಪುವ ವೇಳೆಗೆ ಆದರಲ್ಲಿನ ಮಾಹಿತಿಗಳು ಹಳತಾಗುತ್ತವೆ, ಇಲ್ಲವಾಯು ಮಾರ್ಗದಲ್ಲಿ ತರಿಸಿಕೊಳ್ಳಲು ದುಬಾರಿಯಾಗುತ್ತದೆ.

ಭಾರತದಲ್ಲಿ ಕೇವಲ ಕೆಲವೇ ಸಂಸ್ಥೆಗಳು ಸಂಪದ್ಯುಕ್ತ ಗ್ರಂಥಾಲಯಗಳನ್ನು ಹೊಂದಿವೆ. ಇಂದಿನ ದುಬಾರಿ ವೆಚ್ಚದಿಂದಾಗಿ ಈ ಸಂಸ್ಥೆಗಳೂ, ನಿಯತಕಾಲಿಕೆಗಳನ್ನು ಮುಂದುವರಿಸಲು ಹೆಣಗಾಡುತ್ತಿವೆ. ಇದರಿಂದಾಗಿ ನಮ್ಮ ದೇಶದ ಸುಮಾರು 4 ದಶ ಲಕ್ಷಕ್ಕೂ ಹೆಚ್ಚಿನ ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ, ಸುಮಾರು 3 ಲಕ್ಷ ಅಧ್ಯಾಪಕರುಗಳಿಗೆ ಹೊಸ ಹೊಸ ಮಾಹಿತಿಗಳ ವಿವರಣೆಗಳು ದುರ್ಲಭವಾಗುತ್ತಿವೆ. ಇಂತಹ ಪರಿಸ್ಥಿತಿಯನ್ನು ತಡೆಯಲು ಭಾರತದ ಪ್ರಮುಖ ಗ್ರಂಥಪಾಲಕರು, ವಿಜ್ಞಾನಿಗಳು, ಶಿಕ್ಷಣ ತಜ್ಞರು ಸಾಮೂಹಿಕವಾಗಿ ಒಂದು ನಿರ್ಣಯಕ್ಕೆ ಬಂದು 'ಇನ್ ಫ್ಲಿಬ್ ನೆಟ್'ನ ಯೋಜನೆಯನ್ನು ತಯಾರಿಸಿದ್ದಾರೆ.

'ಇನ್ ಫ್ಲಿಬ್ ನೆಟ್' ಎಂದರೆ ಏನು ?

Inflibnet (Information and Library Network), ಇದು ಮಾಹಿತಿ ಸಂಗ್ರಹಣೆಯ ಉದ್ದೇಶಕ್ಕಾಗಿ ಸಂಘಟಿಸಿ ಕೆಲಸ ಮಾಡುವ ಜಾಲ, ಇದು ರಾಷ್ಟ್ರದ ಬಹು ದೊಡ್ಡ ಯೋಜನೆ.

ಈ ಜಾಲ ಹಲವು ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ, ಇದು ಗ್ರಂಥ ಸೂಚಿ, ಮಾಹಿತಿ ಆಧಾರ ಸೇವೆ, ಲೇಖನ ಮತ್ತು ಛಾಯಾ ಚಿತ್ರ ಪ್ರತಿಗಳನ್ನೊದಗಿಸುವ, ಪುಸ್ತಕ ಮತ್ತು ನಿಯತಕಾಲಿಕಗಳ ಸಂಗ್ರಹಣ ಕಾರ್ಯ, ಚಟುವಟಿಕೆಗಳನ್ನೊಳಗೊಂಡಿದೆ.

ಈ ಜಾಲದಲ್ಲಿ ಉನ್ನತ ವ್ಯಾಸಂಗದಲ್ಲಿ ತೊಡಗಿರುವ ಎಲ್ಲಾ ಸಂಸ್ಥೆಗಳೂ, ಸಂಶೋಧನಾಲಯಗಳು, ರಾಷ್ಟ್ರೀಯ ಸಂಸ್ಥೆಗಳಾದ CSIR, ICAR, DRDO, ICMR, ICSSR, ICHR, AICTE, DAE, DOT, DOE ಮತ್ತು Indira Gandhi National Centre for Arts ಮುಂತಾದವು ಸಕ್ರಿಯವಾಗಿ ದುಡಿಯುತ್ತಿವೆ.

'ಇನ್ ಫ್ಲಿಬ್ ನೆಟ್'ನ ಅಗತ್ಯವೇನು ?

ಭಾರತದಲ್ಲಿ ವರ್ಷಕ್ಕೆ ಸುಮಾರು 150 ಕೋಟಿ ರೂಪಾಯಿಗಳಿಗೂ ಹೆಚ್ಚು ಹಣವನ್ನು ಕೇವಲ ಪುಸ್ತಕ ಮತ್ತು ನಿಯತಕಾಲಿಕಗಳ ಖರೀದಿಗಾಗಿ ವಿಶ್ವವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆಗಳು ಖರ್ಚುಮಾಡುತ್ತಿವೆ.

ಇಷ್ಟಾಗಿಯೂ ಜ್ಞಾನಾರ್ಥಿಗೆ ಬೇಕಾದ ಮಾಹಿತಿ ಅಥವಾ ನಿಯತಕಾಲಿಕಗಳೆಷ್ಟೋ ಅವನು ಕೆಲಸಮಾಡುವ ಸಂಸ್ಥೆಯ ಗ್ರಂಥಾಲಯದಲ್ಲಿ ದೊರಕುವುದಿಲ್ಲ. ಇದಕ್ಕೆ ಕಾರಣ ಯಾವುದೇ ಒಂದು ಗ್ರಂಥಾಲಯ ಸ್ವಯಂ ಪೂರ್ಣವಾಗಿರಲು ಸಾಧ್ಯವಿಲ್ಲ.

ಆದ್ದರಿಂದ ರಾಷ್ಟ್ರದಲ್ಲಿರುವ ಎಲ್ಲಾ ಗ್ರಂಥಾಲಯಗಳ ಸಂಗ್ರಹಗಳು ಎಲ್ಲಾ ಓದುಗನಿಗೂ ದೊರಕುವಂತೆ ಮಾಡಬೇಕು. ಹೀಗೆ ಮಾಡುವುದರಿಂದ ದುಬಾರಿಯಾಗಿರುವ ಗ್ರಂಥಗಳ ದ್ವಿಪ್ರತಿ ಅಥವಾ ಬಹು ಪ್ರತಿ ವೆಚ್ಚವನ್ನು ತಗ್ಗಿಸಬಹುದು. ಪ್ರತಿಯೊಂದು ಗ್ರಂಥಾಲಯವು ತನ್ನದೇ ಆದ ವಿಶಿಷ್ಟ ಸಂಗ್ರಹವನ್ನು ಹೊಂದಬಹುದು.

'ಇನ್ ಫ್ಲಿಬ್ ನೆಟ್' ಹೇಗೆ ಕೆಲಸ ಮಾಡುತ್ತದೆ ?

ಬಹುಮುಖ ಸಾಮರ್ಥ್ಯವುಳ್ಳ ಈ ಜಾಲವು ರಾಷ್ಟ್ರೀಯ, ಪ್ರಾಂತೀಯ ಕೇಂದ್ರೀಯ ಮತ್ತು ಸ್ಥಳೀಯ ಹಂತಗಳಲ್ಲಿ ಕಾರ್ಯ ನಿರ್ವಹಿಸುತ್ತದೆ.

ಈ ಜಾಲದ ಮೊದಲನೆ ಹಂತವಾಗಿ ಗ್ರಂಥಾಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ಗ್ರಂಥಪಾಲಕರುಗಳಿಗೆ ತರಬೇತಿ ಶಿಬಿರಗಳನ್ನು ಏರ್ಪಡಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಗುಜರಾತಿನ ರಾಜಧಾನಿಯಾದ ಅಹಮದಾಬಾದ್‌ನಲ್ಲಿರುವ ISAC ನಲ್ಲಿ ಈಗಾಗಲೇ ಹಲವಾರು ಶಿಬಿರಗಳನ್ನು ಏರ್ಪಡಿಸಿ ನಾಡಿನಾದ್ಯಂತ ಗ್ರಂಥಪಾಲಕರಿಗೆ ತರಬೇತಿಯನ್ನು ನೀಡಿದೆ. ಇಂತಹ ತರಬೇತಿ 'ಮಾಹಿತಿ ಜಾಲ'ದ ಅಳವಡಿಕೆಯಲ್ಲಿ ವಿಳಂಬವಾಗದಂತೆ ಗ್ರಂಥಪಾಲಕರು ಕಾರ್ಯ ಪ್ರವೃತ್ತರಾಗಲು ಎಡೆ ಮಾಡಿಕೊಟ್ಟಿದೆ.

ಎಲ್ಲಾ ಗ್ರಂಥಾಲಯಗಳ ಗ್ರಂಥಸೂಚಿಗಳನ್ನು ಒಟ್ಟಾಗಿ ಸೇರಿಸುವ ಈ ಕಾರ್ಯವನ್ನು ಕೆಳ ಹಂತದಿಂದ ಮೇಲಿನ ಹಂತದವರೆಗೆ ವಿಸ್ತರಿಸಲಾಗುವುದು. ಅಂದರೆ

ವಿಭಾಗೀಯ ಹಾಗೂ ವಿದ್ಯಾಲಯ ಗ್ರಂಥಾಲಯಗಳಿಂದ ವಿಶ್ವವಿದ್ಯಾಲಯ ಗ್ರಂಥಾಲಯಕ್ಕೆ, ಅಲ್ಲಿಂದ ಪ್ರಾಂತೀಯ ನಂತರ ರಾಷ್ಟ್ರೀಯ ಗ್ರಂಥಾಲಯಕ್ಕೆ ಜೋಡಿಸಲಾಗುವುದು, ಇದರಿಂದ ಮಾಹಿತಗಳ ಪೋಷಣೆ ಮತ್ತು ಸೇವಾಕಾರ್ಯ ತ್ವರಿತಗತಿಯಲ್ಲಿ ನಿರ್ವಹಿಸಲಾಗುವುದು.

ಸ್ಥಳೀಯ ಹಂತದಲ್ಲಿ ಕಾಲೇಜು, ವಿಶ್ವವಿದ್ಯಾಲಯ ಮತ್ತು ಸಂಶೋಧನಾಲಯಗಳ ಗ್ರಂಥಾಲಯಗಳಲ್ಲಿ ಜ್ಞಾನಾರ್ಥಿಗೆ ಸೇವೆಯನ್ನೊದಗಿಸುವುದು.

ರಾಷ್ಟ್ರೀಯ ಕೇಂದ್ರವು ಈ ಜಾಲದ ಮೇಲ್ವಿಚಾರಣೆ ಮತ್ತು ಸಂಘಟನೆಯ ಕಾರ್ಯವನ್ನು ನಿರ್ವಹಿಸಿದರೆ, ನಾಲ್ಕು ಪ್ರಾಂತೀಯ ಎಂದರೆ, ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮಗಳಲ್ಲಿ ಕೇಂದ್ರೀಕರಿಸಿದ ಕೇಂದ್ರಗಳು ಸಂಯುಕ್ತ ಗ್ರಂಥ ಸೂಚಿಗಳನ್ನು ಎಂದರೆ ಎಲ್ಲಾ ಗ್ರಂಥಾಲಯಗಳ ಸೂಚಿಯನ್ನೂ ಒದಗಿಸುತ್ತವೆ.

ರಾಷ್ಟ್ರೀಯ ಮಾಹಿತಿ ಮತ್ತು ಸೇವಾ ಕೇಂದ್ರಗಳು ಹಲವಾರು ವಿಷಯಗಳ ಮಾಹಿತಿಗಳನ್ನು ಸಂಗ್ರಹಿಸುತ್ತವೆ. ಮತ್ತು ಆಧುನಿಕ ಗಣಕ ಯಂತ್ರಗಳ ಸಹಾಯದಿಂದ ಪೂರ್ವಾನ್ವಯ ಮಾಹಿತಿಗಳನ್ನೂ ಶೇಖರಿಸುತ್ತವೆ.

ನೂರಾರು ವಿಶ್ವವಿದ್ಯಾಲಯಗಳನ್ನೂ ಮತ್ತು ಸಂಶೋಧನಾಲಯಗಳನ್ನು ಗ್ರಂಥಗಳ ಹಾಗೂ ಛಾಯಾ ಚಿತ್ರಪ್ರತಿಗಳ ಸರಬರಾಜು ಕೇಂದ್ರವಾಗಿ ನಿಯಮಿಸಲಾಗುತ್ತದೆ.

'ಇನ್‌ಫ್ಲಿಬ್ ನೆಟ್'ನ ಉದ್ದೇಶಗಳೇನು ?

ರಾಷ್ಟ್ರದ ಎಲ್ಲಾ ಸುಮಾರು 180 ವಿಶ್ವವಿದ್ಯಾಲಯಗಳ, 5500 ಕಾಲೇಜುಗಳ, ಮಾಹಿತಿ ಕೇಂದ್ರಗಳ ರಾಷ್ಟ್ರೀಯ ಸಂಸ್ಥೆಗಳ, ಸಂಶೋಧನಾಲಯಗಳ ಗ್ರಂಥಾಲಯಗಳನ್ನು ಒಂದು ಅಚ್ಚುಕಟ್ಟಿನ ಜಾಲದಲ್ಲಿ ಸೇರಿಸುವುದು.

ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳ ಸೇವಾದಕ್ಷತೆಯನ್ನು ಹೆಚ್ಚಿಸುವುದಕ್ಕಾಗಿ ಎಲ್ಲಾ ಕೇಂದ್ರಗಳನ್ನು ನಿಯಮಿತವಾಗಿ ಸಂಯೋಜಿಸುವುದು.

ಗಣಕ ಯಂತ್ರಗಳ ಸಹಾಯದಿಂದ ಸಂಯುಕ್ತ ಗ್ರಂಥ ಸೂಚಿಗಳನ್ನು ಎಂದರೆ, ಪುಸ್ತಕ, ನಿಯತ ಕಾಲಿಕ, ಪುಸ್ತಕೇತರ ವಿಷಯಗಳನ್ನು ಜ್ಞಾನಾರ್ಥಿಗೆ ಎಟಕುವಂತೆ ಮಾಡುವುದು.

ಗ್ರಂಥ ವಿವರಣಾ ಪಟ್ಟಿಯ ಸಮಾಚಾರವನ್ನು ಗಣಕ ಯಂತ್ರಗಳ ಸಹಾಯದಿಂದ ಅರುಹುವ ಯೋಜನೆ.

ಈ ಜಾಲಕ್ಕೆ ಅನುಕೂಲವಾಗುವಂತ ಮಾನವ ಸಂಪನ್ಮೂಲ ವ್ಯವಸ್ಥೆ ಮತ್ತು ಅದಕ್ಕೆ ಬೇಕಾದ ಅಧಿಕೃತ ತರಬೇತಿ ನೀಡುವುದು.


ಇಂಥ ವ್ಯವಸ್ಥೆಯಿಂದ ಸಂಪದ್ಯುಕ್ತ ಗ್ರಂಥಾಲಯಗಳು ದೇಶದ ಯಾವುದೇ ಭಾಗದ ಜ್ಞಾನಾರ್ಥಿಗೆ ತನ್ನ ಸ್ಥಳೀಯ ಸಂಪದ್ಯುಕ್ತವಲ್ಲದ ಗ್ರಂಥಾಲಯದಿಂದ ಶೀಘ್ರವಾಗಿ ಬೇಕಾದ ಮಾಹಿತಿ ಸಂಗ್ರಹಣೆಗೆ ಅನುವು ಮಾಡಿಕೊಡುವುದು.

ಈ ಜಾಲ ನಿಯಂತ್ರಣದಲ್ಲಿ ಏಕ ಸಾಮ್ಯ ವ್ಯವಸ್ಥೆ ಅತಿ ಮುಖ್ಯವಾದುದರಿಂದ ಇದಕ್ಕೆ ಬೇಕಾದ Hardware ಮತ್ತು Software ತಜ್ಞರ ತರಬೇತಿ ಮತ್ತು ಸಮಂಜಸ ನಿಯಂತ್ರಣವನ್ನು ಒದಗಿಸುವುದು.

'ಇನ್‌ಫ್ಲಿಬ್ ನೆಟ್' ಬಹುಮುಖವಾದ ಸೇವೆಯನ್ನು ದಕ್ಷತೆಯಿಂದ ಜ್ಞಾನಾರ್ಥಿಗೆ ಒದಗಿಸುವ ಸಂಯುಕ್ತ ಜಾಲವಾಗಿದೆ. ಜ್ಞಾನ ಸಂಪತ್ತಿನ ಸರ್ವತೋಮುಖ ಏಳಿಗೆಗಾಗಿ ಶ್ರಮಿಸಲಿರುವ ಇಂಥ ವ್ಯವಸ್ಥೆ ರಾಷ್ಟ್ರದ ಶೈಕ್ಷಣಿಕ ಪ್ರಗತಿಯಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುವ ಮಜಲಾಗಿದೆ.

ಮಾಹಿತಿ ಜಾಲದ ರಚನೆ

INFLIBNET



ಗ್ರಂಥ ಋಣ

1 UGC : Development of an information and Library network - Report of the inter agency working group.

2) N. M. Malwad : Library and information Science Personnel requirements in the Context of Inflibnet.

ಮಂಥನ ಒಂದು : ಚಾಳುಕ್ಯ ಕುಲ ಮತ್ತು ಪುಲಕೇಸಿ

ಚಾಳುಕ್ಯರದು ಕೂಡ ಅಚ್ಚಕನ್ನಡ ಅರಸು ಕುಲ. ಚಾಳುಕ್ಯ ವಂಶದ ಉಗಮ ಹಾಗೂ ನಿಷ್ಪತ್ತಿಯನ್ನು ಕುರಿತು ಚರ್ಚೆಗಳಾಗಿವೆ. ಚರಿತ್ರಕಾರರು ನಡಸಿರುವ ಚಿಂತನ ಮಂಥನಗಳ ಸಾರಾಂಶಕ್ಕಿಂತ ಬೇರೆಯದಾದ ನಿಲವು ನನ್ನದು. ಇದುವರೆಗೆ ಸೂಚಿತ ವಾಗಿರುವ ಶಬ್ದಾರ್ಥ ಜಿಜ್ಞಾಸೆಗೆ ಇನ್ನೊಂದು ಅರ್ಥವನ್ನು ಪೋಣಿಸುವುದಷ್ಟೇ ನನ್ನ ಉದ್ದೇಶವಲ್ಲ. ಭಾಷಿಕ, ಸಾಮಾಜಿಕ, ಭೌಗೋಳಿಕ, ಮತ್ತು ಸಾಂಸ್ಕೃತಿಕ ಹಿನ್ನೆಲೆ ಗಳಿಂದ ಈ ಚಾಳುಕ್ಯ ಶಬ್ದದ ನಿರ್ವಚನ ಮತ್ತು ಪುನರ್ ವ್ಯಾಖ್ಯೆಗೆ ಅವಕಾಶವಿದೆ. 'ಚಾಳುಕ್ಯ' ಎಂಬ ಶಬ್ದರೂಪಕ್ಕೆ ಸಂಬಂಧಿಸಿದ ಕೆಲವು ಪ್ರಾಚೀನ ಶಾಸನ ಪ್ರಯೋಗಗಳು:

1. ಚಲ್ಕ್ಯ : ಬಾದಾಮಿ ಶಾಸನ : ಕ್ರಿ.ಶ. 578
2. ಚಳಿಕ್ಯ ; ಮಹಾಕೂಟ ಸ್ತಂಭ ಶಾಸನ : ಕ್ರಿ.ಶ. 602
3. ಚಲಿಕ್ಯ : ಮಂಗಳೇಶನ ಶಾಸನ : ಕ್ರಿ.ಶ. 7ನೆಯ ಶತಮಾನ
4. ಚಲುಕ್ಯ : ಪುಲಿಕೇಶಿ II. ಐಹೊಳೆಯ ಶಾಸನ : ಕ್ರಿ.ಶ. 634
5. ಚಳುಕಿ ; SII.XVII.37. ಅತೇದಿ.
6. ಸಳುಕಿ : SII.XI-i. 14. ಕ್ರಿ.ಶ. 872.

ಈ ಶಬ್ದದ ಚರ್ಚೆಯ ಕಕ್ಷೆಗೆ ಒಳಪಡುವ ಸಮಾನ ಮೂಲದ ಶಬ್ದಗಳ ಜಾತಕವನ್ನೂ ಬಿಡಿಸಿ ನೋಡಬಹುದು :

ಚವುಳು, ನವುಳು brackishness, ತಮಿಳು, ಚವುಡು. ತೆಲುಗು, ಚವುಡು, ಚವಡು, ಚೌಡು

ಚವುಳುಪ್ಪು Impure soda, Soda-saltpeter

ಚವುಳು ಮಣ್ಣು Fullers earth, earth impregnated with carbonate of soda

ಜಾಳ್ನೆಲ, ಜವುಳು ನೆಲ : ಊಷ, ಕ್ಷಾರಮೃತ್ತಿಕೆ

ಚಳಿಯು the state of growing putrid or muddy

ತಮಿಳು, ಮಲೆಯಾಳಂ. ಚಳಿ to grow putrid, mud, mire ಕೆಸಱು wet soil, mud, mire. ತಮಿಳು, ಮಲೆಯಾಳಂ. ಚಳಿ, ಸುಳಿ, ಚದುಕು, ಜೀರುಕು

ಸಲಿಕೆ(ತ್ಭ) ಸಲಾಕೆ, ಸಂಸ್ಕೃತ-ಶಲಾಕೆ, ಕಬ್ಬಿಣದ ಸರಳು, ಕೃಷಿ ಉಪಕರಣ ಮೇಲಿನ ಶಬ್ದರೂಪಗಳ ಹಿನ್ನೆಲೆಯಿಂದ ನೋಡುವಾಗ ಚಳಿಯು, ಚವುಳು, ಜವುಳು ಎಂಬ ಶಬ್ದಗಳು ಒಂದು ಮೂಲ ಪ್ರಕೃತಿ (ಆಕೃತಿ)ಯಿಂದ ನಿಷ್ಪನ್ನವಾದ ಶಬ್ದಗಳೆಂದು ಕಾಣುತ್ತದೆ. ಇವೆಲ್ಲವೂ ಮಣ್ಣಿಗೆ ಸಂಬಂಧಿಸಿದ ಮಾತುಗಳು. ಸಲಿಕೆ, ಸಲಾಕೆ ಎಂಬುದನ್ನೂ 'ಚಳುಕ್ಯ-ಸಳುಕಿ' ಎಂಬ ಶಬ್ದ ಮೂಲಕ್ಕೆ ಜ್ಞಾತಿ ಶಬ್ದಗಳೆಂದು, (cognate words) ಕಲ್ಪಿಸಬಹುದು. ಇದರಿಂದ ಪ್ರತೀತವಾಗುವಂತೆ ಈ ಚಾಳುಕ್ಯ ವಂಶದ ಮೂಲ ಪುರುಷರು ಒಕ್ಕಲ ಮಕ್ಕಳಾಗಿದ್ದರು. ಅವರು ಮೊದಲು ಮಣ್ಣಿನ ಮಕ್ಕಳಾಗಿದ್ದು ಪ್ರಭುಶಕ್ತಿಗಳಿಸಿ, ಒಂದು ರಾಜಕುಲವಾಗಿ ಬೆಳೆದರು. ಚಾಳುಕ್ಯರದು ಕೃಷಿಕ ಕುಟುಂಬವೆಂಬ ತೀರ್ಮಾನ ತಳೆಯಲು ನೆರವಾಗುವುದು ಈ ವಂಶದ ಪೊಲಕೇಸಿನ್ ಎಂಬ ಹೆಸರು.

ಪೊಲಕೇಸಿನ್ [SII.XX.4.683. ಲಕ್ಷ್ಮೇಶ್ವರ (ಧಾರವಾಡ ಜಿ ಶಿರಹಟ್ಟಿ ತಾ): ಅದೇ. 5.723 : 5.723 : ಅದೇ. 6.730. : ಅದೇ. 7.735. : SII.XI. 136.1091. ಆಲೂರು (ಧಾಜಿ/ಮುಂಡರಗಿ ತಾ)] ಎಂಬ ಅಂಕಿತನಾಮ ರೂಪದಲ್ಲಿ ಎರಡು ಮುಕ್ತ ಆಕೃತಿಗಳಿವೆ : ಪೊಲ(ನ್) + ಕೇಸಿನ್. ಇವು ಮೂಲದ್ರಾವಿಡಕ್ಕೂ, ಪೂರ್ವದ ಹಳೆಗನ್ನಡಕ್ಕೂ ಸೇರಿದ ಶಬ್ದಗಳು. ಪೊಲ (ಹೊಲ) . ಕೇಸಿನ್ (ಚೇಸಿನ್ = ಮಾಡುವವನು) = ಪೊಲಕೇಸಿನ್ ಎಂದಾಗಿದೆ. ತೆಲುಗು ಭಾಷೆಯಲ್ಲಿ ಚೇಸಿನ ಎಂಬ ಕ್ರಿಯಾರೂಪಕ್ಕೆ ಮಾಡಿದ ಎಂದೂ, ಚೇಸಿನವಾರು ಎಂಬುದಕ್ಕೆ ಮಾಡಿದವರು ಎಂದೂ ಅರ್ಥ. ಕೇಸಿನ್—ಚೇಸಿನ ಎಂಬುದು ತಾಲವೀಕರಣ ಗೊಂಡಿರುವ (palatalisation) ದ್ರಾವಿಡರೂಪ. ಇಂಥ ಇನ್ನೂ ಹತ್ತಾರು ಸಮಾನ—ಸದೃಶ ರೂಪಗಳಿವೆ. ಕೆಲವು ಉದಾ : ಕೇರ—ಚೇರ, ಕೆಯ್—ಚೆಯ್, ಕೆದರು–ಚಿದರ್, ಗೆದ್ದಲು—ಚಿದಲ್, ಕೆಱು—ಚೆಱುವು. ಮೂಲದ್ರಾವಿಡ *ಕ್—ಸ್ವನವು, ಅದರ ಮುಂದೆ ಇಈ—ಎಏ ಎಂಬ ಪೂರ್ವ ಸ್ವರಗಳು (Front vowels) ಬಂದಾಗ ಅದು ತಮಿಳು ತೆಲುಗು ಮಲೆಯಾಳ ಭಾಷೆಗಳಲ್ಲಿ ಚ್—ಆಗುತ್ತದೆ. ಪೂರ್ವೇತರ ಸ್ವರಗಳಾದ (non-front vowels) ಅ ಉ ಒ ಪರವಾದಾಗ ವ್ಯತ್ಯಾಸ ವಾಗುವುದಿಲ್ಲ. ಕನ್ನಡ, ತುಳು ಭಾಷೆಗಳಲ್ಲಿ, ಪೂರ್ವ—ಪೂರ್ವೇತರ ಸ್ವರಗಳಲ್ಲಿ ಯಾವುದೇ ಬಂದರೂ ಸ್ವನ ವ್ಯತ್ಯಾಸ ಸಂಭವಿಸದೆ *ಕ್—ಸ್ವನ ಅಭಾಧಿತವಾಗಿಯೇ

ನಿಲ್ಲುತ್ತದೆ : ಉದಾ ; (ಕನ್ನಡ) ಕಿರಿ, ಕೆಯ್, ಕೇರು, ಕೆದರು—ಈ ಶಬ್ದಗಳಿಗೆ ತಮಿಳು ತೆಲುಗು ಮಲೆಯಾಳ ಭಾಷೆಗಳಲ್ಲಿ ಕ್ರಮವಾಗಿ ಚಿರಿ, ಚೆಯ್—ಚೇತ, ಚೇರುಕ—ಚೆರುಗು, ಚೆದರು ಎಂಬ ರೂಪಗಳಿವೆ [ಹಂಪ. ನಾಗರಾಜಯ್ಯ, 'ದ್ರಾವಿಡ ಭಾಷಾ ವಿಜ್ಞಾನ', ನಾಲ್ಕನೆಯ ಮುದ್ರಣ (1994)]. ಏಳನೆಯ ಶತಮಾನದ ತೆಲುಗು ಶಾಸನಗಳಲ್ಲಿ ಕೇಸಿರಿ ಎಂಬ ಕಕಾರವೇ ಶಬ್ದದ ಆದಿಯಲ್ಲಿ ಪ್ರಯೋಗವಾಗಿರುವ ರೂಪಗಳಿವೆ : ಪನಿಕೇಸಿರಿ (→ಪನಿಚೇಸಿರಿ).

ಪೊಲಕೇಸಿನ್ ಎಂಬುದು 'ಹೊಲ ಮಾಡುವವನು' ಎಂಬ ಅರ್ಥದ ಮಾತಾಗಿದೆ: ಒಕ್ಕಲ್ತನಂ ಕೆಯ್ವೊನ್ [IA.XIX. ಸು. 690. ಬಳ್ಳಿಗಾವೆ ಪು. 144-45]. ಇಂದಿಗೂ ಹೊಲ ಮಾಡಿಕೊಂಡಿದ್ದಾನೆ, ಹೊಲಗೆಯ್ಕೊಂಡಿದ್ದಾನೆ, ಹೊಲಗೆಯ್ಯ— ಎಂಬುವು ರೈತಾಪಿಜನರ ರೂಢಿಯ ಮಾತುಗಳಾಗಿವೆ. ಪೊ ಲ ಕೇ ಸಿ ನ್ (ಹೊಲ ಮಾಡುವವನು) ಎಂಬ ಹೆಸರಿನ ಸ್ತ್ರೀ ಪುರುಷರನ್ನು ಕನ್ನಡ ಶಾಸನಗಳು ಹೆಸರಿಸಿವೆ.

1 ಗಂಗರ ರಾಜರಲ್ಲಿ ಪೊಲವೀರನೆಂಬ ಕೊಜ್ಜುಗಣಿ ಮಹಾರಾಜನಿದ್ದಾನೆ. ಈತನು ಗಂಗರ ದುರ್ವಿನೀತನ (495-535) ಒಬ್ಬ ಮಗ ; ಇನ್ನೊಬ್ಬ ಮಗನೇ ಮುಷ್ಕರ. ಪೊಲವೀರನು ಸೇಂದ್ರಕ ವಿಷಯದಲ್ಲಿದ್ದ ಪಲಚ್ಚೊಗೆ ಎಂಬ ಹಳ್ಳಿ ದತ್ತಿಯಿತ್ತನು [EC.IX (1990) 537, ಕ್ರಿ.ಶ. 6 ಶ, ತಗರೆ (ಹಾಸನ ಜಿ./ಬೇಲೂರು ತಾ.) ಪು. 472].

2 ನಾಗುಳರ ಪೊಲ್ಲಬ್ಬೆ ಮಾಡಿಸಿದ ಬಸದಿ [SII.XVIII, 315, 859-60 ರಾಣೆಬೆನ್ನೂರು (ಧಾರವಾಡ ಜಿ.) ಪು. 420].

3 ಪ್ರತಾಪಶಾಲಿಯುಮಪ್ಪ ಹೊಲ್ಲಗಾವುಂಡನ ಗುಣ ಪ್ರಭಾವಂ [B.K. No. 108 of 1926–27 ; BK. 51, 1155].

4 ನೊಳಂಬ ಪೊಲವೀರನೆಂಬುವನು ಗಂಗರ ಪೃಥ್ವೀಪತಿ ದಿಡಿಗ ರಾಜನ ಮೇಲೆ ದಂಡೆತ್ತಿ ಬಂದ ದಾಖಲೆಯಿದೆ.

ಇದುವರೆಗಿನ ಚರ್ಚೆಯ, ಮಂಥನದ ಸಾರಾಂಶ :

1 ಚಾಳುಕ್ಯರದು 'ಚಳುಕ್ಯ' ಕುಲ. ಅದರ ವಿವಿಧ ಪ್ರಾಚೀನ ರೂಪಗಳು ಹ್ರಸ್ವ ಸ್ವರಾದಿಯಾದ ಚಳುಕಿ, ಸಳುಕಿ, ಚಳುಕ್ಯ, ಚಲಿಕ್ಯ, ಚಲ್ಕ್ಯ ಎಂಬುವಾಗಿವೆ. ಇವುಗಳನ್ನು ಸಲಿಕೆ, ಸಲಾಕಿ ಎಂಬ ಕೃಷಿಕ ಉಪಕರಣ ಗಳೊಂದಿಗೆ ಸಮೀಕರಿಸಬಹುದು.

2 ಚಳುಕಿ–ಸಳುಕಿ ಎಂಬ ಶಬ್ದಗಳು ನೆಲ, ಮಣ್ಣು ಎಂಬರ್ಥದ ಶಬ್ದಗಳಿಗೆ ಹೊಂದಿವೆ. ಇವು ದ್ರಾವಿಡ ಮೂಲದ ಶಬ್ದಗಳಾಗಿದ್ದು ಇದರ ಜ್ಞಾತಿ ರೂಪಗಳು, ಜ್ಞಾತಿ ಭಾಷೆಗಳಲ್ಲಿ, ಸಮಾನ ಅರ್ಥ ಪ್ರಭೇದಗಳಿಂದ ಕಂಡುಬರುತ್ತವೆ. ಆದ್ದರಿಂದ, ಇವನ್ನು ಸಂಸ್ಕೃತದಿಂದ ನಿಷ್ಪನ್ನ ಮಾಡುವುದು ಸರಿಯಲ್ಲ ; ದ್ರಾವಿಡ ರೂಪವೇ ಸಂಸ್ಕೃತೀಕರಣಗೊಂಡಿದೆ.

3 'ಪೊಲಕೇಸಿನ್' ಎಂಬ ಶಬ್ದದ ಮೂಲ ಅರ್ಥವೂ ಸಹ ಒಕ್ಕಲುತನಕ್ಕೆ ಸೇರಿದ್ದಾಗಿದೆ. ಪೊಲಕೇಸಿನ್ ಎಂದರೆ ನೆಲದೊಡೆಯ, ನೆಲ ಸಂಬಂಧದ ಕೆಲಸ ಮಾಡುವಾತ ಎಂದರ್ಥ.

4 ಚಾಳುಕ್ಯರದು ಒಕ್ಕಲು ಮೂಲದ ಮನೆತನ, ಕೃಷಿಕ ಕುಟುಂಬ.

5 ಚಾಳುಕ್ಯರು ಮೂಲತಃ ಬಿಜಾಪುರ ಜಿಲ್ಲೆಯ ಬಾದಾಮಿ, ಶಿರಹಟ್ಟಿ ಸುತ್ತಲ ರೈತಾಪಿಗಳು. ಸ್ವಸಾಮರ್ಥ್ಯ ಮತ್ತು ರಾಜಕೀಯ ಮಹತ್ವಾಕಾಂಕ್ಷೆಯಿಂದ ಈ ಒಕ್ಕಲ ಕುಟುಂಬದ ಪೊಲವೀರರು ದೊಡ್ಡ ಸಾಮ್ರಾಜ್ಯವನ್ನಾಳುವಷ್ಟು ಬಲಿಷ್ಠರಾದರು, ರಾಷ್ಟ್ರಕೂಟರೂ ಮೊದಲಿಗೆ ಒಕ್ಕಲಿಗರೆಂಬುದಕ್ಕೆ ಅವರ ರಾಜ ಲಾಂಛನದಲ್ಲಿ ನೇಗಿಲು ಇರುವುದು ಸಾಕ್ಷಿ. ಗಂಗರೂ ರೈತರಿದ್ದಿರಬಹುದು.

6 ಚಾಳುಕ್ಯ ಎಂಬ ಶಬ್ದಕ್ಕೆ ದೈವ ಮೂಲದ ಊಹಾತ್ಮಕ ನಿಷ್ಪತ್ತಿಗಿಂತ ಮನುಷ್ಯ ಮೂಲದ ನಿಷ್ಪತ್ತಿಯಲ್ಲಿರುವ, ವಾಸ್ತವತೆಗೆ ಹತ್ತಿರವಾಗುವ ಸಮಂಜಸತೆಯನ್ನು ಪ್ರಾಜ್ಞರಾದ ಚರಿತ್ರಕಾರರು ಪರಿಭಾವಿಸಬೇಕು.

7 ಬೆಳ್ವೊಲ [*ವೆಳ್— + ಪೊಲ(ನ್) = ವೆಳ್ವೊಲ, ಬೆಳ್ವೊಲ, ಬೆಳ್ವಲ] ಎಂಬಲ್ಲಿ ಉತ್ತರಾರ್ಧವಾಗಿ ಇರುವ ಶಬ್ದರೂಪವೂ 'ಪೊಲ' ಎಂಬುದೇ. ಬೆಳ್ವೊಲ ಮುನ್ನೂರರ ಪ್ರದೇಶದವರು ಚಾಳುಕ್ಯ ಕುಲಜರು.

8 ಪುಲಿಗೆಱೆ–ಪುರಿಕರ ಎಂಬ ಸ್ಥಳವಾಚಿ ಶಬ್ದಗಳಿಗೂ ಪೊಲಗೆಱೆ (ಹೊಲದ ಕೆರೆ) ಎಂಬುದು ಮೂಲ ಪ್ರಾಚೀನ ರೂಪವಿರಬಹುದು. ಪುರಿಕರನಗರಿ ಎಂಬುದು ಇದರ ಸಂಸ್ಕೃತ ರೂಪ. ಪೊಲಗೆಱೆ–ಪುಲಿಗೆರೆ (ಲಕ್ಷ್ಮೇಶ್ವರ) : ಇದರಂತೆಯೇ ಪೊಲಕೇಸಿನ್–ಪುಲಿಕೇಸಿ—ಎಂಬ ಬೆಳವಣಿಗೆಯನ್ನು ಮನಗಾಣಬಹುದು.

9 ಚಾಳುಕ್ಯರಿಗೆ (ಪೊ) ಪುಲಿಗೆರೆಯೇ ಮೂಲ ಸ್ಥಳವಿರಬೇಕು. ಪುಲಿಗೆರೆಯ ಶಂಖಬಸದಿಯು ಬಾದಾಮಿ ಚಾಳುಕ್ಯರ ಮನೆದೇವರು, ಪಟ್ಟ ಜಿನಾಲಯ. ಈ ಕಾರಣಕ್ಕಾಗಿಯೇ ಬಾ(ಬ)ದಾಮಿ ಚಾಳುಕ್ಯರು,

ಕಲ್ಯಾಣಿ ಚಾಳುಕ್ಯರು ಒಂದೇ ಸಮನೆ ಪುಲಿಗೆರೆಯ ಶಂಖ ಜಿನಾಲಯಕ್ಕೆ, ದಾನ ದತ್ತಿಗಳನ್ನು ಪುನರ್ಭರಣಗೊಳಿಸುತ್ತ ಭಕ್ತಿಯಿಂದ ನಡೆದುಕೊಂಡರು.

ಡಾ. ಹಂಪ. ನಾಗರಾಜಯ್ಯ

ಮಂಥನ ಎರಡು : ಬೋಳಹ ಬೋಳಹ ಭಟಾರಾ-ಒಂದು ಅಭಿಪ್ರಾಯ

ಭದ್ರಬಾಹು ಭಟ್ಟಾರರು ಹಲವು ದಿವಸ ಆ ಉಜ್ಜಯಿನಿ ಪಟ್ಟಣದಲ್ಲಿರಲು ಅದೊಂದು ದಿನ ಋಷಿ ಸಮುದಾಯವೆಲ್ಲವನ್ನು ಚರಿಗೆವೋಗಿಸುತ್ತ ಎಲ್ಲರನ್ನು ನಿಲ್ಲಿಸಿ, ತಾವೊಬ್ಬರೇ ಒಂದು ಮನೆಯನ್ನು ಹೊಕ್ಕಾಗ, ಆ ಮನೆಯಲ್ಲಿ ಯಾರೂ ಇಲ್ಲದೆ, ಒಸರಿಗೆ ತೊಟ್ಟಿಲಲ್ಲಿದ್ದ ಶಿಶುಗೂಸು "ಬೋಳಹ ಬೋಳಹ ಭಟಾರಾ" ಎಂದಿತು ಆ ವಚನವನ್ನು ಭಟ್ಟಾರರು ಕೇಳಿ ಅದನ್ನು ದಿವ್ಯವಾಕ್ಯ ವೆಂದರಿದು ಕಾಲ ಪ್ರಮಾಣವನ್ನು ಪ್ರಶ್ನಿಸಲು. ಆ ಮಗು ಹನ್ನೆರಡು ವರ್ಷವೆಂದು ಹೇಳಿತು ಎಂಬರ್ಥದ ಭಾಗ ವಡ್ಡಾರಾಧನೆಯ ಭದ್ರಬಾಹು ಭಟಾರರ ಕಥೆಯಲ್ಲಿ ಬರುತ್ತದೆ.[1] ಈ ಭಾಗದಲ್ಲಿ ಬಂದಿರುವ ಒಂದು ವಾಕ್ಯ 'ಬೋಳಹ ಬೋಳಹ ಭಟಾರಾ' ಎಂಬಲ್ಲಿ ಬೋಳಹ ಎಂಬ ಶಬ್ದಕ್ಕೆ ಇರುವ ಅರ್ಥವೇನು ಎಂಬುದು ವಿಚಾರಾರ್ಹ.

ವಡ್ಡಾರಾಧನೆಯ ಸಂಪಾದಕರು ಇದಕ್ಕೆ ಗಚ್ಛ ಗಚ್ಛ ಭಟಾರಾ ಎಂದು ಹೇಳಿ "ಹೋಗು, ಹೋಗು, ಎಂಬರ್ಥಮಾಡಿದ್ದಾರೆ. 'ಬೋಳಹ' ಎಂಬುದು 'ಗಚ್ಛ' ಎಂಬುದಾ ರೂಪವೇ ? ಒಮ್ಮೆ ಅದು 'ಗಚ್ಛ' ಎಂಬುದರ ರೂಪವೇ ಆದಲ್ಲಿ ಭಾಷಾ ಶಾಸ್ತ್ರದ ದೃಷ್ಟಿಯಿಂದ 'ಗ' ಕಾರಕ್ಕೆ 'ಬ' ಕಾರ ಬರುವುದೇ ? ಸಾಮಾನ್ಯವಾಗಿ 'ಪ' ಕಾರ ಬರುವುದು ಎಂದು ಎಲ್ಲರೂ ಹೇಳಿದ, ಒಪ್ಪಿದ ಮಾತು ಹಾಗಿರುವಾಗ 'ಗಚ್ಛ' ಎಂಬುದು ಬೋಳಹ ಆಗುವುದು ಹೇಗೆ ? ಬೋಳಹ ಎಂಬುದು 'ಗಚ್ಛ' ಎಂಬುದರ ರೂಪವೆಂದು ಹೇಳಿ ಅದು ಪ್ರಾಕೃತದ 'ವೋಲ' ಎಂಬ ರೂಪ ಎಂಬುದಾಗಿ ಸಂಪಾದಕರು ತಿಳಿಯಪಡಿಸಿದ್ದಾರೆ.

ಇಲ್ಲಿ ಪ್ರಾಕೃತದ ವೋಲ, ಬೋಳಹ ಎಂಬುದೇನೋ ಸರಿ. ವೋಲಕ್ಕಾಗಲಿ ಬೋಳಹಕ್ಕಾಗಲಿ 'ಗಚ್ಛ' ಎಂಬುದು ಹೇಗೆ ಸಮನಾದೀತು? ಭಾಷಾ ಶಾಸ್ತ್ರದ ದೃಷ್ಟಿಯಿಂದ ಈರೂಪ ಸಾಧುವಾದುದಲ್ಲ ಎಂದೇ ಹೇಳಬೇಕಾಗುತ್ತದೆ.ಅಲ್ಲದೆ ಗಚ್ಛ ಎಂಬಲ್ಲಿ 'ಗ' ಕಾರಕ್ಕೆ 'ಬ' ಕಾರ ಬರುವುದು ಹೇಗೆ ಸಮಂಜಸ ವಲ್ಲವೋ ಹಾಗೆಯೇ ಮುಂದಿನ 'ಚ್ಛ' ಎಂಬುದಕ್ಕೆ 'ಲ', 'ಳ' ಬರುವುದು ಒಪ್ಪತಕ್ಕದಲ್ಲ. ಅದು 'ಸ' ಆಗಲು ಅವಕಾಶವಿದೆ. ಈ 'ಗಚ್ಛ' ಎಂಬುದು ಪ್ರಾಕೃತ ರೂಪವಾದ ಕೊಂಕಣಿ ಭಾಷೆಯಲ್ಲಿ 'ವಂಸ', 'ವಂಚ' ಎಂಬ ರೂಪವಾಗಿ ಬಳಕೆಯಲ್ಲಿದೆ. ಇಲ್ಲಿ 'ಗ' ಕಾರಕ್ಕೆ 'ವ' ಕಾರಾದೇಶ ಬಂದಿದ್ದು ಮುಂದಿನ 'ಚ್ಛ' ಎಂಬುದು 'ಸ' ಕಾರ ಅಥವಾ 'ಚ' ಕಾರವಾಗಿದೆ.

ಇಲ್ಲಿ 'ಗ' ಕಾರಕ್ಕೆ 'ವ' ಕಾರಾದೇಶ ಬಂದು ಈ 'ವ' ಕಾರ 'ಬ' (ಬೋ) ಆಗಲು ಅವಕಾಶ ವಿದೆಯೆಂಬುದನ್ನು ತೋರಿಸುತ್ತದೆ. ಆದರೆ 'ಚ್ಛ' ಎಂಬುದು 'ಳ' ಎಂದೆಂದೂ ಆಗುವುದಿಲ್ಲ. ಹಾಗಾದರೆ 'ಬೋಳಹ' ಎಂಬುದರ ನಿಜವಾದ ರೂಪ ಯಾವುದಿರಬಹುದು ಎಂಬುದು ವಿಚಾರಾರ್ಹ.

ಸಂಸ್ಕೃತದಲ್ಲಿ 'ಪಟಯಿ' ಎಂಬ ರೂಪವಿದೆ. ಈ ಪಟಯಿ ಎಂಬುದು ಬೋಳಹ ಆಗುವುದು ಭಾಷಾ ಶಾಸ್ತ್ರದ ದೃಷ್ಟಿಯಿಂದ ಸಮುಚಿತವಾದುದು. ಪಟಯು > ಬಟಯು > ಬಡಯು > ಬಳಯು (ಬಳದ) ಮುಂದೆ ಬಳಹ ಎಂಬುದು ಜನತೆಯ ಉಚ್ಚಾರದಲ್ಲಿ ಬೋಳಹ ಆಗುವುದಕ್ಕೆ ಸಾಧ್ಯತೆ ಇದೆ. ಇಲ್ಲಿ ನಿಶ್ಚಿತ ರೂಪವನ್ನು ನಿರ್ಣಯಿಸಲು ಸಂದರ್ಭವನ್ನು ಮೊದಲು ಅರ್ಥಮಾಡಿಕೊಂಡರೆ ಸುಲಭವಾಗುತ್ತದೆ.

ಭದ್ರಬಾಹು ಭಟಾರರು ಚರಿಗೆಗೆ ಅವರ ಜೊತೆಯಲ್ಲಿದ್ದ ಋಷಿ ಸಮುದಾಯ ವನ್ನು ಒಂದೆಡೆ ನಿಲ್ಲಿಸಿ ಅವರೊಬ್ಬರೇ ಒಂದು ಮನೆಗೆ ಭಿಕ್ಷೆಗೆ ಹೋಗುತ್ತಾರೆ. ಆಗ ಮನೆಯಲ್ಲಿದ್ದ ಕೂಸು ಅವರಿಗೆ 'ಬೋಳಹ ಬೋಳಹ ಭಟಾರಾ' ಎನ್ನುತ್ತದೆ. ಅದಕ್ಕವರು ಅವಧಿಯನ್ನು ಕೇಳಿದಾಗ ಮಗು ಹನ್ನೆರಡು ವರ್ಷಗಳ ಕಾಲಾವಧಿಯನ್ನು ಹೇಳುತ್ತದೆ. ಇಲ್ಲಿ ಮಗು ಭಟ್ಟಾರರಿಗೆ ಹೋಗು, ಹೋಗು ಎಂದು ಹೇಳಿತು ಎಂದು ಸಂಪಾದಕರು ಅರ್ಥ ಮಾಡಿರುವುದರಿಂದ ಅರ್ಥಕ್ಕೆ ಯಾವ ಕುಂದೂ ಇಲ್ಲ. ಆದರೆ ಹೋಗು, ಹೋಗು ಎಂಬಂತೆ ಮಗು ಭಟ್ಟಾರರಿಗೆ 'ಕಳುಹಿಸಿ ಕೊಡು, ಕಳುಹಿಸಿ ಕೊಡು' ಎಂದು ಹೇಳಿತು ಎಂದರೂ ಅರ್ಥಕ್ಕೆ ದೋಷ ಬರುವುದಿಲ್ಲವಲ್ಲವೆ ? ಅಲ್ಲದೆ ಬೋಳಹ ಎಂಬ ಶಬ್ದ ಪಟಯಿ ಎಂಬುದರ ರೂಪಾಂತರವೆಂದು ನಿರ್ಣಯಿಸು ವುದು ಹೆಚ್ಚು ಸಮಂಜಸವಾಗಿರುವುದರಿಂದ ಬೋಳಹ ಎಂದರೆ ಕಳುಹಿಸಿಕೊಡು ಎಂದರ್ಥ ಮಾಡುವುದೇ ಸೂಕ್ತ ವೆನಿಸುತ್ತದೆ. 'ಕಳುಹಿಸಿ ಕೊಡು' ಎಂಬರ್ಥದಲ್ಲಿ 'ಬೋಳಹ' (ಬಳಯಿ) ಹಾಗೂ 'ಪಟಯಿ' ಎಂಬೆರಡು ಸಮಾನಾರ್ಥಕ ಶಬ್ದಗಳನ್ನು ಇವತ್ತಿಗೂ ಪ್ರಾಕೃತ ರೂಪವಾದ ಕೊಂಕಣಿ ಭಾಷೆಯಲ್ಲಿ ಪ್ರಯೋಗಿಸುತ್ತಾರೆ. 'ತಾತ್ಕಾತಹಿ ಪಟಯಿ', 'ತಾತ್ಕಾತಹಿ ಬಳಯಿ (ಬೋಳಯಿ) ಅವನನ್ನ ಅಲ್ಲಿಗೆ ಕಳುಹಿಸಿಕೊಡು 'ತೆಮಾಕ್ಕಾ ಬಳಯಿ, (ಬೋಳಯಿ) ಪಟಯಿ – ಅದನ್ನ ನನಗೆ ಕಳುಹಿಸಿಕೊಡು ಇತ್ಯಾದಿ. ಪ್ರಾಕೃತ ಭಾಷೆ ಕೊಂಕಣಿಯಲ್ಲಿ ಇಂದಿಗೂ ಬಳಯಿ ಅಥವಾ ಬೋಳಯಿ ಎಂಬುದನ್ನು ಕಳುಹಿಸಿಕೊಡು ಎಂಬರ್ಥದಲ್ಲಿ ಪ್ರಯೋಗಿಸುವ ಪದ್ಧತಿ ಇರುವುದರಿಂದ ವಡ್ಡಾರಾಧನೆಯಲ್ಲಿ ಬರುವ ಬೋಳಹ ಭಟಾರ ಎಂಬುದಕ್ಕು ಪೂಜ್ಯ ಸ್ವಾಮಿಗಳೇ ಇಲ್ಲಿಂದ (ಈ ಊರಿನಿಂದ) ಒಂದೆಡೆ ನಿಲ್ಲಿಸಿದ ಅವರನ್ನು) ಕಳುಹಿಸಿ ಕೊಡಿ, ಕಳುಹಿಸಿ ಕೊಡಿ ಎಂಬುದಾಗಿ ಅರ್ಥೈಸುವುದು ಸಂದರ್ಭೋಚಿತವಾ

ಗಿದೆ. ಇದನ್ನೇ ಕೊಂಕಣಿಯಲ್ಲಿ ಹೇಳುವುದಾದರೆ "ಬಳಯಿ ಬಳಯಿ ಭಟ್ಟಾಯೋ" ಎಂದು.

ಈ ಊರಿನಲ್ಲಿ ಕ್ಷಾಮ ಬರಲಿರುವುದರಿಂದ ನಿಮ್ಮ ಜೊತೆಯಲ್ಲಿದ್ದ ಅವರನ್ನೆಲ್ಲ ಕಳುಹಿಸಿಕೊಡಿ ಎಂದು ಮಗು ಸೂಚಿಸಿತು ಎಂಬುದೇ ಇಲ್ಲಿನ ವಾಕ್ಯಾರ್ಥ.

ಮುಂದೆ ಮಗುವಿನ ಈ ಸೂಚನೆಯಂತೆ ಭಟಾರರು ಋಷಿ ಸಮುದಾಯವನ್ನೆಲ್ಲ ಬರಹೇಳಿ ಅವರಿಗೆ ಈ ವಿಷಯವನ್ನು ತಿಳಿಸಿ ದಕ್ಷಿಣ ಪಥಕ್ಕೆ ಕಳುಹಿಸಿ ಕೊಡುತ್ತಾರೆ ಎಂಬುದೂ ಕೂಡಾ 'ಕಳುಹಿಸಿಕೊಡಿ' ಎಂಬರ್ಥಕ್ಕೆ ಪುಷ್ಟಿ ದೊರೆಯುತ್ತದೆ.

1. ವಡ್ಡಾರಾಧನೆ ಶಿವಕೋಟ್ಯಾಚಾರ್ಯ ಪುಟ
   ಸಂ. ಡಾ. ಡಿ. ಎಲ್. ನರಸಿಂಹಾಚಾರ್.

ಎಂ. ಮಾಧವ ಪೈ

ಈ ಸಂಚಿಕೆಯ ಲೇಖಕರು

ಶ್ರೀ ಟಿ. ಯಲ್ಲಪ್ಪ	ಎಂ.ಫಿಲ್. ವಿದ್ಯಾರ್ಥಿ ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ, ಬೆಂಗಳೂರು-560 056.
ಶ್ರೀ ಹೊ. ನ. ನೀಲಕಂಠೇಗೌಡ	ದ್ವಿತೀಯ ಎಂ. ಎ. ವಿದ್ಯಾರ್ಥಿ ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ, ಬೆಂಗಳೂರು-560 056.
ಡಾ. ವಿಲ್ಯಂ ಮಾಡ್ತ	ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ-580 003.
ಶ್ರೀ ಪಿ. ವಿ. ಕೃಷ್ಣಮೂರ್ತಿ	ಜಿ. ಬಿ. ಜೆ. 510, 12ನೇ ಕ್ರಾಸ್ ಜವಾಹರ್‌ನಗರ, 3ನೇ ಸೆಕ್ಟಾರ್ ಬೆಂಗಳೂರು-560 0037.
ಡಾ. ಹಂಪ ನಾಗರಾಜಯ್ಯ	ಪ್ರಾಧ್ಯಾಪಕರು ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ, ಬೆಂಗಳೂರು-560 056.
ಶ್ರೀ ಎಂ. ಜಿ. ಮಂಜುನಾಥ	ಸಂಶೋಧನಾ ವಿದ್ಯಾರ್ಥಿ ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ, ಬೆಂಗಳೂರು-560 056.

ಡಾ. ಟಿ. ಬಿ. ಬಸವರಾಜು	ಅಧ್ಯಾಪಕರು ತತ್ವಶಾಸ್ತ್ರ ಅಧ್ಯಯನ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ, ಬೆಂಗಳೂರು-560 056.
ಡಾ. ವಿಜಯಕುಮಾರ ಮಹಾನುಭಾವಿಗಳು	ನಂ. 608, ಸಿದ್ಧ, 3ನೇ ವಿಭಾಗ 3ನೇ ಹಂತ, 7ನೇ ಮುಖ್ಯ ಬೀದಿ, ಬಸವೇಶ್ವರನಗರ ಬೆಂಗಳೂರು-560 079.
ಶ್ರೀ ಸಿ. ನಾಗಭೂಷಣ	ಉಪನ್ಯಾಸಕರು ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ.
ಶ್ರೀ ಆರ್. ಲಕ್ಷ್ಮೀನಾರಾಯಣ	ರೀಡರ್, ಕನ್ನಡ ವಿಭಾಗ ಸರ್ಕಾರಿ ಮಹಿಳಾ ಕಾಲೇಜು ಕೋಲಾರ.
ಶ್ರೀಮತಿ ಉಮಾ ಜಗನ್ನಾಥ್	ಸಹಾಯಕ ಗ್ರಂಥ ಪಾಲಕಿ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್ ಬೆಂಗಳೂರು-560 012.
ಶ್ರೀ ಎಂ. ಮಾಧವ ಪೈ	ನಿವೃತ್ತ ಪ್ರಾಂಶುಪಾಲರು 'ಶ್ರೀನಿವಾಸ' ಡಿ. ವಿ. ಎಸ್. ಹೈಸ್ಕೂಲು ಮೈದಾನದ ಸಮೀಪ, ವಿನೋಬನಗರ ಶಿವಮೊಗ್ಗ-577 201.

ವಿವರಗಳಿಗೆ ವ್ಯವಹರಿಸಿ :

ನಿರ್ದೇಶಕರು
ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು 560 056